
ಗೌರಿ ಲಂಕೇಶರ


ಲಂಕೇಶ್

ಡಿಸೆಂಬರ್ 20, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಮೋದನೆ



ಗೌಡಾಸುರ ಸಂಹಾರ

ವಾರದ ಲಜ್ಜೆಗೇಡಿ ಹೇಳಿಕೆ:





"ಮೇಧಾ ಪಾಟ್ಕರ್ ಜೊತೆ ಏನು ಬೇಕಾದರೂ ಮಾತಾಡಲು ನಾವು ಸಿದ್ಧರಿದ್ದೇವೆ. ಆದರೆ ಯಾವ ಕಾರಣಕ್ಕೂ ಅವರನ್ನು ಸಿಂಗೂರಿಗೆ ಹೋಗಲು ಬಿಡುವುದಿಲ್ಲ"

-ಬುದ್ಧದೇವ ಭಟ್ಟಾಚಾರ್ಯ

ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಮುಖ್ಯಮಂತ್ರಿ, ಸಿಂಗೂರಿನಲ್ಲಿ ರೈತರು ನಡೆಸುತ್ತಿದ್ದ ಹೋರಾಟಕ್ಕೆ ಬೆಂಬಲವಾಗಿ ಹೋಗುತ್ತಿದ್ದ ಮೇಧಾ ಅವರನ್ನು ಬಂಧಿಸಿದ ನಂತರ.

ವಾರದ ವಿವೇಕದ ಮಾತು:

"ಕೇಳುವವರು ಕಿವುಡಾಗಿರುವುದರಿಂದಲೇ ಹೇಳುವವರು ಅರಚಿಕೊಳ್ಳಬೇಕಾಗುತ್ತದೆ"


-ಸುಮಂತ ಬ್ಯಾನರ್ಜಿ,

ಹಿರಿಯ ಚಿಂತಕರು, ಹೋರಾಟಗಾರರು ಜಗಳದ ಭಾಷೆಯಲ್ಲಿ ಮಾತಾಡುತ್ತಾರೆ ಎಂಬ ಬಗ್ಗೆ ಮಾತಾಡುತ್ತಾ.

ಚಾರ್ವಾಕ

- ಶಿವಸುಂದರ್-

ನಂಬಿದ್ರೆ ನಂಬಿ ಬಿಟ್ರೆ ಬಿಡಿ:





"ಜನ ಬಯಸಿದಾಗ ರಾಜೀನಾಮೆ ನೀಡುತ್ತೇನೆ"

-ಎಚ್.ಡಿ.ಕುಮಾರಸ್ವಾಮಿ

"ಸಿದ್ದರಾಮಯ್ಯ ಗೆದ್ದರೆ ನನ್ನ ಜ್ಯೋತಿಷಿ ವೃತ್ತಿಯನ್ನೇ ಬಿಡುತ್ತೇನೆ"

-ಜ್ಯೋತಿಷಿ ಜೈನ್

"ಮತದಾರರನ್ನು ಕೊಂಡುಕೊಳ್ಳುವಂತ ನೀಚ ರಾಜಕಾರಣವನ್ನು ನಾನು ಮಾಡುವುದಿಲ್ಲ"

-ಕರುಣಾಕರ, ಎಸ್.ಪಿ. ಅಭ್ಯರ್ಥಿ


"ಕಾಂಗ್ರೆಸ್ ತಾಂತ್ರಿಕವಾಗಿ ಗೆದ್ದಿದೆ. ನಾವು ನೈತಿಕವಾಗಿ ಗೆದ್ದಿದ್ದೇವೆ"

-ಜೆಡಿ(ಎಸ್)

"ಬ್ಯಾಂಕ್‌ನ ಎ.ಟಿ.ಎಂ. ಮಾದರಿಯಲ್ಲೇ ರೈತರಿಗೂ ಎನಿ ಟೈಮ್ ಲೋನ್ ಕೊಡಬೇಕು".

-ಪುಟ್ಟಣ್ಣಯ್ಯ, ರೈತಸಂಘದ ನಾಯಕರು

No Comments







"ಹಣ ಮತ್ತು ಹೆಂಡದ ಸುನಾಮಿಯಲ್ಲಿ ನಾನು ಕೊಚ್ಚಿ ಹೋದೆ".

-ಗುರುಸ್ವಾಮಿ, ಭಿನ್ನಮತೀಯ ಅಭ್ಯರ್ಥಿ

"ಚೆಲುವರಾಯ ಸ್ವಾಮಿಗೆ ಮತಿಭ್ರಮಣೆಯಾಗಿದೆ"

-ಚನ್ನಿಗಪ್ಪ

"ಚೆನ್ನಿಗಪ್ಪರ ಟೀಕೆ ನನಗೆ ಆಶೀರ್ವಾದವಿದ್ದಂತೆ"

-ಚೆಲುವರಾಯಸ್ವಾಮಿ

"ಕೆನೆಪದರದಿಂದ ಜಾತಿಜಾತಿಗಳ ನಡುವೆ ಅಂತರ ಹೆಚ್ಚಲಿದೆ"

-ಪ್ರೊ. ರವಿವರ್ಮ ಕುಮಾರ್

ಸಿಂಗೂರಿನಲ್ಲಿ ಲಾಠಿ ಬೀಸಿದ್ದು ಯಾರ ಪರವಾಗಿ? ಯಾರ ವಿರುದ್ಧವಾಗಿ?

ಪಶ್ಚಿಮ ಬಂಗಾಳದಲ್ಲಿ ಕಾಮ್ರೇಡರು ಮೇಧಾ ಪಾಟ್ಕರ್‌ರನ್ನು ಜೈಲಿಗೆ ಅಟ್ಟಿದ್ದಾರೆ. ಪ್ರಖ್ಯಾತ ಲೇಖಕಿ ಮತ್ತು ಜನಪರ ಹೋರಾಟಗಾರ್ತಿ ಆರುಂಧತಿ ರಾಯ್ ಇನ್ನಿತರರು ಮೊನ್ನೆ ದೆಹಲಿಯ ಸಿ.ಪಿ.ಎಂ.ಪಕ್ಷದ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದ್ದಾರೆ. ಮೇಧಾ ಪಾಟ್ಕರ್ ಮತ್ತು ಆರುಂಧತಿ ರಾಯ್‌ಗಳಿಗೆ ಇದು ಹೊಸದಲ್ಲ. ಅವರು ಜನಪರ ಹಿತಾಸಕ್ತಿಯಿಂದ ಎಲ್ಲೆಲ್ಲಿ ಜನರಿಗೆ ಅನ್ಯಾಯ ನಡೆಯುತ್ತದೆಯೋ ಅಲ್ಲೆಲ್ಲಾ ಪ್ರತಿಭಟನೆ ನಡೆಸುತ್ತಲೇ ಬಂದಿದ್ದಾರೆ. ಅದು ಸಾಮಾನ್ಯವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರದ ವಿರುದ್ಧವಾಗಿರುತ್ತಿತ್ತು ಮತ್ತು ಸಾಮಾನ್ಯವಾಗಿ ಎಡಪಕ್ಷಗಳ ಕಾರ್ಯಕರ್ತರು ಮತ್ತು ಬುದ್ಧಿಜೀವಿಗಳು ಅವರ ಜೊತೆಗೆ ಇರುತ್ತಿದ್ದರು. ಆದರೆ ಈ ಬಾರಿಯ ವಿಶೇಷವೆಂದರೆ ಈ ಪ್ರತಿಭಟನೆ ಪಶ್ಚಿಮ ಬಂಗಾಳದ ಸಿ.ಪಿ.ಎಂ.ಸರ್ಕಾರದ ವಿರುದ್ಧ ಮತ್ತು ಈ ಬಾರಿ ಅವರನ್ನು ಬಂಧಿಸಿದ್ದು, ಹೋರಾಟಗಾರರ ಮೇಲೆ ನಿರ್ದಾಕ್ಷಿಣ್ಯವಾಗಿ ಲಾಠಿಗಳನ್ನು ಬೀಸಿದ್ದು, ಗೋಲಿಬಾರ್ ಮಾಡಿದ್ದು, ಜನಪರ ಸರ್ಕಾರ ಎಂದು ಹೇಳಿಕೊಳ್ಳುವ ಸಿ.ಪಿ.ಎಂ. ನೇತೃತ್ವದ ಎಡ ಸರ್ಕಾರ!

ಹಾಗಿದ್ದರೆ ಸಿ.ಪಿ.ಎಂ. ಸರ್ಕಾರ ಲಾಠಿ ಬೀಸಿದ್ದು ಯಾರ ಪರವಾಗಿ? ಯಾರ ವಿರುದ್ಧ?.

ಈ ಪ್ರಶ್ನೆಯನ್ನು ಆ ಪಕ್ಷದ ನೇತಾರರು ಹಾಕಿಕೊಳ್ಳದಿದ್ದರೂ ಈ ದೇಶದ ಪ್ರಜ್ಞಾವಂತ ಜನತೆ ಮತ್ತು ತಮ್ಮ ಪಕ್ಷ ಜನಪರವಾಗಿದೆ ಎಂದು ನಂಬಿರುವ ಆ ಪಕ್ಷಗಳ ಸಾಮಾನ್ಯ ಕಾರ್ಯಕರ್ತರು ಹಾಕಿಕೊಳ್ಳಲೇ ಬೇಕಿದೆ.

ಬುದ್ಧದೇವ ಭಟ್ಟಾಚಾರ್ಯರು ಪ.ಬಂಗಾಳದಲ್ಲಿ ಅಧಿಕಾರಕ್ಕೆ ಬಂದಮೇಲೆ ಈವರೆಗೆ ಎಡಪಕ್ಷಗಳು ಮತ್ತವರ ಸರ್ಕಾರಗಳು ಹೊದ್ದುಕೊಳ್ಳುತ್ತಿದ್ದ ಪ್ರಗತಿ ಪರತೆಯ ಮುಸುಕೆಲ್ಲಾ ಕಳಚಿಬಿತ್ತು. ಈ ಬಾರಿ ಅಧಿಕಾರದ ಪ್ರಮಾಣವಚನ ಸ್ವೀಕರಿಸಿದ ತಕ್ಷಣ ಬುದ್ಧದೇವರು ತಾವು ಕಾರ್ಮಿಕ ಮತ್ತು ದುಡಿಯುವ ಜನರ ಪರವಾದರೂ ಈ ದೇಶದ ದೊಡ್ಡ ಬಂಡವಾಳಿಗರಿಗಾಗಲೀ, ವಿದೇಶಿ ಬಂಡವಾಳಕ್ಕಾಗಲೀ ವಿರುದ್ಧವಲ್ಲವೆಂದು ಸ್ಪಷ್ಟವಾಗಿ ಘೋಷಿಸಿಬಿಟ್ಟರು. ಅದರಂತೆ ಇಂಡೋನೇಷಿಯಾದ ಸಲೀಂ ಗ್ರೂಪ್ ಕಂಪನಿಗೆ ಸಲಾಮ್ ಹೊಡೆದು ಕರೆತಂದು ಬಂಗಾಳದ 10000 ಎಕರೆಗೂ ಹೆಚ್ಚಿನ ಕೃಷಿಭೂಮಿಯನ್ನು ನೀಡಿ ರೈತರನ್ನು ಒಕ್ಕಲೆಬ್ಬಿಸುವ ಪ್ರಕ್ರಿಯೆ ಪ್ರಾರಂಭವಾಯಿತು. ಹಾಗೆಯೇ ಜಪಾನಿನ ಮಿತ್ಸುಬುಷಿ ಕಂಪನಿ ಕೊಲ್ಕತ್ತದಲ್ಲಿ ಬಂಡವಾಳ ಹೂಡುವಂತೆ ಮನವೊಲಿಸಲು ಇನ್ನಿಲ್ಲದ ರಿಯಾಯಿತಿಗಳನ್ನು ಸೌಕರ್ಯಗಳನ್ನು ಕಲ್ಪಿಸಲಾಯಿತು. ಇದೀಗ ಈ ದೇಶದ ದೊಡ್ಡ ಬಂಡವಾಳಿಗರ ಸರದಿ.

ಬಂಗಾಳದ ಸಿಂಗೂರ್ ಪ್ರಾಂತ್ಯದ ರೈತರ ವ್ಯಥೆಯ ಕಥೆಯಿಂದ ಈ ಪ್ರಕರಣ ಪ್ರಾರಂಭವಾಗುತ್ತದೆ. ಬುದ್ಧದೇವರು ತಮ್ಮ ಪ್ರಥಮ ಪತ್ರಿಕಾಗೋಷ್ಠಿ ನಡೆಸುತ್ತಿರುವಾಗಲೇ ಈ ದೇಶದ ದೊಡ್ಡ ಬಂಡವಾಳಶಾಹಿ ಟಾಟಾ ಸಂಸ್ಥೆಯು ತಾನು ಬಂಗಾಳದಲ್ಲಿ ಒಂದು ಕಡಿಮೆ ವೆಚ್ಚದ ಕಾರು ಉತ್ಪಾದನಾ ಘಟಕವನ್ನು ತೆರೆಯಲು ಇಚ್ಛಿಸಿರುವುದಾಗಿಯೂ ಅದಕ್ಕೆಂದು ತನಗೆ 1000 ಎಕರೆ ಜಮೀನನ್ನು ಕೊಡಬೇಕೆಂದೂ ನೀಡಿದ್ದ ಮನವಿಪತ್ರವನ್ನು ಅಧಿಕಾರಿಯೊಬ್ಬ ಪತ್ರಿಕಾಗೋಷ್ಠಿ ನಡೆಯುತ್ತಿದ್ದ ಸ್ಥಳಕ್ಕೆ ತಂದೊಪ್ಪಿಸಿದ್ದ. ಇದನ್ನು ಓದಿ ಮುಖ್ಯಮಂತ್ರಿಗಳ ಮುಖದಲ್ಲಿ ಅರಳಿದ ನಗುವನ್ನು ಎಲ್ಲಾ ಟಿ.ವಿ.ಚಾನೆಲ್‌ಗಳು ಬಿತ್ತರಿಸಿದ್ದವು. ಆದರೆ ಆಗಲೇ ಈ ಘಟಕ ಸ್ಥಾಪನೆ ಮಾಡಲು ಆಯ್ಕೆಗೊಂಡಿದ್ದ ಸ್ಥಳವಾದ ಸಿಂಗೂರಿನ ರೈತರ ಮುಖದಲ್ಲಿ ಆತಂಕವೂ ಹೆಪ್ಪುಗಟ್ಟಿದ್ದು ಯಾರ ಗಮನಕ್ಕೂ ಬರಲಿಲ್ಲ.

ಸುಮಾರು ಒಂದು ಲಕ್ಷಕ್ಕೆ ಒಂದು ಕಾರು ದಕ್ಕುವ ಬಡವರ ಕಾರೆಂಬ ಈ ಟಾಟಾದ ಯೋಜನೆಗೆ ಅವರು ದುರ್ಗಾಪುರ ಹೈವೆಗೆ ಅಂಟಿಕೊಂಡಿರುವ, ಕೊಲ್ಕತ್ತಾಗೆ ಅನತಿದೂರದಲ್ಲೇ ಇರುವ ಸಿಂಗೂರಿನ 1000 ಎಕರೆ ಜಮೀನನ್ನು ತಮ್ಮ ವಶಕ್ಕೆ ಕೊಡಬೇಕೆಂದು ಆಗ್ರಹಿಸಿದ್ದರು. ಕೂಡಲೇ, ಪ್ರಜಾತಾಂತ್ರಿಕ ವಿಕೇಂದ್ರೀಕರಣದ ಬಗ್ಗೆ ಉದ್ದುದ್ದ ಮಾತಾಡುವ ಬಂಗಾಳದ ಎಡ ಸರ್ಕಾರ ಯಾವ ಗ್ರಾಮ ಪಂಚಾಯತ್, ಜಿಲ್ಲಾ ಪಂಚಾಯತ್‌ಗಳ ಒಪ್ಪಿಗೆಯನ್ನು ಕೇಳದೆ ಜಮೀನನ್ನು ಮಂಜೂರು ಮಾಡಿತು.

ಆದರೆ ಸಿಂಗೂರಿನ ಜನತೆ ತಮ್ಮ ಬದುಕಿನ ಪ್ರಧಾನ ಆಸರೆಯಾಗಿದ್ದ ಭೂಮಿಯನ್ನು ಕಳೆದುಕೊಳ್ಳಲು ಸಿದ್ಧರಿರಲಿಲ್ಲ. ಏಕೆಂದರೆ ಸರ್ಕಾರ ಹೇಳುವಂತೆ ಅದು ಬೀಳು ಭೂಮಿಯೂ ಆಗಿರಲಿಲ್ಲ ಅಥವಾ ಒಂದು ಬೆಳೆ ಮಾತ್ರ ತೆಗೆಯುವ ಏಕ ಬೆಳೆ ಕೃಷಿ ಭೂಮಿಯೂ ಆಗಿರಲಿಲ್ಲ. ಆದರೆ ಆ ಜಮೀನನ್ನು ವಶಪಡಿಸಿಕೊಂಡು ಟಾಟಾಗಳಿಗೆ ಪರಭಾರೆ ಮಾಡಬೇಕೆಂಬ ಏಕೈಕ ಉದ್ದೇಶದಿಂದ ಎಡ ಸರ್ಕಾರ ಅದು ಪಾಳುಭೂಮಿ ಎಂದು ಘೋಷಿಸಿತು. ವಾಸ್ತವವಾಗಿ ಸಿಂಗೂರಿನಲ್ಲೇ ಕೃಷಿಯೋಗ್ಯವಲ್ಲದ ಪಾಳು ಭೂಮಿ ಇದೆ. ಆದರೆ ಟಾಟಾದವರಿಗೆ ಅದರ ಮೇಲೆ ಆಸಕ್ತಿ ಇಲ್ಲ. ಏಕೆಂದರೆ ಅದನ್ನು ಅಭಿವೃದ್ಧಿಪಡಿಸಬೇಕಾದ ವೆಚ್ಚ ಹೆಚ್ಚುವರಿಯಾಗುತ್ತದಲ್ಲ! ಇದಕ್ಕೆ ವೆಚ್ಚ ಮಾಡಿದರೆ ಲಾಭದ ದರ ಕಡಿಮೆಯಾಗುತ್ತದಲ್ಲ. ಎಡ ಸರ್ಕಾರ ಯಾವ ಕಾರಣದಿಂದಲೂ ಅವರ ಲಾಭದ ದರ ಕುಗ್ಗದಂತೆ ನೋಡಿಕೊಳ್ಳುವ ಆಶ್ವಾಸನೆ ಕೊಟ್ಟ ನಂತರವೇ ಟಾಟಾದವರು ಬಂಗಾಳಕ್ಕೆ ಬಂದದ್ದು.



ಇಷ್ಟು ಮಾತ್ರವಲ್ಲ, ಟಾಟಾದವರ ಲಾಭ ಖಾತರಿ ಮಾಡಲು ಸರ್ಕಾರ ಕೊಡುತ್ತಿರುವ ರಿಯಾಯಿತಿಗಳು ಒಂದೊಂದಲ್ಲ. ಉದಾಹರಣೆಗೆ ಇಂಥಾ ದೊಡ ಯೋಜನೆಗಳು ಜಾರಿಯಾಗುವಾಗ ಆಗಲೇ ಬೇಕಾದ ಪರಿಸರದ ಮೇಲಿನ ಪರಿಣಾಮದ ಅಧ್ಯಯನವನ್ನು ಕಡ್ಡಾಯ ಮಾಡಿಲ್ಲ. ಈ ಜಮೀನನ್ನು ವಶಪಡಿಸಿ ಕೊಳ್ಳಲು ಸರ್ಕಾರಕ್ಕೆ 140 ಕೋಟಿ ಖರ್ಚಾದರೆ ಟಾಟಾ ಕೊಡುತ್ತಿರುವುದು ಕೇವಲ 20 ಕೋಟಿ, ಅದೂ ಐದು ವರ್ಷಗಳಲ್ಲಿ! ಜಮೀನನ್ನು ಕೊಳ್ಳುವಾಗ ಕಡ್ಡಾಯವಾಗಿ ಸರ್ಕಾರಕ್ಕೆ ಪಾವತಿಸಲೇ ಬೇಕಾದ ಸ್ಟಾಂಪ್ ಡ್ಯೂಟಿಯಿಂದಲೂ ಟಾಟಾಗೆ ವಿನಾಯಿತಿಯನ್ನು ನೀಡಲಾಗಿದೆ. ಕಾರ್ಖಾನೆ ಕೆಲಸ ಪ್ರಾರಂಭಿಸುವತನಕ ನೀರನ್ನು ಪುಕ್ಕಟೆಯಾಗಿ ಒದಗಿಸಲಾಗುವುದು. ಅಷ್ಟು ಮಾತ್ರವಲ್ಲ, ಇದು ಕೈಗಾರಿಕೆಯೇ ಆದರೂ ವಿದ್ಯುತ್ತನ್ನು ಗೃಹಬಳಕೆ ದರದಲ್ಲಿ ಒದಗಿಸಬೇಕೆಂಬ ಷರತ್ತನ್ನು ಟಾಟಾ ಹಾಕಿದೆ.

ಈ ರೀತಿ ರೈತರ ಬದುಕನ್ನು ಬೀದಿ ಪಾಲು ಮಾಡಿ ಟಾಟಾದವರ ಖಜಾನೆ ತುಂಬಿಸುವ ಕಮ್ಯುನಿಸ್ಟ್ ಸರ್ಕಾರದ ಕುತಂತ್ರಗಳ ವಿರುದ್ಧ ಸಿಂಗೂರಿನ ರೈತರು ರಾಜಿ ಇಲ್ಲದ ಹೋರಾಟವನ್ನು ಪ್ರಾರಂಭಿಸಿದ್ದಾರೆ. ಸತತವಾಗಿ ರಾಸ್ತಾ ರೋಖೋ, ಬಂದ್, ಅಸಹಕಾರ ಚಳವಳಿ ಇತ್ಯಾದಿಗಳನ್ನು ನಡೆಸುತ್ತಿದ್ದಾರೆ. ರಾಜಕೀಯ ಪಕ್ಷಗಳು ಇದರ ದುರ್ಲಾಭವನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿವೆ. ಆದರೆ ಜನ ಯಾರ ಕುತಂತ್ರಗಳಿಗೂ ಬಗ್ಗದೆ ಹೋರಾಟ ನಡೆಸಿದ್ದಾರೆ. ಇದರ ಭಾಗವಾಗಿಯೇ ಮೊನ್ನೆ ಸೆಪ್ಟೆಂಬರ್ 26 ರಂದು ರೈತರು ನಡೆಸಿದ ಹೋರಾಟದ ಮೇಲೆ ಕಮ್ಯುನಿಸ್ಟ್ ಸರ್ಕಾರ ಅತ್ಯಂತ ಕ್ರೂರವಾಗಿ ಲಾಠಿ ಚಾರ್ಜ್ ನಡೆಸಿ 72 ಅಮಾಯಕರನ್ನು ಜೈಲಿಗೆ ತಳ್ಳಿದೆ. ಅವರುಗಳ ಮೇಲೆ ಕೊಲೆ ಮತ್ತು ಅಕ್ರಮ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರೆಂಬ ಸುಳ್ಳು ಕೇಸುಗಳನ್ನು ಹಾಕಲಾಗಿದೆ. ಈಗಾಗಲೇ ರಾಜ್ ಕುಮಾರ್ ಭುಲ್ ಎಂಬ 26 ವರ್ಷದ ಯುವಕ ಅಸುನೀಗಿ ಸಿಂಗೂರ್ ಹೋರಾಟದ ಮೊಟ್ಟಮೊದಲ ಹುತಾತ್ಮನೂ ಆಗಿದ್ದಾನೆ. ಇದೀಗ ಕಳೆದವಾರ ಲಾಠಿಚಾರ್ಜ್, ಗೋಲಿಬಾರ್, ಮೇಧಾ ಪಾಟ್ಕರರ ಬಂಧನ.... ಹೆಚ್ಚುಕಡಿಮೆ ತುರ್ತುಸ್ಥಿತಿ ಸೃಷ್ಟಿ ಮಾಡಲಾಗಿದೆ.

ಪ. ಬಂಗಾಳದ ಎಡ ಸರ್ಕಾರ ತನ್ನ ಇಂಥೆಲ್ಲಾ ಕೃತ್ಯಗಳಿಂದ ಟಾಟಾದವರನ್ನು ಸಂತೃಪ್ತಿಪಡಿಸಬಹುದು. ಇದರಿಂದ ಉತ್ತೇಜಿತರಾಗಿ ಇನಷ್ಟು ದೇಶೀಯ ಮತ್ತು ವಿದೇಶೀಯ ಬಂಡವಾಳಿಗರೂ ಬಂಗಾಳಕ್ಕೆ ಧಾವಿಸಬಹುದು. ಹೇಗಿದ್ದರೂ ಅವರಿಗೆಂದು ಬಂಗಾ… ಸರ್ಕಾರ 60000ಎಕರೆ ಕೃಷಿ ಭೂಮಿಯನ್ನು ಕೊಡಲು ಮೀಸಲಿರಿಸಿದೆ. ಆದರೆ ರೈತಾಪಿ ಮತ್ತು ದುಡಿಯುವ ಜನತೆ ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷಗಳು ಇತರ ಬಂಡವಾಳಶಾಹಿ ಪರ ಪಕ್ಷಗಳಿಗಿಂತ ಯಾವುದೇ ರೀತಿಯಿಂದಲೂ ಭಿನ್ನವಲ್ಲವೆಂದು ಅರ್ಥ ಮಾಡಿಕೊಳ್ಳಲು ಪ್ರಾರಂಭಿಸಿದ್ದಾರೆ.

ಸಿಂಗೂರಿನ ಕಥೆಯ ಸಾರಾಂಶವಿಷ್ಟೇ: ಬಂಡವಾಳಶಾಹಿ ಆಸಕ್ತಿ ಮತ್ತು ದುಡಿಯುವ ಜನತೆಯ ಆಸಕ್ತಿಗಳು ಪರಸ್ಪರ ವಿರುದ್ಧವಾಗಿರುತ್ತದೆ. ತಾವು ಎರಡರ ನಡುವೆ ಅನುಸಂಧಾನ ಮಾಡುತ್ತೇವೆ ಎನ್ನುವವರು ಮಾತುಗಳಲ್ಲಿ ಜನರ ಪರವಾಗಿದ್ದರೂ ಸಾರಾಂಶದಲ್ಲಿ ಬಲಾಢ್ಯರಾದ ಬಂಡವಾಳಶಾಹಿಗಳ ಬೆಂಗಾವಲಿಗೇ ನಿಲ್ಲುತ್ತಾರೆ. ಅವರು ಕಾಂಗ್ರೆಸ್ಸಿಗರಾದರೂ ಅಷ್ಟೇ, ಕಮ್ಯುನಿಷ್ಟರಾದರೂ ಅಷ್ಟೆ.

ಇವೆಲ್ಲಕ್ಕೂ ಅಭಿವೃದ್ಧಿ ಎಂಬ ಹೆಸರನ್ನಿಟ್ಟು ಕಾಮ್ರೇಡರು ಜನತೆಯನ್ನು ಒಪ್ಪಿಸಲು ಯತ್ನಿಸುತ್ತಿದ್ದಾರೆ. ಬಂಗಾಳದ ರ್‍ಯಾಲಿಯಲ್ಲಿ ಮಾತಾಡುತ್ತಾ ಬುದ್ಧದೇವರು "ಕೈಗಾರಿಕೆಯಿಲ್ಲದೆ ಯಾವುದೇ ದೇಶ ಅಭಿವೃದ್ಧಿಯಾಗದು. ಬಂಡವಾಳಶಾಹಿ ಇರಲಿ, ಸಮಾಜವಾದಿಯಿರಲಿ ಕೈಗಾರಿಕೀಕರಣ ಅಗತ್ಯ" ಎಂದು ಸ್ಪಷ್ಟವಾಗಿ ಹೇಳಿ ಲೆನಿನ್‌ರ ಆತ್ಮ ಸಮಾಧಿಯಲ್ಲೂ ಗಾಬರಿಗೊಳ್ಳುವಂತೆ ಮಾಡಿದ್ದಾರೆ.

ಹಾಗಿದ್ದ ಮೇಲೆ ಕಾಮ್ರೇಡರು ಈ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡಲೇ ಬೇಕಾಗುತ್ತದೆ...

-ಸಮಾಜವಾದಿ ಅಭಿವೃದ್ಧಿ ಪಥಕ್ಕೂ ಬಂಡವಾಳಶಾಹಿ ಅಭಿವೃದ್ಧಿ ಪಥಕ್ಕೂ ಏನೂ ವ್ಯತ್ಯಾಸ ಇಲ್ಲವೇ?

-ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಜನರ ಪಾ… ವೇನು?

- ಪಶ್ಚಿಮ ಬಂಗಾಳದಲ್ಲಿ ಅಭಿವೃದ್ಧಿ ಪಥಕ್ಕೂ ದೇಶ… ಬೂರ್ಜ್ವಾ ಪಕ್ಷಗಳ ಅಭಿವೃದ್ಧಿ ಪಥಕ್ಕೂ ಸಣ್ಣಪುಟ್ಟ ವ್ಯತ್ಯಾಸವಿದ್ದರೂ ಯಾವ ಮೂಲಭೂತ ವ್ಯತ್ಯಾಸ ಇಲ್ಲದಿರುವಾಗ ಅದು ನಿರುದ್ಯೋಗ ನಿವಾರ… ಮಾಡಬಲ್ಲದೆ? ನಿವಾರಣೆ ಮಾಡಬಹುದಾದ… ಬೂರ್ಜ್ವಾ ಪಕ್ಷಗಳ ವಿರುದ್ಧದ ತೋರಿಕೆ… ಪ್ರತಿರೋಧಕ್ಕೆ ಅರ್ಥವೇನು?
- ನಿರುದ್ಯೋಗ ನಿವಾರಿಸುವುದಾದರೆ ಯಾವು… ಬಗೆಯ ಅಭಿವೃದ್ಧಿ ಪರವಾಗಿಲ್ಲ ಎನ್ನುವುದಾದ… ಸಮಾಜವಾದಿ ಅಭಿವೃದ್ಧಿ ಎಂಬುದಕ್ಕೆ ಡಿಕ್ಷನರಿಯ… ನಿರುದ್ಯೋಗ ಇಲ್ಲದಿರುವುದು ಎಂದು ಮಾ… ಅರ್ಥವೇ?
- ರೈತರನ್ನು ಒಕ್ಕಲೆಬ್ಬಿಸುವುದರ ಮೂಲಕ ಗ್ರಾಮೀ… ಸಂಪನ್ಮೂಲವನ್ನು ಬಂಡವಾಳಶಾಹಿ ಅಭಿವೃದ್ಧಿ… ಬಳಸಿದಂತಾಗುವುದಿಲ್ಲವೇ?
- ಅಭಿವೃದ್ಧಿ ಎಂದರೆ ವರ್ಗಾತೀತವಾದದ್ದೆ?
- ಇತರ ಕಡೆ ಪ್ರಜಾಪ್ರಭುತ್ವದ ಪೂಜಾರಿಗಳಂತಾ… ತ್ತಿದ್ದರೂ ಈ ಅಭಿವೃದ್ಧಿ ಯೋಜನೆಯ ಪ್ರಶ್ನೆಗ… ಬಂದರೆ ಅವೆಲ್ಲವನ್ನೂ ಗಾಳಿಗೆ ತೂರಿ ಬಂಡವಾಳಶಾಹಿಗಳ ಪರವಾಗಿ ಪ್ರಭುತ್ವ ಹಿಂಸೆ ಮತ್ತು … ಹಿಂಸೆಯನ್ನು ಬಳಸುತ್ತಿರುವ ಸಿ.ಪಿ.ಎಂ. … ನಕ್ಸಲರು ಬಡವರ ಪರವಾಗಿ ಪ್ರಯೋಗಿಸ… ವರ್ಗ ಹೋರಾಟವನ್ನು ಮಾತ್ರ ಹಿಂಸೆಯೆಂ… ಕರೆಯುವುದೇಕೆ?

-ಶಿವಸುಂದರ್

ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ರಾಜಕಾರಣಿಗಳು ಆಡಿದ ಅಣಿಮುತ್ತುಗಳು ಈ ವಾರದ 'ಸೂಕ್ತಿ'ಗಳಾಗಿವೆ. ಎಂಜಾಯ್ ಮಾಡಿ

ಈ ಪ್ರಜಾಪ್ರಭುತ್ವದಲ್ಲಿ ದಲಿತರಿಗೆ ನ್ಯಾಯವಿದೆಯೇ?

ಕಂಡಹಾಗೆ



ಮಾರ್ಚ್ 11, 2000 ದಂದು ಕಂಬಾಲಪಲ್ಲಿಯಲ್ಲಿ ಏಳು ಜನ ದಲಿತರನ್ನು ಅಮಾನುಷವಾಗಿ ದಹನ ಮಾಡಲಾಯಿತು. ಈ ಪ್ರಕರಣ ನಡೆದಾಗ ಸ್ಥಳೀಯ ಸರ್ಕಲ್ ಇನ್ಸ್‌ಪೆಕ್ಟರ್ ದಲಿತನಾಗಿದ್ದ, ಅಲ್ಲಿನ ಶಾಸಕರು, ಸಂಸದರು ದಲಿತ ಸಮುದಾಯಕ್ಕೆ ಸೇರಿದವರಾಗಿದ್ದರು. ಅಂದಿನ ಸರ್ಕಾರದಲ್ಲಿ ಗೃಹಮಂತ್ರಿಗಳೂ ದಲಿತರೇ ಆಗಿದ್ದರು. ಇವರೆಲ್ಲರು ನಿಗಾ ವಹಿಸಿಯೇ ಕಂಬಾಲಪಲ್ಲಿಯ ದಲಿತರನ್ನು ಕೊಂದವರ ವಿರುದ್ಧ FIR ಅನ್ನು ದಾಖಲಿಸಿ, ವಿಚಾರಣೆ ನಡೆಸಲಾಯಿತು.

ಆದರೆ ಫಲಿತಾಂಶವೇನು? ಘಟನೆ ನಡೆದು ಆರು ವರ್ಷಗಳ ನಂತರ ನ್ಯಾಯಾಲಯದಿಂದ ಹೊರಬಿದ್ದ ತೀರ್ಪು ಯಾರಿಗೂ ಶಿಕ್ಷೆ ನೀಡಲಿಲ್ಲ, ಇಂತಹ ಪ್ರಕರಣಗಳು ಮುಂದೆ ನಡೆಯದಂತೆ ಎಚ್ಚರ ವಹಿಸಬೇಕೆಂದು ಸರ್ಕಾರಕ್ಕೂ ಸಲಹೆ ನೀಡಲಿಲ್ಲ. ದಲಿತರನ್ನು ಜೀವಂತವಾಗಿ ಸುಟ್ಟದ್ದು ನ್ಯಾಯಾಲಯದಲ್ಲಿ ಸಾಕ್ಷಿಗಳಿಲ್ಲದೆ ಬಿದ್ದುಹೋಯಿತು. ಅಪರಾಧಿಗಳು ಬಚಾವ್ ಆದರು.

ಏಳು ಜನ ದಲಿತರು ಜೀವಂತವಾಗಿ ಭಸ್ಮವಾದರು, ಉಳಿದಿರುವ ಅವರ ವಂಶದವರು ಸವರ್ಣೀಯರಿಗೆ ಬೆದರಿ ಬದುಕಿದ್ದರೂ ಸತ್ತಂತಾಗಿದ್ದಾರೆ. ಇವರನ್ನು ಮತ್ತು ನ್ಯಾಯವನ್ನು


ಕಂಬಾಲಪಲ್ಲಿ ದುರಂತ

ಕೊಂದವರು ಕೇಕೆ ಹಾಕುತ್ತಿದ್ದಾರೆ. ದಲಿತರ ಸಾವು-ನೋವುಗಳಿಗೆ ನಮ್ಮ ಪ್ರಜಾತಂತ್ರದಲ್ಲಿ ಯಾವ ಸ್ಥಾನವೂ ಇಲ್ಲದಂತಾಗಿದೆ.

ಕಂಬಾಲಪಲ್ಲಿ ಒಂದೇ ಅಲ್ಲ, ದಲಿತರ ಮೇಲಿನ ದೌರ್ಜನ್ಯ ತಡೆ ಕಾಯಿದೆ ಜಾರಿ ಆದ ನಂತರ ದೇಶದಲ್ಲಿ ಕಂಬಾಲಪಲ್ಲಿಯಂತಹದ್ದೇ ನೂರಾರು ಅಮಾನವೀಯ ಪ್ರಕರಣಗಳು ನಡೆದಿದೆ. ಆದರೆ ಕಂಬಾಲಪಲ್ಲಿಯಂತೆಯೇ ಅವುಗಳಲ್ಲೂ ಶಿಕ್ಷೆ ನೀಡಿದ್ದು, ನ್ಯಾಯ ದೊರಕಿದ್ದು ಕಡಿಮೆ. ಎಸ್‌ಸಿ, ಎಸ್‌ಟಿ ಕಮೀಷನ್ ನೀಡಿರುವ ಲೆಕ್ಕಾಚಾರದ ಪ್ರಕಾರವೇ ಪ್ರತಿವರ್ಷ ಆರು ಲಕ್ಷಕ್ಕಿಂತಲೂ ಹೆಚ್ಚು ಪ್ರಕರಣಗಳು ದೌರ್ಜನ್ಯ ತಡೆ ಕಾಯಿದೆ ಅಡಿ ದಾಖಲಾಗುತ್ತವೆ. ಅವುಗಳಲ್ಲಿ ಕೇವಲ ಒಂದು ಸಾವಿರ ಪ್ರಕರಣಗಳ ಕುರಿತು ವಿಚಾರಣೆ ನಡೆಯುತ್ತದೆ. ಕೊನೆಗೆ ಆ ಸಾವಿರ ವಿಚಾರಣೆಗಳ ನಂತರ ಬೆರಳೆಣಿಕೆಯಷ್ಟು ಕೇಸುಗಳಲ್ಲಿ ಶಿಕ್ಷೆ ವಿಧಿಸಲಾಗುತ್ತದೆ. ಒಂದು ಕಡೆ ಆರು ಲಕ್ಷಕ್ಕಿಂತ ಹೆಚ್ಚು ಪ್ರಕರಣಗಳು, ಇನ್ನೊಂದು ಕಡೆ ಬೆರಳೆಣಿಕೆಯಷ್ಟು ಶಿಕ್ಷೆಗಳು. ಇದೆಲ್ಲಿಯ ನ್ಯಾಯ? ಇದು ಯಾವ ಪ್ರಜಾಪ್ರಭುತ್ವ?

ಕಂಬಾಲಪಲ್ಲಿಯ ದುರಂತ ಕುರಿತ ಕೇಸು ಬಿದ್ದು ಹೋಗಿದ್ದಕ್ಕೆ ಏನು ಕಾರಣ? ಉತ್ತರ ಸರಳ: ಪ್ರಕರಣವನ್ನು ಕಣ್ಣಾರೆ ಕಂಡ ಸಾಕ್ಷಿಗಳಿಗೆ ನಮ್ಮ ವ್ಯವಸ್ಥೆ ರಕ್ಷಣೆ ನೀಡುವುದಿಲ್ಲ, ಸವರ್ಣೀಯರು ಬದುಕಲು ಬಿಡುವುದಿಲ್ಲ, ಸತ್ತ ತಮ್ಮವರಿಗೆ ಆದದ್ದೇ ತಮಗೂ ಆಗುತ್ತದೆಂದು ಹೆದರಿ ಅವರು ಸಾಕ್ಷಿ ನೀಡುವುದಿಲ್ಲ, ನಮ್ಮ ನ್ಯಾಯಾಲಯಗಳಿಗೆ ಸತ್ತ ಹೆಣಗಳು ಸಾಕ್ಷಿ ಆಗುವುದಿಲ್ಲ, ಇವೆಲ್ಲದರಿಂದ ಕೊನೆಗೆ ಸಾಯುವುದು ನ್ಯಾಯ, ಗೆಲ್ಲುವುದು ಪಾಳೇಗಾರಿಕೆ ಹಾಗೂ ಜಾತಿ ದೌರ್ಜನ್ಯ.

ಮೊನ್ನೆ ಮಹಾರಾಷ್ಟ್ರದ ಖೈರ್‌ಲಾಂಜಿಯಲ್ಲಿ ಆದದ್ದನ್ನೇ ನೋಡಿ. ಈ ಪ್ರಕರಣ ಕುರಿತಂತೆ ದಲಿತರು ನಡೆಸಿದ ಪ್ರತಿಭಟನೆಗಳು ಮತ್ತು ಸರ್ಕಾರ ಅವರ ವಿರುದ್ಧ ನಡೆಸಿದ ಲಾಠಿ ಪ್ರಹಾರಗಳು ನಮ್ಮ ಮಾಧ್ಯಮಗಳಲ್ಲಿ ಸುದ್ದಿಯಾದವೇ ಹೊರತು ದಲಿತ ಕುಟುಂಬದ ನಾಲ್ವರ ಮೇಲೆ ನಡೆದ ಘೋರ ಅಪರಾಧವಲ್ಲ. ಕಂಬಾಲಪಲ್ಲಿಯಲ್ಲಿ ದಲಿತರು ಜೀವಂತ ದಹನವಾದರೆ ಖೈರ್‌ಲಾಂಜಿಯಲ್ಲಿ ನಡೆದದ್ದೂ ಅದಕ್ಕಿಂತ ಬರ್ಬರ.

ಅಂದು ಸೆಪ್ಟೆಂಬರ್ 29 ನೇ ತಾರೀಖು. ತಮ್ಮ ಸಂಬಂಧಿಯೊಬ್ಬನಿಗೆ ಆ ಹಳ್ಳಿಯ ಭೂಮಾಲೀಕನೊಬ್ಬ ಹೊಡೆದಿದ್ದ ಎಂದು ಸುರೇಖಾ ಎಂಬ 44 ವರ್ಷದ ದಲಿತ ಮಹಿಳೆ ಪೊಲೀಸರಿಗೆ ದೂರು ನೀಡಿದ್ದಳು. ಆಕೆ ನೀಡಿದ ಸಾಕ್ಷಿಯ ಮೇಲೆ 14 ಜನರನ್ನು ಪೊಲೀಸರು ಬಂಧಿಸಿದರಾದರೂ ಅಂದೇ ಅವರನ್ನು ಬಿಡುಗಡೆ ಮಾಡಿದರು. ಇದು ತಮಗಾದ ಅವಮಾನ ಎಂದು ಪೊಲೀಸ್ ಠಾಣೆಯಿಂದ ಖೈರ್‌ಲಾಂಜಿಗೆ ನುಗ್ಗಿದ ಅಪರಾಧಿಗಳು ಸುರೇಖಾಳ ಮನೆ ಮೇಲೆ ದಾಳಿ ಇಟ್ಟರು.


ಸುರೇಖಾ ಮತ್ತು ಆಕೆಯ 18 ವರ್ಷದ ಮಗಳು ಪ್ರಿಯಾಂಕಾಳನ್ನು ಹೊಡೆದರು, ಬಡಿದರು, ಹಳ್ಳಿಯ ಜನರ ಮುಂದೆಯೇ ಗ್ಯಾಂಗ್ ರೇಪ್ ಮಾಡಿದರು. ಅಷ್ಟೇ ಅಲ್ಲ ಇದೆಲ್ಲ ನಡೆಯುತ್ತಿದ್ದಾಗ ಸುರೇಖಾಳ ಪುತ್ರರಾದ ರೋಷನ್ (23) ಮತ್ತು ಸುಧೀರ್ (21)ರವರ ಗುಪ್ತಾಂಗಗಳನ್ನು, ಕಿವಿ, ಮೂಗುಗಳನ್ನು ಕತ್ತರಿಸಿದ ಅಮಾನುಷರು ಅವುಗಳನ್ನು ಗಾಳಿಯಲ್ಲಿ ತೂರಾಡುತ್ತಾ ಅಟ್ಟಹಾಸಗೈದರು. ಆನಂತರ ಅವರೆಲ್ಲರನ್ನು ಕೊಂದು ಹಳ್ಳಿಯ ರಸ್ತೆಯಲ್ಲೇ ಬಿಸಾಡಿದರು. ಇಷ್ಟೆಲ್ಲಾ ಆದ ನಂತರ ಸುರೇಖಾಳ ದಲಿತ ಕುಟುಂಬದ ಮೇಲೆ ಅವರಿಗಿದ್ದ ದ್ವೇಷ ಕಡಿಮೆ ಆಯಿತೆ? ಇಲ್ಲ, ಅವರ ತಾಂಡವನೃತ್ಯ ಅಂತ್ಯಗೊಂಡಿದ್ದು ಕೆಲವು ಭೂಮಾಲೀಕರು ಸುರೇಖಾ ಮತ್ತಾಕೆಯ ಪುತ್ರಿ ಪ್ರಿಯಾಂಕಾಳ ಸತ್ತ ದೇಹಗಳನ್ನು ಮತ್ತೆ ಮತ್ತೆ ರೇಪ್ ಮಾಡಿದ ನಂತರ.

ಐ ವಿಟ್ನೆಸ್ ಎನ್ನಿಸುವ ಈ ಬರ್ಬರ ಕೃತ್ಯಗಳಿಗೆ ಸಾಕ್ಷಿ ಸುರೇಖಾಳ ಗಂಡ ಭಯ್ಯಾಲಾಲ್ ಮತ್ತು ಆತನ ಸಂಬಂಧಿ ರಾಜನ್. ಭೂಮಾಲೀಕರು ತನ್ನ ಹೆಂಡತಿ ಮತ್ತು ಮಕ್ಕಳ ಮೇಲೆ ಇಂತಹ ದೌರ್ಜನ್ಯ ನಡೆಸುತ್ತಿದ್ದಾಗ ಹತ್ತಿರದಲ್ಲೇ ಭಯಭೀತರಾಗಿ ಭಯ್ಯಾಲಾಲ್ ಅಡಗಿ ಕೂತಿದ್ದರು.

ಸುರೇಖಾ ಮತ್ತಾಕೆಯ ಮಕ್ಕಳ ಸಾವಿಗೆ ಕಾರಣ ಯಾವುದೆಂದರೆ ಆಕೆ ಸ್ವಾಭಿಮಾನದ ಬದುಕನ್ನು ನಡೆಸುತ್ತಿದ್ದದ್ದು. ಸ್ಥಳೀಯ ಭೂಮಾಲೀಕರು ವಶಪಡಿಸಿಕೊಂಡಿದ್ದ ತಮ್ಮ ಜಮೀನನ್ನು ವಾಪಸ್ಸು ಪಡೆದು, ತನ್ನ ಭೂಮಿಯನ್ನು ತಾನೇ ಉತ್ತಿ, ಮಕ್ಕಳಿಗೆ ವಿದ್ಯಾಭ್ಯಾಸ ನೀಡಿ, ಚಿಕ್ಕ ಗುಡಿಸಲಿನಲ್ಲೂ ತಲೆ ಎತ್ತಿ ಬದುಕಿದ್ದೇ ದಲಿತೆ ಸುರೇಖಾ ಮಾಡಿದ ತಪ್ಪು ಭೂಮಾಲೀಕರ ಕಣ್ಣಿನಲ್ಲಿ. ಇದನ್ನು ಸಹಿಸಲಾಗದೇ ಸುರೇಖಾಳ ಸಂಬಂಧಿ ಸಿದ್ದಾರ್ಥ ಎಂಬಾತನಿಗೆ ಭೂಮಾಲೀಕರು ಹೊಡೆದಿದ್ದರು. ಇದನ್ನು ಪ್ರತಿಭಟಿಸಿ ಆಕೆ ಪೊಲೀಸರಿಗೆ ದೂರು ನೀಡಿದ್ದಕ್ಕೆ ಕುಪಿತರಾದ ಭೂಮಾಲೀಕರು ಅವಳ ಮೇಲೆ, ಅವಳ ಇಡೀ ಸಂಸಾರದ ಮೇಲೆ ಹೀಗೆ ಸೇಡು ತೀರಿಸಿಕೊಂಡರು.

ಇಂತಹ ಒಂದು ಪ್ರಕರಣ ನಡೆದರೂ ನಮ್ಮ ವ್ಯವಸ್ಥೆ ಮಾಡಿದ್ದೇನು ಗೊತ್ತೆ? ಅಪರಾಧಿಗಳನ್ನು ಬಂಧಿಸುವ ಬದಲಾಗಿ, ಸಾಕ್ಷಿಗಳಾದ ಭಯ್ಯಾಲಾಲ್ ಮತ್ತು ರಾಜನ್‌ಗೆ ರಕ್ಷಣೆ ನೀಡುವ ಬದಲಾಗಿ, ಇಡೀ ಪ್ರಕರಣವನ್ನೇ ಮುಚ್ಚಿ ಹಾಕಲು ಪ್ರಯತ್ನಿಸಿತು.

ಕಂಬಾಲಪಲ್ಲಿಯಲ್ಲಿ ದಲಿತರ ಸಾವಿಗೆ ಕಾರಣರಾದ ಜನರಿಗೆ ಶಿಕ್ಷೆ ಆಗಲಿಲ್ಲ, ಹೋಗಲಿ, ಖೈರ್‌ಲಾಂಜಿಯ ಸುರೇಖಾ ಮತ್ತವಳ ಕುಟುಂಬವನ್ನು ಕೊಂದ ಜನರಿಗಾದರೂ ಶಿಕ್ಷೆ ಆಗುತ್ತದೆಯೇ ಎಂದು ನೋಡಿದರೆ ಅದೂ ಅನುಮಾನಾಸ್ಪದವೇ.


ಖೈರ್‌ಲಾಂಜಿ ದುರಂತ

ಏಕೆಂದರೆ ಪೊಲೀಸರು ದಾಖಲಿಸಿಕೊಂಡಿರುವ FIR ನಲ್ಲಿ ಎಷ್ಟು ದೋಷಗಳಿವೆ ಎಂದರೆ ಭಯ್ಯಾಲಾಲ್ ಅದನ್ನು ವಿರೋಧಿಸುತ್ತಿದ್ದಾರೆ. ಮಾತ್ರವಲ್ಲ ಸುರೇಖಾ ಸಮೇತ ಸತ್ತವರ ಮರಣೋತ್ತರ ಪರೀಕ್ಷೆ ನಡೆಸಿರುವ ಸರ್ಕಾರಿ ವೈದ್ಯರು ಅವರ ದೇಹಗಳ ಮೇಲೆ ಕಣ್ಣಿಗೆ ಕಾಣಿಸುವಂತೆಯೆ ಇದ್ದ ಗಾಯಗಳನ್ನು, ಕತ್ತರಿಸಿದ್ದ ಗುಪ್ತಾಂಗ, ಮೂಗು, ಕಿವಿಗಳ ಮಾಹಿತಿಗಳನ್ನು ವೈದ್ಯರು ಗಣನೆಗೆ ತೆಗೆದುಕೊಂಡಿಲ್ಲ.

ಇದೆಲ್ಲದರಿಂದ ಕೊನೆಗೆ ಏನಾಗುತ್ತದೆ ಎಂದು ಊಹಿಸುವುದು ಸುಲಭ. ಭೂಮಾಲೀಕರ ಬೆದರಿಕೆಗಳಿಗೆ ಮಣಿಯದೆ ಭಯ್ಯಾಲಾಲ್ ತನ್ನ ಮನೆಯವರಿಗೆ ಆದದ್ದನ್ನು ನ್ಯಾಯಾಲಯದ ಮುಂದೆ ಹೇಳಿದರೂ, ಅವುಗಳನ್ನು ಪೊಲೀಸರ ದಾಖಲೆಗಳು, ವೈದ್ಯರ ಪುರಾವೆಗಳು ದೃಢಪಡಿಸುವುದಿಲ್ಲ, ಆಗ ಸಹಜವಾಗಿಯೇ ಕೇಸ್ ಬಿದ್ದುಹೋಗುತ್ತದೆ, ನ್ಯಾಯ ಬಲಿಯಾಗುತ್ತದೆ.

ಇದು ನಮ್ಮ ದೇಶದ ಬಹುಪಾಲು ದಲಿತರು ಬದುಕುತ್ತಿರುವ ಪರಿಸ್ಥಿತಿ, ಎದುರಿಸುತ್ತಿರುವ ಸವಾಲುಗಳ ಸಂಕ್ಷಿಪ್ತ ಪರಿಚಯ. ಅವರು ಬದುಕಿದ್ದಾಗಲೂ ನ್ಯಾಯ ಇಲ್ಲ, ಸತ್ತಾಗಲೂ ನ್ಯಾಯ ಇಲ್ಲ. ಇದು ಕೇವಲ ಕಂಬಾಲಪಲ್ಲಿ, ಖೈರ್‌ಲಾಂಜಿಯ ಕತೆಯಲ್ಲ, ಹಂಗರಹಳ್ಳಿಯ ಜೀತ ಪ್ರಕರಣವೂ ಸೇರಿದಂತೆ ದೇಶದ ಹಲವಾರು ಜಾಗಗಳಲ್ಲಿ ನಿತ್ಯ ನಡೆಯುತ್ತಿರುವ ದುರಂತ.

ನಮ್ಮದು ಜಗತ್ತಿನಲ್ಲೇ ಅತಿದೊಡ್ಡ ಪ್ರಜಾಪ್ರಭುತ್ವ. ಇಂತಹ ಪ್ರಜಾಪ್ರಭುತ್ವದಲ್ಲಿ ಅತಿಹೆಚ್ಚು ಸಂಖ್ಯೆಯಲ್ಲಿರುವ, ಅತಿಹೆಚ್ಚು ಅವಮಾನವನ್ನು ಎದುರಿಸುತ್ತಿರುವ 'ದಲಿತರಿಗೆ ಇರುವ ಸ್ಥಾನಮಾನ ಎಂಥದ್ದು? ಈ ಪ್ರಶ್ನೆಯನ್ನು ನಮ್ಮ ಸಂವಿಧಾನದ ಶಿಲ್ಪಿ ಅಂಬೇಡ್ಕರ್‌ರವರೂ ಕೇಳಿದ್ದರು. "ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಇಲ್ಲದೆ ಕೇವಲ ರಾಜಕೀಯ ಸಮಾನತೆಯಿಂದ ಏನೂ ಸಾಧ್ಯವಾಗುವುದಿಲ್ಲ" ಎಂದಿದ್ದರು ಅಂಬೇಡ್ಕರ್. ಅದನ್ನು ಇವತ್ತು ಕಂಬಾಲಪಲ್ಲಿಯಲ್ಲಿ, ಖೈರ್‌ಲಾಂಜಿಯಲ್ಲಿ ನೋಡುತ್ತಿದ್ದೇವೆ. ಸ್ವಾತಂತ್ರ್ಯ ಬಂದ 59 ವರ್ಷಗಳ ನಂತರವೂ ಇದೆಲ್ಲ ನಡೆಯುತ್ತಿದೆ ಅಂದರೆ ನಮ್ಮ ಪ್ರಜಾಪ್ರಭುತ್ವಕ್ಕೆ ಅರ್ಥವಿದೆಯೇ?

ಈ ಎಲ್ಲ ದುರಂತಗಳಿಗೆ ಕಳಶವಿಟ್ಟಂತಿದೆ ದಲಿತ ನಾಯಕತ್ವ. ಒಂದೆಡೆ ವೋಟ್‌ಬ್ಯಾಂಕ್ ರಾಜಕೀಯಕ್ಕಾಗಿ ಮನುವಾದಿಗಳ ಓಲೈಕೆ, ಇನ್ನೊಂದೆಡೆ ಹಫ್ತಾ ವಸೂಲಿ ಬೆದರಿಕೆ. ಇವರ್‍ಯಾರಿಗೂ ಕಂಬಾಲಪಲ್ಲಿಯಲ್ಲಿ ಸುಟ್ಟ ದಲಿತರ ದೇಹಗಳ ವಾಸನೇ ತಾಕುವುದಿಲ್ಲ, ಖೈರ್‌ಲಾಂಜಿಯಲ್ಲಿ ಮಡಿದ ಸುರೇಖಾಳ ಕುಟುಂಬದ ರಕ್ತ ಕಾಣಿಸುವುದಿಲ್ಲ.

ಅಂಬೇಡ್ಕರ್‌ರ ಪರಿನಿರ್ವಾಣದ ಮುನ್ನಾ ದಿನವೇ ಕಂಬಾಲಪಲ್ಲಿಯ ಆರೋಪಿಗಳ ಮೇಲಿನ ಕೇಸ್ ಖುಲಾಸೆ ಆಗಿದ್ದು, ಮರುದಿನ ಅವರನ್ನೆಲ್ಲ ಹೂಹಂಪಲುಗಳೊಂದಿಗೆ ಸ್ಥಳೀಯ ಜನ ಅಭಿನಂದಿಸಿದ್ದು ದಲಿತರ ದುರಂತದ ವ್ಯಂಗ್ಯ ಅಲ್ಲದೆ ಮತ್ತಿನ್ನೇನು?

-ಗೌರಿ ಲಂಕೇಶ್

ಕಿರು ಕತೆಗಳಿಗೆ ಸ್ವಾಗತ

ನಿಮ್ಮಲ್ಲಿ ಕಿರುಗತೆಯೊಂದು ಮೊಳಕೆಯೊಡೆದು ಹೊರಬರಲು ಹಾತೊರೆಯುತ್ತಿದೆಯೇ? ಯಾವುದೋ ಒಂದು ಘಟನೆ ನಿಮ್ಮ ಮನದಲ್ಲಿ ಗುಂಯ್‌ಗುಟ್ಟುತ್ತಿದೆಯೇ? ಯಾಕೆ ಈ ಪ್ರಶ್ನೆ ಎಂದರೆ ನಮ್ಮೆಲ್ಲರಲ್ಲೂ ಬರಹಗಾರನೊಬ್ಬ ಅಡಗಿರುತ್ತಾನೆ (ಅಥವಾ ಬರಹಗಾರ್ತಿಯೊಬ್ಬಳು ಅಡಗಿರುತ್ತಾಳೆ!). ಆ ಬರಹಗಾರನ ಅದಮ್ಯ ಚಿಂತನೆ, ಸೃಜನಶೀಲತೆ ನಮ್ಮ ಅಂತರಾಳದಲ್ಲಿ ಕತೆಗಳನ್ನು ಹೊಸೆಯುತ್ತಲೇ ಇರುತ್ತದೆ. ಕೆಲವೇ ಕೆಲವರು ಮಾತ್ರ ಆ ಅಂತರಾಳದ ಆಶೆಗೆ ಒಗೊಟ್ಟು, ತಮ್ಮಲ್ಲಿನ ಕತೆಯನ್ನು ಕಾಗದದ ಮೇಲೆ ಸೆರೆ ಹಿಡಿಯುತ್ತಾರೆ. ಆದರೆ ಅದೆಷ್ಟೋ ಜನ, ಕತೆಯನ್ನು ತಮ್ಮಲ್ಲೇ ಹುದುಗಿಟ್ಟುಕೊಂಡು ಸುಮ್ಮನಿರುತ್ತಾರೆ.

ಈಗ ಇಂಥವರಿಗೆಲ್ಲ ಇಲ್ಲೊಂದು ಆಹ್ವಾನವಿದೆ. ನೀವು ನಿಮ್ಮಲ್ಲಿರುವ ಕಿರುಕತೆಗೆ ಜೀವಕೊಟ್ಟು ನಮಗೆ ಕಳುಹಿಸಿರಿ. ಅವುಗಳಲ್ಲಿ ಉತ್ತಮವಾದದ್ದನ್ನು ನಾವು ಪ್ರಕಟಿಸುತ್ತೇವೆ. ನಿಮ್ಮ ಕತೆ ಐನೂರು ಪದಗಳಿಗೆ ಸೀಮಿತವಾಗಿರಲಿ.

ಅದು ಹೊಸ ಕತೆ ಆಗಿದ್ದು ಅಚ್ಚುಕಟ್ಟಾಗಿ ಬರೆದಿರಬೇಕು. ಜೆರಾಕ್ಸ್ ಕಾಪಿಗಳನ್ನು ಪರಿಗಣಿಸಲಾಗುವುದಿಲ್ಲ. ಕಿರುಗತೆಗಳನ್ನು ಇ-ಮೇಲ್ ಮಾಡಲು ಇಚ್ಛಿಸುವವರು ಅದನ್ನು 'ಬರಹ' ಸಾಫ್ಟ್‌ವೇರ್‌ನಲ್ಲಿ ಕಳುಹಿಸಬೇಕು.

'ಲಂಕೇಶ್' ವಾರಪತ್ರಿಕೆಯು ಹೊಸ ಬರಹಗಾರರಿಗೆ ವೇದಿಕೆ ಆಗುತ್ತಿದೆ. ನವ ಪ್ರತಿಭೆಗಳನ್ನು ಹುಡುಕಿ, ಅವರನ್ನು ಪ್ರೋತ್ಸಾಹಿಸಿ, ಬೆಳೆಸಿದ್ದು ಅಪ್ಪ, ಅವರ ಈ ಕಾರ್ಯವನ್ನು ಮುಂದುವರಿಸುತ್ತಿರುವ ಹೆಮ್ಮೆ ನಮಗಿದೆ. ನಮ್ಮ ರಾಜ್ಯದ ಮೂಲೆಮೂಲೆಗಳಲ್ಲಿ ಅಡಗಿರುವ ಬರಹಗಾರರು ನಮ್ಮ ಈ ಆಹ್ವಾನಕ್ಕೆ ಸ್ಪಂದಿಸಿ, ಕ್ರಿಯಾಶೀಲರಾಗಿ, ಕತೆಗಳನ್ನು ಬೇಗನೆ ಕಳುಹಿಸುವಿರಿ ಎಂದು ನಂಬಿರುವೆ.

ಮುಂದಿನವಾರದಿಂದ ಪೋಲಂಕಿಯವರ 'ಸೀತಾಯಣ'!

"ನೀನೊಬ್ಬ ಗಂಡು ವೇಷದ ಹೆಣ್ಣು" ಎಂದು ಸೀತೆಯಿಂದಲೇ ಮೂದಲಿಸಿಕೊಂಡಿದ್ದ ರಾಮ, 'ಸಹೋದರ ಭರತನಿಗೆ ರಾಜ್ಯವೇಕೆ, ಸೀತೆಯನ್ನೇ ಕೊಡುತ್ತಿದ್ದೆ' ಎಂದಿದ್ದ ರಾಮ ನಿಜವಾಗಲೂ ಎಂತಹ ವ್ಯಕ್ತಿ? 'ದಶರಥ ಜಾತಕ'ದಲ್ಲಿ ವಾರಣಾಸಿಯ ದಶರಥರಾಜನ ಮಕ್ಕಳ ಹೆಸರು ರಾಮಪಂಡಿತ, ಲಕ್ಷ್ಮಣಕುಮಾರ್ ಮತ್ತು ಸೀತಾದೇವಿ ಎಂದಿರುವಾಗ ರಾಮ ಸೀತೆಗೇನಾಗಬೇಕು? ಬ್ರಾಹ್ಮಣ್ಯವನ್ನು ಪ್ರತಿಪಾದಿಸುತ್ತಾ ಶೂದ್ರನಾದ ಶಂಬೂಕನನ್ನು ಕೊಂದ ರಾಮ ಯಾವ ಮೌಲ್ಯಗಳನ್ನು ಎತ್ತಿಹಿಡಿಯುತ್ತಾನೆ?


ರಾಮನೊಂದಿಗೆ ವನವಾಸ ಅನುಭವಿಸಿದ, ರಾವಣನಿಂದ ಅಪಹರಿಸಲ್ಪಟ್ಟ, ಅಗ್ನಿ ಪರೀಕ್ಷೆಗೆ ಗುರಿಯಾದ, ಕೊನೆಗೆ ರಾಮನಿಂದಲೇ ಕಾಡಿಗೆ ದೂಡಲ್ಪಟ್ಟ ಸೀತೆ ಅಳುಮುಂಜಿಯೇ? ಅಥವಾ 'ಪುರುಷ'ನಿಗೆ ಪ್ರತಿಯಾಗಿ ನಿಂತ 'ಪ್ರಕೃತಿ'ಯೇ? ದೇವಿಯೇ? ಮಾನವಳೇ?

ಈ ಎಲ್ಲ ಪ್ರಶ್ನೆಗಳನ್ನು ಕುರಿತಂತೆ ಎರಡು ದಶಕಗಳ ಹಿಂದೆ ಡಾ. ಪೋಲಂಕಿ ರಾಮಮೂರ್ತಿಯವರು 'ಸೀತಾಯಣ' ಎಂಬ ಪುಸ್ತಕ ಬರೆದಿದ್ದರು. ಆಗ ಅದರ ಸುತ್ತ ಗಲಾಟೆಗಳು ಸಂಭವಿಸಿದ್ದರಿಂದ ಅದು ಎರಡನೇ ಮುದ್ರಣದ ನಂತರ ಕಾಣೆಯಾಗಿತ್ತು.

ಈ ಪುಸ್ತಕದ ಬಗ್ಗೆ ತುಂಬಾ ಕೇಳಿದ್ದ ನಾನು ಅದಕ್ಕಾಗಿ ಎಷ್ಟು ಹುಡುಕಿದರೂ ಸಿಕ್ಕಿರಲಿಲ್ಲ. ಮೊನ್ನೆ ಪೋಲಂಕಿಯವರ ಪತ್ನಿ ಅನುರಾಧರವರನ್ನು ಕೇಳಿದಾಗ ಅವರು ಒಂದು ಪ್ರತಿಯನ್ನು ಕಳುಹಿಸಿಕೊಟ್ಟರು. ಸಂಜೆ ಕೈ ಸೇರಿದ ಪುಸ್ತಕವನ್ನು ಅಂದೇ ರಾತ್ರಿ ಓದಿ ಮುಗಿಸಿದೆ.

ಇದರಲ್ಲಿನ ವಿಚಾರಗಳು ನಮ್ಮ ಓದುಗರಿಗೂ ಸಿಗುವಂತಾಗಲಿ ಎಂದು ಮುಂದಿನ ವಾರದಿಂದ 'ಸೀತಾಯಣ'ವನ್ನು ಕಂತು ಕಂತಾಗಿ ಪ್ರಕಟಿಸಲಿದ್ದೇವೆ. ನಮ್ಮ ಜಾಣ ಜಾಣೆಯರಿಗೆ ಇದು ಇಷ್ಟವಾಗುತ್ತೆ ಎಂದು ನಂಬಿದ್ದೇವೆ.

-ಸಂಪಾದಕಿ



ಸಿಪಾಯಿಯಂತೆ ಮುನ್ನುಗ್ಗು-ಕಣ್ಣೀರು ಹಾಕಬೇಡ, ನಿನ್ನ ಹಿಂದೆ ನಾನಿದ್ದೇನೆ-ದೇವೇಗೌಡ

ಬರಿ ಮುದ್ದೆ ತಿನ್ನುತ್ತಿದ್ದ ಗೌಡರಿಗೆ ಅನ್ನ ಕೊಟ್ಟಿದ್ದು ವೀರೇಂದ್ರ ಪಾಟೀಲ್



ಚಾಮುಂಡೇಶ್ವರಿ ಫಲಿತಾಂಶವ ಕಾರಣವಾಗಿ, ದೇವೇಗೌಡರು ಮಾಡಿಸಿದ ಯಜ್ಞ, ಯಾಗ, ಮಾಟ, ಮಂತ್ರ ಮತ್ತು ಪೂಜೆಗಳೆಲ್ಲಾ ಯಕ್ಕುಟ್ಟಿ ಹೋದವಂತಲ್ಲಾ. ಕಡೆಗಳಿಗೆಯಲ್ಲಿ ಮಾಡಿದ ಊರ ದೇವರ ಪೂಜೆಯೂ ಕೈಕೊಡಲಾಗಿ ಇನ್ನೆಂದೂ ಅಳುವುದಿಲ್ಲ ವೆಂದು ಶಪಥ ಮಾಡಿದ್ದ ಗೌಡರು ಯಾರಿಗೂ ಕಾಣದಂತೆ ಗುಟ್ಟಾಗಿ ಗಳಗಳನೆ ಅತ್ತರಂತಲ್ಲಾ. "ಡಿಸೆಂಬರ್ 1 ನೇ ತಾರೀಖಿನಂದು ಈ ಕಾಂಗ್ರೆಸ್ಸಿಗರ ಜಲ್ಮ ಜಾಲಾಡುತ್ತೇನೆ" ಎಂದು ಹೇಳಿದ್ದ ಗೌಡರು ಮಾತಿಗೆ ತಪ್ಪದಂತೆ ಜನಾರ್ಧನ ರೆಡ್ಡಿ ಸಿಡಿ ನಾಟಕದಂತಹ ಪ್ರಹಸನವನ್ನು ಮಾಡಿದರೂ, ಈ ಕಾಂಗ್ರೆಸ್‌ನವರು ಅದಕ್ಕೂ ಉತ್ತರ ಕೊಡದೆ, ಸುಮ್ಮನಿದ್ದು ಈಗ ಲಿಖಿತ ರೂಪದಲ್ಲಿ ನಮ್ಮ ಪತ್ರಿಕೆ ಆಫೀಸಿಗೆ ಕಳಿಸಿದ್ದಾರಲ್ಲ, ಒಂದು ಡಾಕ್ಟರೇಟ್ ಥೀಸಿಸ್‌ಗೆ ಬರೆಯುವ ಪ್ರಬಂಧದಷ್ಟಿರುವ ಈ ಕಡತದಲ್ಲಿ ಕೇವಲ ಕ್ರಿಬರಹವನ್ನು ಮಾತ್ರ ನಾವು ಇಷ್ಟು ಇಲ್ಲಿ ಕೊಟ್ಟಿದ್ದೇವೆ:

* ಕಾಂಗ್ರೆಸ್ಸಿಗರ ಜಲ್ಮ ಜಾಲಾಡಿರುವ ದೇವೇಗೌಡರ ಜಲ್ಮವನ್ನು ಹಿಂಡುವುದು ನಮ್ಮ ಪಾರ್ಟಿಯ ಹಕ್ಕು ಎಂಬುದನ್ನು ನಾವೀಸಮಯದಲ್ಲಿ ನಿಮ್ಮ ಮುಂದಿಡುತ್ತೇವೆ.

ಹೊಳೆನರಸೀಪುರದಲ್ಲಿ ಪಕ್ಷೇತರವಾಗಿ ಗೆದ್ದ ಈ ದೇವೇಗೌಡನಿಗೆ ಬೆಂಗಳೂರೇ ಗೊತ್ತಿರಲಿಲ್ಲ, ಆಗ ಆತನನ್ನು ಕರೆದುಕೊಂಡು ಹೋಗಿ ಬ್ರಿಗೇಡ್ ರೋಡ್ ತೋರಿಸುತ್ತಿದ್ದಾಗ, ಅದೇನನ್ನು ನೋಡದೆ "ಹಸಿವಾಗುತ್ತಿದೆ, ಏನಾದರೂ ಕೊಡಿಸಿ" ಎಂದಾಗ, ಕಾಂಗ್ರೆಸ್ ನಾಯಕರು ಹೋಟೆಲ್ ಒಂದಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಮೆನು ಕಾರ್ಡು ನೋಡುವುದಕ್ಕೂ ಬಿಡದೆ "ನನಗೆ ಫುಲ್ ಊಟ ಕೊಡಿ" ಎಂದು ಗೌಡರು ಹೇಳಿದ್ದು ಸುಳ್ಳೆ? ಊಟದ ಬದಲು ಮಟನ್, ಚಿಕನ್ ತರಿಸಿಕೊಂಡು ಪಟ್ಟಾಗಿ ಹೊಡೆದು, ಬಿಲ್ ಬಂದ ಕೂಡಲೇ ಅದನ್ನು ನೋಡಿ ಹೌಹಾರಿ ನಿಧಾನವಾಗಿ ಕಾಂಗ್ರೆಸ್ ಲೀಡರ್ ಕಡೆಗೆ ತಳ್ಳಿದ್ದು ಸುಳ್ಳು ಎಂದು ದೇವೇಗೌಡ ಹೇಳಿದ್ದಾದರೆ ನಾವು ನಮ್ಮ ಜಾತಿ ಪಂಕ್ತಿಯಲ್ಲಿ ಕುಳಿತು ಅನ್ನ ತಿನ್ನುವುದಿಲ್ಲ."

* ಪಕ್ಷೇತರವಾಗಿ ಗೆದ್ದ ಕೂಡಲೇ ಮಾಡಿದ ಮೊದಲ ಕೆಲಸವೆಂದರೆ ತನ್ನ ಚುನಾವಣೆಗಾಗಿ ಓಡಾಡಿದ ಒಬ್ಬ ಪುಢಾರಿ ಶಿಕ್ಷಕನನ್ನು ಪುನಃ ತನ್ನ ಕ್ಷೇತ್ರಕ್ಕೆ ವರ್ಗ ಮಾಡಿಸಿಕೊಳ್ಳಲು ಓಡಾಡಿದ್ದು. ಆ ಶಿಕ್ಷಕನ ವರ್ಗಾವಣೆ ಪತ್ರ ಹಿಡಿದು ಬಂದಾಗ ಅಂದಿನ ಶಿಕ್ಷಣ ಸಚಿವರು ಮತ್ತು ಕಾಂಗ್ರೆಸ್ ಮುಖಂಡರಾದ ಕೆ.ವಿ. ಶಂಕರೇಗೌಡರು "ಹೊಸದಾಗಿ ರಾಜಕಾರಣಕ್ಕೆ ಬಂದಿದ್ದೀಯ. ಇಂತಹ ಭ್ರಷ್ಟ ನೌಕರರ ಪರ ವಕಾಲತ್ತು ವಹಿಸಿಕೊಂಡು ಬರುವುದಾದರೆ ನಮ್ಮ ಬಳಿ ಎಂದೂ ಬರಲೇಬೇಡ" ಎಂದಿದ್ದು ಸುಳ್ಳೆ?

* ಹೊಳೆನರಸೀಪುರದಲ್ಲಿ ಗೆದ್ದ ಮೂರು ದಿನಕ್ಕೆ ಸರಿಯಾಗಿ ವೀರೇಂದ್ರ ಪಾಟೀಲರ ಎದುರುನಿಂತು "ದೇವರೆ, ನನ್ನದು ಅವಿಭಕ್ತ ಕುಟುಂಬ. ಹಲವಾರು ಹೊಟ್ಟೆಗಳನ್ನು ತುಂಬಿಸಬೇಕು. ಎಲ್ಲರೂ ಬರೀ ಮುದ್ದೆ ತಿನ್ನುತ್ತಿದ್ದೇವೆ. ತಾವು ಏನಾದರೂ ಮಾಡಿ ಒಂದು ಏತನೀರಾವರಿಯನ್ನು ನನ್ನ ಜಮೀನಿಗೆ ಮಾಡಿಸಿದರೆ ನಾವೂ ಕೂಡ ಅನ್ನ ಉಣ್ಣುತ್ತೇವೆ" ಎಂದು ಗೋಗರೆದದ್ದು ಸುಳ್ಳೆ? ವೀರೇಂದ್ರ ಪಾಟೀಲರಿಗೆ ಮಣ್ಣು ಮುಕ್ಕಿಸಿ, ದ್ರೋಹ ಮಾಡಿ, ಇಂದಿರಾಗಾಂಧಿ ಎದುರು ನಿಂತು ಸೋತಿದ್ದರೂ ಅವರ ಪಾರ್ಟಿಗೆ ಹೋಗುವಂತೆ ಮಾಡಿದ್ದು ಯಾರೆಂಬುದು ಮಾನ್ಯ ದೇವೇಗೌಡರ ರಾಜಕಾರಣದ ಇತಿಹಾಸ ಬಲ್ಲವರಿಗೆಲ್ಲಾ ಗೊತ್ತಿದೆಯಲ್ಲವೆ?

* ಹೊಳೆನರಸೀಪುರದ ರಾಜಕಾರಣದಿಂದ ಹಾಸನದ ರಾಜಕಾರಣದವರೆಗೂ ಕಾಲಿಡುವ ಸಮಯದಲ್ಲಿ ದೇವೇಗೌಡನಂತೆಯೇ ಪಂಚೆ ಉಟ್ಟು ಕೈಮುಗಿಯುತ್ತ "ಗೌಡರು ರಾಜ್ಯದ ರಾಜಕಾರಣದ ನಿಮಿತ್ತ ಬರಲಾಗಿಲ್ಲ. ಅವರ ತರ ನಾನೇ ಓಟುಕೇಳುತ್ತೇನೆ. ದಯಮಾಡಿ ಗೌಡರನ್ನು ಗೆಲ್ಲಿಸಿ" ಎಂದು ತಿರುಗುತ್ತಿದ್ದ ಪುಟ್ಟಸ್ವಾಮಿಗೌಡರ ಶ್ರಮದ ಜಾಗಕ್ಕೆ ರೇವಣ್ಣನನ್ನು ತಂದು ಕೂರಿಸಿದ್ದೂ ಅಲ್ಲದೆ ಪುಟ್ಟಸ್ವಾಮಿಗೌಡರ ವಿರುದ್ಧ ಸತತವಾಗಿ ಮಾಟ ಮಾಡುತ್ತ ಬಂದವರಾರು?

* ದೇವರಾಜ ಅರಸು ಭ್ರಷ್ಟನೆಂದು ಭಾಷಣ ಬಿಗಿಯುತ್ತ ಓಡಾಡುತ್ತಿದ್ದ ದೇವೇಗೌಡರು, ಒಂದೇ ರಾತ್ರಿಯಲ್ಲಿ ಪುಂಗಿ ಬಂದ್ ಮಾಡಿಕೊಂಡು ಇಂದಿನವರೆಗೂ ಭ್ರಷ್ಟತೆ ಬಗ್ಗೆ ಚಕಾರವೆತ್ತದೇ ಇರುವುದು ಚಿದಂಬರ ರಹಸ್ಯವಾಗಿದೆಯಲ್ಲವೆ?

* ಇಡೀ ಕರ್ನಾಟಕವೇ ಗುಂಡೂರಾಯನನ್ನು ಹುಂಬ, ಭ್ರಷ್ಟ, ಸಂಬಿಕೆದ್ರೋಹಿ ಎಂದು ಹಿಯಾಳಿಸುತ್ತ ಚಳವಳಿ ಮಾಡುತ್ತಿರಬೇಕಾದರೆ, ಆ ಕಾಂಗ್ರೆಸ್ ಮುಖ್ಯಮಂತ್ರಿಯನ್ನು ಹೊಳೆನರಸೀಪುರಕ್ಕೆ ಕರೆದುಕೊಂಡು ಹೋಗಿ, ಎತ್ತಿನಗಾಡಿಯಲ್ಲಿ ಮೆರವಣಿಗೆ ಮಾಡಿ, ಹಾಡಿ, ಹೊಗಳಿ, ತನ್ನ ಬಡತನವನ್ನೆಲ್ಲಾ ನೀಗಿಕೊಂಡಿದ್ದು ಸುಳ್ಳೆ?

* ಮುಖ್ಯಮಂತ್ರಿ ಪದವಿ ಕಡೆ ಗಮನವನ್ನೆಲ್ಲಾ ಏಕಾಗ್ರಗೊಳಿಸಿದ ನಂತರ, ಯಾರ್‍ಯಾರು ರಾಮಕೃಷ್ಣ ಹೆಗಡೆ ಜೊತೆಯಲ್ಲಿ ಚೆನ್ನಾಗಿದ್ದಾರೆ ಎಂದು ಶೋಧಿಸುತ್ತ, ಸೆಕ್ಯುಲರ್ ಮನಸ್ಸಿನ ಸ್ವಜಾತಿ ಲೀಡರುಗಳನ್ನೆಲ್ಲಾ ಒಬ್ಬೊಬ್ಬರಾಗಿ ಬಲಿ ಹಾಕುತ್ತ, ಮೊದಲು ಬಲಿಯಾಗಿ ಪುಟ್ಟಸ್ವಾಮಿಗೌಡರನ್ನು ಪಡೆದದ್ದು ಸುಳ್ಳೆ?

ಆದರೆ ಪುಟ್ಟಸ್ವಾಮಿಗೌಡರು ಬಗ್ಗದೆ, ದೇವೇಗೌಡನ ಎದುರು ನಿಂತು ಗೆದ್ದು ವೀರೇಂದ್ರ ಪಾಟೀಲರ ಸಂಪುಟದಲ್ಲಿ ಲೋಕೋಪಯೋಗಿ ಸಚಿವರಾಗಿದ್ದಲ್ಲದೆ, ಪಾಟೀಲರ ಕೃಪೆಯಿಂದ ದೇವೇಗೌಡರಿದ್ದ ಬಂಗಲೆ, ಕಾರು, ಖಾತೆಯನ್ನೆಲ್ಲ ಪಡೆದುಕೊಂಡು ತಮ್ಮ ಕುಟಿಲ ರಾಜಕಾರಣಕ್ಕೆ ಮಾಡಿದ ತಕ್ಕ ಶಾಸ್ತಿಯಲ್ಲವೆ?



* ರಾಮಕೃಷ್ಣ ಹೆಗಡೆ ಮತ್ತು ದೇವೇಗೌಡ ದೂರ ಸರಿದಾಗ ಯಾರ್‍ಯಾರು ಹೆಗಡೆ ಹಿಂದೆ ಹೋದರು ಎಂಬುದನ್ನು ಪಟ್ಟಿ ಮಾಡಿಕೊಂಡು, ಅವರನ್ನೆಲ್ಲಾ ಉರುಳಿಸುತ್ತ ಬಂದ ದೇವೇಗೌಡ ಕಡೆಗೆ ಎಂ.ಪಿ. ಪ್ರಕಾಶರ ಸೊಂಟ ಮುರಿದು ಕೂರಿಸಿ, ಸಿಂಧ್ಯಾ ತಾನಾಗಿಯೇ ಹೊರಗೋಗುವಂತೆ ಮಾಡಿದ್ದು ಎಲ್ಲರಿಗೂ ಕಾಣುತ್ತಿದೆಯಲ್ಲವೆ ಕನಕಪುರದ ಚುನಾವಣೆಯಲ್ಲಿ ಪಿ.ಜಿ.ಆರ್ ಸಿಂಧ್ಯಾನ ವಿರುದ್ಧ ಗೆಲ್ಲಲಾಗದೆ ಸೋತುಹೋದ ಸೇಡನ್ನು ಮರೆತಿದ್ದೀರಿ ಎಂದು ಸಿಂಧ್ಯಾ ಭಾವಿಸಿದ್ದೇ ಒಂದು ಪ್ರಮಾದವಾಗಿದೆಯಲ್ಲವೆ?

"ಸಿಂಧ್ಯಾ ಮಂತ್ರಿ ಮಾಡಿ ಎಂದು ಬಾತ್‌ರೂಮಿಗೆ ಬಂದು ಕಾಲಿಗೆ ಬಿದ್ದು ಕೇಳಿದ" ಎಂದಿರುವ ದೇವೇಗೌಡ, ಸಿಂಧ್ಯಾನ ಮೊಣಕಾಲು ಸವರುತ್ತ ಕುಳಿತ ದೃಶ್ಯವನ್ನು ತುಮಕೂರು ಸಭೆಯಲ್ಲಿ ಎಲ್ಲರೂ ನೋಡಲಿಲ್ಲವೆ?

* ಕನಕಪುರದ ಲೋಕಸಭಾ ಚುನಾವಣೆಯಲ್ಲಿ ಡಿಕೆಸಿ ಎದುರು ನಿಲ್ಲುವಾಗ, ತಮ್ಮನ್ನು ದೂರವಿರಿಸಿದ್ದ ಹೆಗಡೆ ಹುಡುಕಿಕೊಂಡು ಹೋಗಿ ಅವರ ಕಾಲಬುಡದಲ್ಲಿ ಕುಳಿತು ಈಚೆಗೆ ಬರಲಿಲ್ಲವೆ? ಹೆಗಡೆ ಮಾತನ್ನೇ ಆಡಿಸದಿದ್ದುದನ್ನು ಯಾರಿಗಾದರು ಹೇಳಿದಿರಾ?

"ಸೋಮಣ್ಣ ನನ್ನ ಜೊತೆ ಇದ್ದರೆ ನನ್ನ ಗೆಲುವು" ಎಂದು ಸೋಮಣ್ಣನನ್ನು ಹಾಡಿ ಹೊಗಳಿ, ಆನಂತರ ತೆಗಳುತ್ತಿರುವ ದೇವೇಗೌಡನಿಗೆ ಸೋಮಣ್ಣ ಉಪಕಾರ ಮಾಡಿದ್ದು ತಪ್ಪೆ?


* ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಭಿನ್ನಮತ ಎದುರಿಸಲಾಗದೆ ತತ್ತರಿಸುವ ಸಮಯದಲ್ಲಿ ಗೌಡರನ್ನು ಪ್ರಧಾನಮಂತ್ರಿ ಮಾಡಿದ್ದು ಕಾಂಗ್ರೆಸ್ಸಲ್ಲವೆ? ಅಂತಹ ಕಾಂಗ್ರೆಸ್ಸನ್ನೇ ನಿರ್ನಾಮ ಮಾಡುತ್ತೇನೆಂದು ಶಪಥ ಮಾಡುತ್ತಿರುವ ದೇವೇಗೌಡನ ಕಷ್ಟ ಕಾಲದಲ್ಲಿ ಕೈಹಿಡಿದವರು ಪಿ.ವಿ. ನರಸಿಂಹರಾಯರಲ್ಲವೆ? ಹಗಲು, ರಾತ್ರಿ ಚರಂಡಿ ನೀರಿನಂತೆ ಹರಿವ ತಮ್ಮ ಪೆಟ್ರೋಲ್ ಬಂಕ್ ಯಾರು ದಯಪಾಲಿಸಿದ್ದು?

* ಕಾಂಗ್ರೆಸ್ ಮನಸ್ಸು ಮಾಡಿದ್ದರೆ ತುಂಡುಗುತ್ತಿಗೆ ವ್ಯವಹಾರವನ್ನು ತನಿಖೆ ಮಾಡಿ ಕಂಬಿ ಎಣಿಸುವಂತೆ ಮಾಡಬಹುದಿತ್ತಲ್ಲವೆ?

ದೇವೇಗೌಡನ ಇತ್ತೀಚಿನ ರಾಜಕಾರಣವೆಲ್ಲಾ ಎಲ್ಲರಿಗೂ ಗೊತ್ತಿರುವಂತದ್ದೆ. ಅದನ್ನು ನಾವು ಪ್ರಸ್ತಾಪಿಸುವುದಿಲ್ಲ. ಆದರೆ ಏತನೀರಾವರಿ ಮಾಡಿ ದೇವೇಗೌಡನ ಮನೆಯವರು ಅನ್ನ ತಿನ್ನುವಂತೆ ಮಾಡಿದ ಕಾಂಗ್ರೆಸ್ಸಿನವರನ್ನ ಬೈದರೆ ನಾವು ಸುಮ್ಮನಿರುವುದಿಲ್ಲ. ಇದೇ ತರಹ ಮೂಗರ್ಜಿಗಳನ್ನು ಬರೆಯುತ್ತೇವೆ" ಎಂದು ತಮ್ಮ ವಾದವನ್ನು ಮುಗಿಸಿದ್ದಾರಲ್ಲಾ, ಥೂತ್ತೇರಿ!!!

–ಯಾಹೂ

ಕುಡಿತ, ಕುಣಿತಗಳ ಮೆರವಣಿಗೆಯಲ್ಲಿ ಮುರುಘಾನ ಹ್ಯಾಪಿ ಬರ್ತ್‌ಡೇ!



ಬರ್ತ್‌ಡೇ ಬಾಯ್ ಮುರುಘಾ

ಅವತ್ತು ಗುಲ್ಬರ್ಗಾದಲ್ಲಿ ಸಡಗರ ನೋಡಬೇಕಿತ್ತು ನೀವು. 'ಹ್ಯಾಪಿ ಬರ್ತ್‌ಡೇ ಮುರುಘಾಸ್ವಾಮಿ' ಎಂದು ಮುಗಿಲು ಮುಟ್ಟುವ ಘೋಷಣೆ. ಫುಲ್‌ಟೈಟ್ ಆಗಿದ್ದ ಯುವಕರಿಂದ ಡ್ಯಾನ್ಸೋ ಡ್ಯಾನ್ಸು... ಹಿನ್ನೆಲೆಯಲ್ಲಿ ಒಮ್ಮೆ 'ಧೂಮ್ ಮಚಾಲೆ ಧೂಮ್' ಹಾಡು ತೇಲಿಬಂದರೆ, ಇನ್ನೊಮ್ಮೆ 'ಸುಂಟರಗಾಳಿ, ಸುಂಟರಗಾಳಿ' ಎಂಬ ರಭಸದ ಹಾಡು. ಪಲ್ಲಕ್ಕಿಯಲ್ಲಿ ಕುಳಿತ ಬರ್ತ್‌ಡೇ ಬಾಯ್ ಮುರುಘಾ ಕುಳಿತಲ್ಲೇ ಕತ್ತು ಅಲ್ಲಾಡಿಸುತ್ತ ತೊಡೆ ತಟ್ಟುತ್ತಾ enjoy ಮಾಡ್ತಿದ್ದ. ಬರ್ತ್‌ಡೇಗೆಂದು ಮುರುಘಾ ಖರ್ಚು ಮಾಡಿದ್ದೆಷ್ಟು ಗೊತ್ತೆ? Only one Crore rupees! ಇಷ್ಟು ಸಾಕಲ್ಲವೆ ಪಡ್ಡೆಗಳಿಗೆ. ಅವರು ಎಣ್ಣೆ ಹೊಡೆದರು, ಬಟ್ಟೆ ಹೊಲಿಸಿಕೊಂಡರು, ಜೈ ಮುರುಘಾ ಸ್ವಾಮಿ ಎಂದರು, ಅಮಲಿನಲ್ಲಿ ಹಾಯ್ ಮುರುಗ್ಯಾ, ಹ್ಯಾಪ್ ಬರ್ತ್‌ಡೇ ಲೇ ಮುರುಗ್ಯಾ ಎಂದೇನೇನೋ ಕಿರುಚಿಬಿಟ್ಟರು.

ಈ ಮುರುಘಾ ಯಾರು? ಸ್ವಲ್ಪ ನಿಲ್ಲಿ ಓದುಗರೆ. 220 ಶಾಖಾಮಠಗಳನ್ನು ಹೊಂದಿರುವ, ನೂರಾರು ಕೋಟಿ ಆಸ್ತಿ ಹೊಂದಿರುವ, ಲಕ್ಷಾಂತರ ಭಕ್ತರಿಂದ ಪೂಜಿಸಲ್ಪಡುವ ಮುಗಳಖೋಡ-ಕೋಟನೂರು ಮಠದ ಪೀಠಾಧಿಪತಿ ಈ ಮುರುಘಾ ಅಲಿಯಾಸ್ ಮುರುಘಾರಾಜೇಂದ್ರ ಸ್ವಾಮಿ. 22 ವರ್ಷದ ಈ ಕೊಬ್ಬಿದ ಗೂಳಿಗೆ ಮಜಾ ಮಾಡುವುದೇ ನಿತ್ಯ ಕಾಯಕ. ಪ್ರತಿ ದಿನವೂ ಡಿಸೆಂಬರ್ 1 ಏಕೆ ಆಗಬಾರದು ಎನ್ನುತ್ತಾನೆ ಮುರುಘಾ. ಏಕೆಂದರೆ ಅವತ್ತು ಅವನ ಹುಟ್ಟುಹಬ್ಬ. ಈ ಹುಚ್ಚುಪ್ಯಾಲಿ ಸ್ವಾಮಿಯ ಹುಟ್ಟುಹಬ್ಬದ ಮೆರವಣಿಗೆಯ ಸಮಾರಂಭವನ್ನು ಜಿಲ್ಲಾಧಿಕಾರಿ ಪಂಕಜಕುಮಾರ್ ಪಾಂಡೆ ಉದ್ಘಾಟಿಸಿದರೆ, ಎಸ್.ಪಿ. ಮನಿಷ್ ಕರ್ಬೀಕರ್, ಸುಫಲ ಮಠದ ಶಿವಾಚಾರ್ಯರು ಬಂದು 'ಹ್ಯಾಪಿ ಬರ್ತ್‌ಡೇ ಟು ಯು' ಎಂದು ಹೇಳಿಹೋಗುತ್ತಾರೆ. ಇವರನ್ನು ಬಿಡಿ, ಜಿಲ್ಲಾ ಉಸ್ತುವಾರಿ ಸಚಿವ ದರ್ಶನಾಪುರ, ಪಶು ಸಂಗೋಪನಾ ಸಚಿವ ರೇವೂ ನಾಯಕರಿಗೂ ಬುದ್ಧಿ ಬೇಡವೇ? ಈ ಇಬ್ಬರು ಮಾನಗೇಡಿಗಳು ಸ್ವಾಮಿಗೆ ವಿಶ್ ಮಾಡಿ, ಆಶೀರ್ವಾದ ಪಡೆದುಹೋಗಿವೆ.

ಗುಲ್ಬರ್ಗಾ


ಮುಂಜಾನೆ 10 ಕ್ಕೆ ಆರಂಭವಾದ ಮುರುಘಾನ ಬರ್ತ್‌ಡೇ ಮೆರವಣಿಗೆ ತಿರುಗಿ ಮಠ ಮುಟ್ಟಿದ್ದು ಎಷ್ಟಕ್ಕೆ ಗೊತ್ತೆ? ಮಧ್ಯರಾತ್ರಿ 12 ಗಂಟೆ ಹೊತ್ತಿಗೆ! ಹಾದ್ಯಲ್ಲೇ ಮುರುಘಾ, ಅಂತೂ ಗಿನ್ನೆಸ್ ರೆಕಾರ್ಡ್ ಮಾಡಿಯೇ ಬಿಟ್ಟೆಯಲ್ಲ! ಇಡೀ ಗುಲ್ಬರ್ಗಾದ ಟ್ರಾಫಿಕ್ಕೇ ಅಸ್ತವ್ಯಸ್ತಗೊಂಡು ಬಿಟ್ಟಿತ್ತು, ಈ ಪಂಡರಾಪಟ್ಟಿ ಸ್ವಾಮಿಯ ಮೆರವಣಿಗೆಗೆಂದೇ ರಸ್ತೆಯ ಒಂದು ಬದಿಯನ್ನು ರಿಸರ್ವ್ ಮಾಡಿತ್ತು ಮೂರ್ಖ ಜಿಲ್ಲಾಡಳಿತ.

ಆವೊತ್ತು ಸ್ವಾಮಿಗೆ ದೊರೆತ ಬರ್ತ್‌ಡೇ ಗಿಫ್ಟುಗಳೇನು ಎಂಬ ಕುತೂಹಲವೇ ಓದುಗರೆ? 60 ಲಕ್ಷ ರೂ. ಬೆಲೆ ಬಾಳುವ ಬಂಗಾರದ ಕಿರೀಟ! 11 ಲಕ್ಷ ರೂ. ಮೊತ್ತದ ವಜ್ರದ ಉಂಗುರ! 25 ಲಕ್ಷದ ಕಾರು! ಈ ಗಿಫ್ಟು ಕೊಟ್ಟವರ್‍ಯಾರು? ಜನರ ತೆರಿಗೆ ಹಣ ದೋಚಿದ ಮಂತ್ರಿಗಳೆ? ಅಧಿಕಾರಿಗಳೆ? ಎಲ್ಲವೂ ನಿಗೂಢ. ಇಂತಹ ಅಸಹ್ಯಕರ ಬರ್ತ್‌ಡೇ ಮೆರವಣಿಗೆ ನೋಡಿ ಖುಷಿಗೊಂಡ ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ ಪತ್ರಿಕೆಗಳು ಗುಲ್ಬರ್ಗಾ ಆವೃತ್ತಿಯ ಮುಖಪುಟಗಳಲ್ಲಿ ಈ ಚಾರ್‌ಸೊಬೀಸ್ ಸ್ವಾಮಿಯನ್ನು ಕಾಮಧೇನು, ಕಲ್ಪವೃಕ್ಷ ಎಂದೆಲ್ಲ ಗುಣಗಾನ ಮಾಡುತ್ತವೆ ಎಂದರೆ ಏನು ಹೇಳಬೇಕು ಹೇಳಿ.

ಧರ್ಮು ಸಹ ಶಿಷ್ಯರೇ!

ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಸಹ ಈ ಮುರುಘಾನ ಭಕ್ತರೇ. ಪಾಪ, ಚಾಮುಂಡೇಶ್ವರಿ ಉಪಚುನಾವಣೆಯ ಗಡಿಬಿಡಿಯಲ್ಲಿ ಅವರಿಗೆ ಬರ್ತ್‌ಡೇ ಪಾರ್ಟಿಗೆ ಹಾಜರಾಗಲು ಆಗಲಿಲ್ಲವಂತೆ.

ಅದಿರಲಿ, ಈ ಮುರುಘಾ ಪೀಠವೇರಲು ಧರ್ಮಸಿಂಗ್ ಸಾಹೇಬರೂ ಕಾರಣರಾಗಿದ್ದಾರೆ. ಈ ಮೊದಲು ಸ್ವಾಮಿಯಾಗಿದ್ದ, ಲೋಲುಪ ಸ್ವಾಮಿ ಎಂದೇ ಕುಖ್ಯಾತನಾಗಿದ್ದ ಸಿದ್ಧರಾಮೇಶ್ವರ ಸತ್ತಾಗ, ಆತನ ಶವದ ಮುಂದೆ ಉತ್ತರಾಧಿಕಾರಕ್ಕಾಗಿ ರಾದ್ಧಾಂತ ನಡೆದು ಇನ್ನೇನು ಚಪ್ ಚಪ್ಲೀಲಿ ಹೊಡೆದಾಟ ಆಗುತ್ತೇನೊ ಎನ್ನುವ ಮಟ್ಟ ಮುಟ್ಟಿತ್ತು. ಬಸವರಾಜದೇವರು, ಮುರುಘಾ ಉತ್ತರಾಧಿಕಾರಿಯಾಗಲು ಸ್ಪರ್ಧೆಗೆ ಬಿದ್ದಿದ್ದರು. ಆಗ ಶವಸಂಸ್ಕಾರಕ್ಕೆ ಬಂದಿದ್ದ ಧರ್ಮಸಿಂಗ್ ಮತ್ತು ಕೆಲ ಮಠಾಧೀಶರು ಸೇರಿ ವಿವಾದ ಬಗೆಹರಿಸಿ ಮುರುಘಾನಿಗೆ ಕಿರೀಟ ತೊಡಿಸಿಬಿಟ್ಟರು. ಆಗಿನ್ನೂ ಮುರುಘಾನಿಗೆ 20 ವರ್ಷ. ಗೂಳಿಯಂತಿದ್ದ ಮುರುಘಾ ಆಡಿದ್ದೇ ಆಟ ಎನ್ನುವಂತಾಯ್ತು, ಸದಾ 20-25 ಪಡ್ಡೆಗಳನ್ನು ಹಿಂದೆ ಕಟ್ಟಿಕೊಂಡು ಬಣ್ಣಬಣ್ಣದ ಪಾಶ್ ಕಾರ್‌ಗಳಲ್ಲಿ ತಿರುಗಿದ್ದೇ ತಿರುಗಿದ್ದು. ಹೆಂಗಸರನ್ನು ಕಂಡರೆ ಮುರುಘಾ ಚಿತ್ರವಿಚಿತ್ರವಾ[illegible] ಆಡುತ್ತಾನೆ. ಆಗಾಗ ವಿವೇಕಾನಂದರ ಸ್ಟೈಲಿನಲ್ಲಿ [illegible] ಕಾವಿ ಬಟ್ಟೆ ತೊಟ್ಟು, ತಲೆಗೊಂದು ರುಮಾಲು ಸುತ್ತಿಕೊಂಡ[illegible] ಕೈಯಲ್ಲೊಂದು ಪುಸ್ತಕ ಹಿಡಿದುಕೊಂಡು ಪೋಜು ಕೊಡು[illegible] ಖಯಾಲಿ ಬೇರೆ ಈ ಮುಠ್ಠಾಳ ಮುರುಘಾನಿಗ[illegible] ಧರ್ಮಸಿಂಗ್ ಸಿ.ಎಂ. ಆಗಿದ್ದಾಗ ಟ್ರಾನ್ಸ್‌ಫರ್ ಡೀಲುಗಳ[illegible] ಸಖತ್ ಮೇಯ್ದಿದ್ದ ಈ ಕಿರಾತಕ ಸ್ವಾಮಿಗೆ ಧರ್ಮಸಿಂಗ್[illegible] ಬಲಗೈ ಅಲ್ಲಮಪ್ರಭು ಪಾಟೀಲ ಸಹ ಶಿಷ್ಯನೇ.



ಸಿದ್ಧಮಹಾರಾಜ ಮತ್ತು ಸಿದ್ಧರಾಮೇಶ್ವರ

ಹಿಂದೆಲ್ಲಾ ಮುಗಳಖೋಡ, ಕೋಟನೂರ[illegible] ಜಿಡಗಾ ಮಠಗಳು ಸಮಾಜಮುಖಿಯಾಗಿ ಕೆಲ[illegible] ಮಾಡಿ ಹೆಸರು ಗಳಿಸಿವೆ. ಬಿಜಾಪುರದ ಲಚ್ಯಾ[illegible] ಗ್ರಾಮದ ವಿಶ್ವಕರ್ಮ ಜನಾಂಗದ ಸಿ[illegible] ಮಹಾರಾಜರು ಆರೂಢ ಪರಂಪರೆ[illegible] ಸಮೀಪವಿರುವ ಗುಂಪಾ ಪರಂಪರೆ ಆರಂಭ[illegible] ಜಾತಿ ಭೇದಭಾವ ಎಣಿಸದೇ ಸಮಾಜ[illegible] ಹಿತಕ್ಕಾಗಿ ದುಡಿದರು. ಸಾಯುವ ಮು[illegible] ಕುರುಬ ಸಮುದಾಯದ ಲಿಂಗ ಮಹಾರಾ[illegible]ರಿಗೆ ಪರಂಪರೆ ಮುಂದುವರೆಸುವ ಜವಾಬ್ದಾ[illegible] ನೀಡಿದರು. ನಂತರದ ದಿನಗಳಲ್ಲಿ ಈ ಪರಂಪ[illegible] ಬೆಳೆದು ಮುಗಳಖೋಡ, ಕೋಟನೂರು[illegible] ಜಿಡಗಾ ಮಠಗಳು ಜನಪ್ರಿಯವಾದವು. ಜಂಗಮ[illegible] ಜಾತಿಯ ಸಿದ್ಧರಾಮೇಶ್ವರ ಎಂಬಾತ ಪೀ[illegible] ಏರಿದ ಮೇಲೆ ಧರ್ಮಸಿಂಗ್‌ರಂತಹ ರಾ[illegible] ಕಾರಣಿಗಳು ಭವಿಷ್ಯ ಅರಸಿ ಈ ಮಠಗಳಿ[illegible] ಬರತೊಡಗಿದರು.

ಈಗಿನ ಮುರುಘಾನಿಗೆ ಸಖತ್ enjoy ಮಾಡು[illegible] ಚಟ. ಈಗಿನ್ನೂ 22 ವರ್ಷ. ಸಾಯುವ ಹೊತ್ತಿಗೆ ಮಠ[illegible] ಆಸ್ತಿ ಕರಗಿಸಲಿದ್ದಾನೆ ಈ ನಾನ್‌ಸೆನ್ಸ್ ಸ್ವಾಮಿ.

ಕೋಟಿ ಖರ್ಚಿನಲ್ಲಿ 14 ಗಂಟೆಗಳ ಮೆರವಣಿಗೆ ನಡೆ[illegible] ಬರ್ತ್‌ಡೇ ಆಚರಿಸಿಕೊಂಡು ಲಕ್ಷಾಂತರ ಭಕ್ತರಿಗೆ ಅವಮಾ[illegible] ಮಾಡಿದ ಮುರುಘಾನನ್ನು ಮಠದಿಂದ ಒದ್ದೋಡಿಸು[illegible] ಕೆಲಸ ಶುರುವಾಗಬೇಕಿದೆ.

–ಶಿವರಂಜನ[illegible]

ನಾವು ಸೋತು ಗೆದ್ದಿದ್ದೇವೆ. ಮತದಾರ ನಮ್ಮ ಕೈಬಿಟ್ಟಿಲ್ಲ-ಕುಮಾರಸ್ವಾಮಿ

ಸುಜಲಾನ್‌ಗೆ 500 ಎಕರೆ ಧಾರೆ

ಕನ್ನಡಿಗರ ಮೇಲೆ 59 ಕೋಟಿ ಹೊರೆ

ಶಾಕಾಂಬರಿ-ತಂತಿ!

ಅದೆಲ್ಲಿಯ ತಂತಿ? ಇದೆಲ್ಲಿಯ ಶಾಕಾಂಬರಿ? ಶಾಕಾಂಬರಿಯು ತಂತಿಯನ್ನು ಜಗ್ಗಿದ್ದು ಹೇಗೆ? ಎಂದೆಲ್ಲ ಎಚ್.ಡಿ. ರೇವಣ್ಣನ 'ಅಧಿಪತ್ಯ' ಇರುವ **KPCL** ಮತ್ತು **KPTCL** ನ ಅಧಿಕಾರಿಗಳೇ ಆಶ್ಚರ್ಯಚಕಿತರಾಗಿಬಿಟ್ಟಿದ್ದಾರೆ.

ಡೆನ್ಮಾರ್ಕ್ ಮೂಲದ ಈ ಸುಜಲಾನ್ ಎನರ್ಜಿ ಲಿಮಿಟೆಡ್‌ನ ಚೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಗುಜರಾತಿ ಮೂಲದ ಮಿ. ತುಳಸಿ ತಂತಿಗೂ ಶಾಕಾಂಬರಿಗೂ ಸಂಪರ್ಕ ಏರ್ಪಟ್ಟದ್ದೇನೂ ಆಶ್ಚರ್ಯದ ವಿಷಯವಲ್ಲ. ಧರಂಸಿಂಗ್ ಸರ್ಕಾರವಿದ್ದಾಗಿನಿಂದಲೂ ವಿದ್ಯುತ್ ಇಲಾಖೆಯನ್ನು ತಮ್ಮ ಜಹಗೀರು ಮಾಡಿಕೊಂಡಿರುವ ಎಚ್.ಡಿ. ರೇವಣ್ಣರಿಗೆ ಒಂದಲ್ಲ ನೂರಾರು ತಂತಿ, ಕಂತ್ರಿಗಳ ಪರಿಚಯವಿದ್ದೇ ಇರುತ್ತದಲ್ಲವೆ? ವಿದ್ವತ್ತುರಹಿತ ವಿದ್ಯುತ್ ಮಂತ್ರಿ ರೇವಣ್ಣನಿಗೆ ಇಂತಹ ಲಿಂಕ್‌ಗಳನ್ನು ಪರಿಚಯಿಸಲೆಂದೇ ಅವರ ಪಿತಾಶ್ರೀಯವರು, ಕರೆಂಟಿನಲ್ಲೂ ಕರದಂಟು ತೆಗೆಯಬಲ್ಲ ಕೆ.ಸಿ.ಎನ್. ರೆಡ್ಡಿಯೆಂಬ ಪುರಾತನ ಪಳಿಯುಳಿಕೆಯೊಂದನ್ನು ರೇವಣ್ಣನ ಸಲಹಾಗಾರರನ್ನಾಗಿ ಮಾಡಿ, ಆಜೀವ ಸದಸ್ಯತ್ವ ನೀಡಿಬಿಟ್ಟದ್ದು ಸುಮ್ಮನೇನಾ?

ರೇವಣ್ಣನ ಸಂಜ್ಞೆಯಂತೆ ತುಳಸಿ ತಂತಿ ಕುಮಾರಣ್ಣನ ಶಾಕಾಂಬರಿಯನ್ನು ಮುಟ್ಟುವ ಹೊತ್ತಿಗೆ ಬಾಲಕೃಷ್ಣೇಗೌಡರ ಬಿ.ಎಸ್.ಕೆ. ಟ್ರೇಡಿಂಗ್ ಕಂಪನಿಯ ಅಕೌಂಟಿನಿಂದ ಶಾಕಾಂಬರಿಗೆ 4 ಕೋಟಿ 16 ಲಕ್ಷ ತಲುಪಿಬಿಟ್ಟಿರುತ್ತದೆ. ಬಳ್ಳಾರಿ ಗಣಿಯಲ್ಲಿ ಅಧ್ವಾನ ಮಾಡುತ್ತಲೇ, ಗದಗಿನ ಕಪ್ಪತ್ತಗುಡ್ಡಕ್ಕೂ ಅಟಕಾಯಿಸಿಕೊಂಡು, ಕೊನೆಗೆ ಮಂಗಳೂರು ಬಂದರಿನ ದಕ್ಷಿಣಕ್ಕೆ ಕೇವಲ ಐದು ಕಿ.ಮೀ. ಅಂತರದಲ್ಲಿ ಸುಜಲಾನ್ ಕಂಪನಿಗೆ 500 ಎಕರೆಗಳ ಭೂಮಿ ದಾನ ಮಾಡುತ್ತದೆ ರಾಜಪರಿವಾರ.

ಈ ಬಂದರಿನಿಂದಲೇ ಅಲ್ಲವೆ ಬಿ.ಎಸ್.ಕೆ.ಯ ಬೇನಾಮಿ ಅದಿರು ಸಚಿವ ನಾಗರಾಜಶೆಟ್ಟಿಯ ಗಣೇಶ್ ಶಿಪ್ಪಿಂಗ್ ಕಾರ್ಪೊರೇಷನ್ ಸಹಾಯದಿಂದ ವಿದೇಶಕ್ಕೆ ಸಾಗಿಸಲ್ಪಡುವುದು? ನವೆಂಬರ್ 16ರಂದು ಮುಂಬೈಯಲ್ಲಿ ಕುಳಿತು ತನ್ನ ಮಂಗಳೂರು ಪ್ರಾಜೆಕ್ಟ್‌ನ ಆರಂಭದ ಕುರಿತು ರಾಜಾರೋಷದಿಂದ ಹೇಳಿಕೆ ಕೊಟ್ಟಿದ್ದಾನೆ ತುಳಸಿ ತಂತಿ. ಅಲ್ಲಿಗೆ NTPCಗೆ 59ಕೋಟಿ ದಂಡ ಕಟ್ಟಲೇಬೇಕಾಗುತ್ತದೆ ರಾಜ್ಯ ಸರ್ಕಾರ. ಕನ್ನಡಿಗರ ತಲೆಗೆ ಬಣ್ಣದ ಟೋಪಿ ಬಿದ್ದಂತಾಯ್ತಲ್ಲವೆ?

ರಾಜಪರಿವಾರವನ್ನು ಹುಂಬ ಪರಿವಾರ ಎಂದು ಕರೆದರೆ ಅದು ನಮ್ಮ ನಿಮ್ಮ ಮೂರ್ಖತನವಾದೀತಷ್ಟೇ!


ಕುಮಾರಸ್ವಾಮಿಯ ಸ್ವಾರ್ಥಕ್ಕಾಗಿ ರಾಜ್ಯ ಸರ್ಕಾರಕ್ಕೆ 59 ಕೋಟಿ ದಂಡವೆ?

ರಾಜಪರಿವಾರದ ಕುಮಾರಸ್ವಾಮಿಯವರ ಬಿಸಿನೆಸ್ ಟ್ರೇಡ್ ಮಾರ್ಕ್ ಶಾಕಾಂಬರಿ ಎಂಟರ್‌ಪ್ರೈಸಸ್‌ನ 'ಅಗೋಚರ' ಬೆಂಬಲದಿಂದ ಗದಗಿನ ಕಪ್ಪತ್ತಗುಡ್ಡದಲ್ಲಿ ಸುಜಲಾನ್ ಕಂಪನಿಯ ಪವನಗೋಪುರಗಳ ಸ್ಥಾಪನಾ ಕಾರ್ಯ 'ಅಮೋಘ'ವಾಗಿ ಸಾಗುತ್ತಾ ಸುತ್ತಲಿನ ಗ್ರಾಮಗಳ ಜನರಿಗೆ ಕಿರಿಕಿರಿ ಶುರುಮಾಡಿಬಿಟ್ಟಿದೆ.

157.85 ಹೆಕ್ಟೇರ್ ಪ್ರದೇಶದಲ್ಲಿ 59 ಗಾಳಿಯಂತ್ರಗಳನ್ನು ಸ್ಥಾಪಿಸಲು ಅನುಮತಿ ಪಡೆದಿರುವ ಸುಜಲಾನ್ ಎನರ್ಜಿ ಲಿಮಿಟೆಡ್ ಈಗಾಗಲೇ 70 ಕ್ಕೂ ಹೆಚ್ಚು ಪಂಕಾಗಳನ್ನು ಸ್ಥಾಪಿಸಿ, ಇನ್ನೂ ನೂರಾರು ಪಂಕಾಗಳ ಸ್ಥಾಪನೆಯ ಕಾರ್ಯಕ್ಕೆ ಚಾಲನೆ ನೀಡುವ ಮೂಲಕ ಸಕಲ ಕಾನೂನು, ಒಪ್ಪಂದಗಳನ್ನು ಗಾಳಿಗೆ ತೂರಿಬಿಟ್ಟಿದೆ.

ಅಂದಂತೆ, 'ಲಂಕೇಶ್'ನ ಸೆಪ್ಟೆಂಬರ್ 27 ರ ಸಂಚಿಕೆಯಲ್ಲಿ 'ಕರೆಂಟ್ ಡೀಲ್‌ನಲ್ಲಿ ಕುಮಾರನ ದರೋಡೆ' ಎಂಬ ವರದಿಯಲ್ಲಿ ಸುಜಲಾನ್ ಕಂಪನಿಯು ಕುಮಾರಸ್ವಾಮಿ ಮಾಲೀಕತ್ವದ ಶಾಕಾಂಬರಿ ಎಂಟರ್‌ಪ್ರೈಸಸ್‌ಗೆ 10 ಗಾಳಿ ಯಂತ್ರ (wind mill)ಗಳನ್ನು 'ಕಾಣಿಕೆ'ಯಾಗಿ ನೀಡಿದ ವಿನೂತನ ಬಗೆಯ 'ಕಿಕ್‌ಬ್ಯಾಕ್' ಕುರಿತು ಸೂಕ್ಷ್ಮವಾಗಿ ಬರೆಯಲಾಗಿತ್ತಲ್ಲವೆ?

ತದನಂತರ ನಡೆದ ಬೆಳವಣಿಗೆಗಳಲ್ಲಿ ಕುಮಾರಸ್ವಾಮಿ ಸುಜಲಾನ್ ಕಂಪನಿಗೆ ಅನುಕೂಲಗಳನ್ನು ಮಾಡಿಕೊಡುವ ಭರದಲ್ಲಿ ಸರ್ಕಾರದ ಒಪ್ಪಂದಗಳನ್ನೇ ಸೈಡಿಗೆ ತಳ್ಳಿ ಕರ್ನಾಟಕ ತೆರಿಗೆದಾರನ ಮೇಲೆ 59 ಕೋಟಿ ರೂ.ಗಳ ಅಧಿಕೃತ ಹೊರೆಯನ್ನು ಹೊರಿಸುತ್ತಿದ್ದಾರೆ!



ಉರಿದು ಹೋದ ಮಂಗಳೂರಲ್ಲಿ ಅಕ್ಟೋಬರ್ 11 ರಂದು ಕಾಣಿಸಿಕೊಂಡ ಕುಮಾರಸ್ವಾಮಿ ಲಜ್ಜೆಗೆಟ್ಟವರಂತೆ 'ಮಂಗಳೂರು ಗಲಭೆಯ ತನಿಖೆಯ ಅವಶ್ಯವಿಲ್ಲ; ಅಭಿವೃದ್ಧಿಯತ್ತ ಯೋಚನೆ ಮಾಡೋಣ' ಎಂದು ಪಕ್ಕಾ ಸಂಘ ಪರಿವಾರಿ ಧ್ವನಿಯಲ್ಲಿ ಮಾತಾಡುತ್ತಿರುವಾಗಲೇ, ಇತ್ತ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿದ NTPC (National Thermal Power Corporation) ಅಧಿಕಾರಿಗಳು '1996 ರ ಒಪ್ಪಂದ ಮುರಿದು, NTPC ಗೆ ಮಂಗಳೂರಿನಲ್ಲಿ ಕೊಟ್ಟಿದ್ದ ಭೂಮಿಯನ್ನು ಸುಜಲಾನ್ ಕಂಪನಿಗೆ ನೀಡುತ್ತಿರುವುದರಿಂದ ರಾಜ್ಯ ಸರ್ಕಾರ NTPC ಗೆ 59 ಕೋಟಿ ರೂಪಾಯಿಗಳ ನಷ್ಟ ತುಂಬಿಕೊಡಬೇಕು' ಎಂದು ಏರುದನಿಯಲ್ಲಿ ಪ್ರಶ್ನಿಸುವ ಮೂಲಕ ಪರೋಕ್ಷವಾಗಿ ಕುಮಾರಸ್ವಾಮಿ-ಸುಜಲಾನ್ ಕಂಪನಿಗಳ 'ಅಗೋಚರ ಡೀಲ್' ಕುರಿತು ಪ್ರಸ್ತಾಪಿಸಿಬಿಟ್ಟರು.

ಸುಜಲಾನ್‌ಗಾಗಿ ಸಿಎಂ ಕ್ವಿಕ್!

ಇವತ್ತು ಭಾರತದಾದ್ಯಂತ ರೈತರು, ಆದಿವಾಸಿಗಳನ್ನೆಲ್ಲ ಒಕ್ಕಲೆಬ್ಬಿಸಿ ಬಹುರಾಷ್ಟ್ರೀಯ ಕಂಪನಿಗಳಿಗೆ 'ವಿಶೇಷ ಆರ್ಥಿಕ ವಲಯ' (SEZ)ಗಳನ್ನು ಸ್ಥಾಪಿಸಲು ಸಾವಿರಾರು ಎಕರೆ ಭೂಮಿಯನ್ನು ಕೊಡುತ್ತಿರುವ ಕ್ರೂರ ಪ್ರಭುತ್ವದ ಮತ್ತೊಂದು ಮಗ್ಗಲಾದ ಸ್ವಾರ್ಥ, ಭ್ರಷ್ಟತೆ ಬಿಚ್ಚಿಕೊಳ್ಳುತ್ತದಿಲ್ಲಿ.




ಸುಜಲಾನ್ ಚೇರ್ಮನ್ ತುಳಸಿ ತಂತಿ

ಕುಮಾರಸ್ವಾಮಿ, ಅನಿತಾಕುಮಾರಸ್ವಾಮಿ ಒಡೆತನದ ಶಾಕಾಂಬರಿ ಎಂಟರ್‌ಪ್ರೈಸಸ್‌ಗೆ ಗದಗಿನ ಕಪ್ಪತ್ತಗುಡ್ಡದಲ್ಲಿ 10 ಗಾಳಿಯಂತ್ರಗಳ ಗಿಫ್ಟ್ ನೀಡಿದ್ದಲ್ಲದೇ, ಅವುಗಳ ನಿರ್ವಹಣೆಯ ಜವಾಬ್ದಾರಿಯನ್ನು ತಾನೇ ಹೊತ್ತುಕೊಂಡು, ಶಾಕಾಂಬರಿಯ ಮಡಿಲಿಗೆ ವಾರ್ಷಿಕ 12 ಕೋಟಿ ರೂ.ಗಳು ಅನಾಯಾಸವಾಗಿ ಬಂದು ಬೀಳುವಂತಹ ವ್ಯವಸ್ಥಿತ ಏರ್ಪಾಟು ಮಾಡಿದ ಸುಜಲಾನ್ ಎನರ್ಜಿ ಲಿಮಿಟೆಡ್‌ನ 'ಔದಾರ್ಯ'ಕ್ಕೆ ದಾನಶೂರ ಕುಮಾರಸ್ವಾಮಿಗಳ ಪ್ರತಿಕ್ರಿಯೆ ಏನು ಗೊತ್ತೆ?

ಉಡುಪಿಯ ಪಡುಬಿದ್ರಿ, ಬಳಿ SEZ ಸ್ಥಾಪಿಸಲು 500 ಎಕರೆಗಳ ಭೂಮಿಯನ್ನೇ ಸುಜಲಾನ್ ಕಂಪನಿಗೆ ಧಾರೆ ಎರೆದು ಬಿಟ್ಟಿದ್ದಾರೆ ಯುವರಾಜ ಕುಮಾರಸ್ವಾಮಿ! NTPC ಗೆ ಕೊಡಲ್ಪಟ್ಟಿದ್ದ ಭೂಮಿಯನ್ನೇ ಕಿತ್ತುಕೊಂಡು ಸುಜಲಾನ್‌ಗೆ ಕೊಟ್ಟಿರುವುದರಿಂದ ರಾಜ್ಯದ ತೆರಿಗೆದಾರರ 59 ಕೋಟಿ ರೂ.ಗಳಿಗೆ ಕತ್ತರಿ ಬೀಳುವಂತಾಗಿಬಿಟ್ಟಿದೆ.

1996 ರಲ್ಲಿ ರಾಜ್ಯ ಸರ್ಕಾರ, ವಿದ್ಯುತ್ ಸಚಿವಾಲಯ, ಸಾರ್ವಜನಿಕ ಉದ್ಯಮ NTPC ಗಳ ಮಧ್ಯೆ ನಡೆದ ತ್ರಿಪಕ್ಷಿಯ ಒಪ್ಪಂದದಂತೆ, ವಿದ್ಯುತ್ ಉತ್ಪಾದನೆಗೆಂದು NTPC ಗೆ ಪಡುಬಿದ್ರಿ ಬಳಿ 398.07 ಎಕರೆ ಭೂಮಿ ನೀಡಬೇಕಾಗಿತ್ತು. ಒಪ್ಪಂದದಂತೆ ಮೊದಲ ಹಂತದಲ್ಲಿ 92.95 ಎಕರೆ ಭೂಮಿಯನ್ನು ಪಡೆದ NTPC ಭೂಪ್ರದೇಶದಲ್ಲಿ ಪೂರ್ವಭಾವಿ ತಯ್ಯಾರಿಗಳನ್ನಾಗಲೇ ಆರಂಭಿಸಿಬಿಟ್ಟಿತ್ತು. ಒಪ್ಪಂದದಲ್ಲಿ ರಾಜ್ಯ ಸರ್ಕಾರವೇನಾದರೂ ಆ ಭೂಮಿಯನ್ನು ಬೇರೆ ಉದ್ದೇಶಕ್ಕಾಗಿ ಬಳಸಬೇಕಾದಲ್ಲಿ, NTPC ಗೆ 21 ಕೋಟಿ ರೂ.ಗಳ ಪರಿಹಾರ ನೀಡಬೇಕು ಎಂಬ ತರಕಾರು ವಿಧಿಸಲಾಗಿತ್ತು.



ಗದುಗಿನಲ್ಲಿ ಸುಜಲಾನ್

ಆದರೇನು? ಇನ್ನೆಂದೂ ಅಧಿಕಾರ ಸಿಗುವುದಿಲ್ಲವೆಂದು ಖಾತ್ರಿ ಮಾಡಿಕೊಂಡಿರುವ ಗೌಡರ ರಾಜಪರಿವಾರಕ್ಕೆ ತ್ವರಿತ ಸಂಪನ್ಮೂಲ ಸಂಗ್ರಹಣೆಯೇ ಏಕೈಕ ಆದ್ಯತೆಯಾಗಿರುವುದರಿಂದ ಕಪ್ಪ ಕೊಡುವ ಸುಜಲಾನ್‌ಗಳಿಗೆಲ್ಲ ಭೂದಾನ, ರಿಯಾಯ್ತಿ, ಮತ್ತಿತರ ಸಕಲ ಸರ್ಕಾರಿ ಸೌಕರ್ಯಗಳನ್ನು ಒದಗಿಸುವಾಗ, ಎಲ್ಲ ಕಾನೂನು, ಒಪ್ಪಂದಗಳೂ ಗೌಡರ ಕುಟುಂಬಕ್ಕೆ ಕಾಲ ಕಸವೇ.

ನಮ್ಮ ಸೆಪ್ಟೆಂಬರ್ 27 ರ ಸಂಚಿಕೆ (18 ನೇ ತಾರೀಖು ಮಾರುಕಟ್ಟೆಯಲ್ಲಿತ್ತು) ಹೊರಬಿದ್ದ ಕೆಲ ದಿನಗಳ ಅಂತರದಲ್ಲೇ ಸುಜಲಾನ್ 246 ಕೋಟಿ ಮೊತ್ತದ ಗಾಳಿ ವಿದ್ಯುತ್ ಉತ್ಪಾದನಾ ಯೋಜನೆಗೆಂದು 500 ಎಕರೆ ಭೂಮಿಗಾಗಿ ಸಲ್ಲಿಸಿದ ಅರ್ಜಿಯನ್ನು ಕೇಂದ್ರದ ಬೋರ್ಡ್ ಆಫ್ ಅಪ್ರೂವಲ್ ಮಿಂಚಿನ ವೇಗದಲ್ಲಿ ಕ್ಲಿಯರ್ ಮಾಡಿಬಿಟ್ಟಿತು. ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿರುವ ರಾಜ್ಯ ಉನ್ನತ ಮಟ್ಟದ ಸಮಿತಿಯಂತೂ ಕಣ್ಣುಮುಚ್ಚಿ ಸುಜಲಾನ್‌ಗೆ ಪಡುಬಿದ್ರಿ, ಬಳಿಯ 500 ಎಕರೆ ಜಮೀನನ್ನು ಧಾರೆಯೆರೆದು ಕೊಟ್ಟುಬಿಟ್ಟಿತು. ಅಲ್ಲಿಗೆ ಗದಗಿನ ಕಪ್ಪತಗುಡ್ಡದಲ್ಲಿ ಶಾಕಾಂಬರಿ ಎಂಟರ್‌ಪ್ರೈಸಸ್‌ಗೆ ಸುಜಲಾನ್ ಕೊಡಮಾಡಿದ ಕಾಣಿಕೆಯ 'ಋಣ' ತೀರಿಸಿದಂತಾಗಿತ್ತು. ಜೊತೆಗೆ ಸಾರ್ವಜನಿಕ ಉದ್ಯಮ NTPC ಯನ್ನು ಬದಿಗೊತ್ತಿ ಬಹುರಾಷ್ಟ್ರೀಯ ಖಾಸಗಿ ಕಂಪನಿ ಸುಜಲಾನ್‌ಗೆ ಭೂಮಿ ನೀಡಿದ್ದಕ್ಕಾಗಿ ಕುಮಾರಸ್ವಾಮಿ ನೇತೃತ್ವದ ಉನ್ನತ ಮಟ್ಟದ ಸಮಿತಿಗೆ ಅದೆಷ್ಟು ಕೋಟಿಗಳ 'ಕಿಕ್‌ಬ್ಯಾಕ್' ಅಮೌಂಟು ಸಿಕ್ಕಿತೊ? ಆದರೆ ಅಕ್ಟೋಬರ್ 11 ರಂದು 21 ಕೋಟಿ ರೂ. ಪರಿಹಾರ ಮತ್ತು ತಾನು ಖರ್ಚು ಮಾಡಿದ 38 ಕೋಟಿ ರೂ.ಗಳನ್ನು ಸರಿದೂಗಿಸಲು 59 ಕೋಟಿ ರೂ.ಗಳನ್ನು ಕೊಡಬೇಕೆಂದು ರಾಜ್ಯ ಸರ್ಕಾರಕ್ಕೆ NTPC ಕೇಳುವ ಮೂಲಕ ಶಾಕಾಂಬರಿ-ಸುಜಲಾನ್‌ಗಳ ಕತ್ತಲ ವ್ಯವಹಾರದ ಮೇಲೆ ಬೆಳಕು ಚೆಲ್ಲಲ್ಪಟ್ಟುಬಿಟ್ಟಿತು.

59 ಕೋಟಿ: ಯಾರಪ್ಪನ ಆಸ್ತಿ?

ಅಮೆರಿಕ, ಆಸ್ಟ್ರೇಲಿಯಾ, ಯುರೋಪ್, ಏಷ್ಯಾದಲ್ಲಿ ಕಾರ್ಯಾಚರಣೆ ಹೊಂದಿರುವ ಸುಜಲಾನ್ ಎನರ್ಜಿ ಲಿಮಿಟೆಡ್ ನಮ್ಮ ಸಾರ್ವಜನಿಕ ಉದ್ಯಮ NTPC ಗಿಂತ ಶ್ರೇಷ್ಠವಾಗಿಬಿಟ್ಟಿತಾ ಕುಮಾರಸ್ವಾಮಿಯವರೇ? 31 ವರ್ಷಗಳ ಇತಿಹಾಸವಿರುವ, ವಿಶ್ವದ ಅತಿ ಹೆಚ್ಚು ಶಾಖೋತ್ಪನ್ನ ವಿದ್ಯುತ್ ಉತ್ಪಾದಿಸುವ ಕಂಪನಿಗಳಲ್ಲಿ 6 ನೇ ಸ್ಥಾನದಲ್ಲಿರುವ, ಉತ್ಪಾದಿತ ವಿದ್ಯುತ್ತನ್ನು ಅತಿ ಪರಿಣಾಮಕಾರಿಯಾಗಿ, ಫಲಪ್ರದವಾಗಿ ಬಳಸಿಕೊಳ್ಳುವ ಜಾಗತಿಕ ಕಂಪನಿಗಳ ಪೈಕಿ 2 ನೇ ಸ್ಥಾನದಲ್ಲಿರುವ NTPCಯನ್ನೇ ನಿರ್ಲಕ್ಷಿಸಿ, ಒಪ್ಪಂದ ಉಲ್ಲಂಘಿಸಿ ಡೆನ್ಮಾರ್ಕ್ ಮೂಲದ ಸುಜಲಾನ್ ಎನರ್ಜಿ ಲಿಮಿಟೆಡ್‌ಗೆ ಮಣೆ ಹಾಕಿದ ಮುಖ್ಯಮಂತ್ರಿಯ ಅಪರಿಮಿತ ಉತ್ಸಾಹದ ಹಿಂದೆ ಗದಗಿನ ಕಪ್ಪತಗುಡ್ಡದಲ್ಲಿ ಶಾಕಾಂಬರಿ ಕಂಪನಿ ಪಡೆದ ಪುಗಸಟ್ಟೆ ಬಳುವಳಿಯ ನೆರಳೇ ಗೋಚರಿಸುತ್ತಿದೆಯಲ್ಲವೆ?

ಈಗ ಇನ್ನಾವ ದಾಖಲೆ ಹಿಡಿದುಕೊಂಡು ಪ್ರೆಸ್ ಮೀಟ್‌ಗೆ ಬರಲಿದ್ದಾರೆ ಪುತ್ರಪ್ರೇಮಿ ಪಿತಾಶ್ರೀ ದೇವೇಗೌಡರು?...... 'ಇದೊಂದು ಸಹಜ 'ಸರ್ಕಾರಿ ಉಪಕ್ರಮ'ವೆಂದು ಮತ್ತೊಮ್ಮೆ ಮಗನ ಪರ ವಕೀಲಿಗೆ ಯಾವಾಗ ಬರುತ್ತಾರೆ ಗೌಡಾಜಿ?

ಆರ್ಭಟ-ಆಟಾಟೋಪ, ಸಂವಿಧಾನಕ್ಕೆ ಸವಾಲು ಎಸೆಯುವ ಧಾಡಸಿತನ, ಹಣ-ಹೆಂಡ, ಮೊಬೈಲು-ಚಿನ್ನ ಹಂಚುವ ಘನಂಧಾರಿ ಕೆಲಸಗಳಿಂದಾಗಿ ಚಾಮುಂಡೇಶ್ವರಿಯ ಮತದಾರನಿಂದ ಮುಖಕ್ಕೆ ಉಗಿಸಿಕೊಂಡಿರುವ ಮಾಜಿ ಪಿಎಮ್ಮು ಮೌನವ್ರತಕ್ಕೆ ಜಾರಿದರೆ ಒಳ್ಳೆಯದೇನೊ?


ಅಂದಂತೆ 'ಮಂಗಳೂರು ಗಲಭೆಯ ತನಿಖೆಯ ಅವಶ್ಯವಿಲ್ಲ; ಅಭಿವೃದ್ಧಿಯತ್ತ ಗಮನ ಕೊಡೋಣ' ಎಂದಿದ್ದರಲ್ಲ ಸಿ.ಎಂ. ಸಾಹೇಬರು? ಸುಜಲಾನ್‌ಗಳಿಗೆ ಮಣೆ ಹಾಕುವುದೇ ಅಭಿವೃದ್ಧಿನಾ ಮಿ. ಕುಮಾರಸ್ವಾಮಿ? NTPC ಗೆ ಸರ್ಕಾರ ತೆರಬೇಕಿರುವ 59 ಕೋಟಿ ರೂ. ಯಾರಪ್ಪನ ಮನೆಯ ಸ್ವತ್ತು ಮಹನೀಯ ಮುಖ್ಯಮಂತ್ರಿಗಳೆ?

-ಪಿ.ಕೆ. ಮಲ್ಲನಗೌಡರ್

ಗದಗ: ಸುಜಲಾನ್‌ನ ಧಗಧಗ

ಗದಗ, ಮುಂಡರಗಿ, ಶಿರಹಟ್ಟಿ ತಾಲೂಕು ವ್ಯಾಪ್ತಿಗಳಲ್ಲಿ 60 ಕಿ.ಮೀ. ಹರಡಿ, ಚಿನ್ನ-ತಾಮ್ರದ ಅದಿರುಗಳ ನಿಕ್ಷೇಪ, ಅಮೂಲ್ಯ ಔಷಧಿ ಸಸ್ಯಗಳ ತಾಣವಾಗಿರುವ ಕಪ್ಪತ್ತಗುಡ್ಡದಲ್ಲೀಗ ಸುಜಲಾನ್ ಕಂಪನಿಯದ್ದೇ ಕಾರುಬಾರು.

ಕುಮಾರಸ್ವಾಮಿಯ ಶಾಕಾಂಬರಿ ಎಂಟರ್‌ಪ್ರೈಸಸ್‌ಗೆ 10 ವಿಂಡ್‌ಮಿಲ್‌ಗಳನ್ನು ದಯಪಾಲಿಸಿದ ಕಾರಣಕ್ಕಾಗಿಯೋ ಏನೋ, ಸುಜಲಾನ್ ಇಲ್ಲಿ ಮನಸ್ಸಿಗೆ ಬಂದಂತೆ ಗಾಳಿಗೋಪುರಗಳನ್ನು ಸ್ಥಾಪಿಸುತ್ತಿದೆ. ಸದ್ಯ ಸುಜಲಾನ್‌ನ ಈ ಯೋಜನೆಯ ಉಸ್ತುವಾರಿ ಹೊತ್ತಿರುವ ಪಿ. ರಾಘವನ್, ಕುಂತಿನಾಥ್‌ಗಳು ತಮ್ಮ ಬುಲ್ಡೋಜರ್, ವಾಹನಗಳನ್ನು ಓಡಿಸಲು ಅಮೂಲ್ಯ ಅರಣ್ಯ ಸಂಪತ್ತನ್ನು ನಾಶ ಮಾಡಿ ರಸ್ತೆ ಮಾಡಿಕೊಂಡಿದ್ದಾರೆ. ಗಾಳಿಯಂತ್ರ ಸ್ಥಾಪನೆಗೆ ಗುಂಡಿ ತೋಡಲು ನಡೆಸುವ ಬ್ಲಾಸ್ಟಿಂಗ್‌ಗಳಿಂದ ಐತಿಹಾಸಿಕ ಕಣವಿ ಹನುಮಂತದೇವರು ಮತ್ತು ದುರ್ಗಮ್ಮ ದೇವಸ್ಥಾನಗಳು ಧ್ವಂಸಗೊಂಡಿವೆ. ಒಂದೊಂದು ಗಾಳಿಯಂತ್ರ ಸ್ಥಾಪನೆಗೆ ಎರಡೆರಡು ಎಕರೆ ಅರಣ್ಯ ಕಬಳಿಸಲಾಗುತ್ತಿದೆ. ಕೇಂದ್ರ ಸರ್ಕಾರಕ್ಕೆ 9 ಕೋಟಿ 33 ಲಕ್ಷ ರೂ. ಪಾವತಿಸಿ 30 ವರ್ಷಗಳ ಕಾಲ ಲೀಜ್ ಪಡೆದಿರುವ ಸುಜಲಾನ್ ತನಗೆ ಅನುಮತಿ ಇರುವ 157.85 ಹೆಕ್ಟೇರ್ ಪ್ರದೇಶವನ್ನು ಮೀರಿ ಕಾರ್ಯಾಚರಣೆಗಿಳಿದಿದೆ. 59 ಗಾಳಿಯಂತ್ರಗಳ ಮಿತಿ ದಾಟಿ 70 ಕ್ಕಿಂತ ಹೆಚ್ಚು ಗಾಳಿಯಂತ್ರಗಳನ್ನು ಸ್ಥಾಪಿಸಲಾಗಿದೆಯಲ್ಲದೇ, ಇನ್ನೂ ನೂರಾರು ಗಾಳಿಯಂತ್ರಗಳು ಸ್ಥಾಪನೆ ಆಗುತ್ತವಂತೆ. ಸುಜಲಾನ್‌ಗೆ ಕುಮಾರಸ್ವಾಮಿಯ ಅಭಯ ಹಸ್ತ ಇರುವುದರಿಂದ ಅರಣ್ಯ ಇಲಾಖೆ ತುಟಿಪಿಟಿಕ್ ಎನ್ನುತ್ತಿಲ್ಲ.



ಎಸ್. ಎಸ್. ಪಾಟೀಲ್

ಮುಂಡರಗಿ ತಾಲ್ಲೂಕಿನ ಹಿರೇವಡ್ಡಟ್ಟಿ, ಹಾರೋಗೇರಿ, ಮುಷ್ಟಿಕೊಪ್ಪ ಬಾಗೇವಾಡಿ ಸೇರಿದಂತೆ 15 ಗ್ರಾಮಗಳ ವ್ಯಾಪ್ತಿಯಲ್ಲಿ ಸುಜಲಾನ್ ಕಾರ್ಯಾಚರಣೆ ನಡೆಸಿದೆ. ಹಿರೇವಡ್ಡಟ್ಟಿಯ ಗ್ರಾಮ ಪಂಚಾಯತಿ ಸುಜಲಾನ್‌ಗೆ ಪರವಾನಗಿ ನೀಡಲು ನಿರಾಕರಿಸಿತಲ್ಲದೇ, ಗ್ರಾಮಸ್ಥರೆಲ್ಲರೂ ಸುಜಲಾನ್‌ಗೆ ಅಡ್ಡಿಪಡಿಸಿದರು. ಆದರೆ ಮುಂಡರಗಿ ಕಾಂಗ್ರೆಸ್ ಶಾಸಕ ಎಸ್.ಎಸ್. ಪಾಟೀಲ್ ಸುಜಲಾನ್ ಹಿಂದೆ ನಿಂತುಬಿಟ್ಟಿರುವುದರಿಂದ ಮುಂಡರಗಿ ಸಿಪಿಐ ಪಿ.ಕೆ. ಪಾಟೀಲ್ ಪ್ರತಿಭಟಿಸಿದ ಜನರನ್ನು ಬೆದರಿಸಿ, ಗ್ರಾಮದ ಅಭಿವೃದ್ಧಿಗೆ 10 ಲಕ್ಷ ರೂ. ಕೊಡಿಸುವುದಾಗಿ ಸುಳ್ಳು ಹೇಳಿ, ತಾನೇ 5 ಲಕ್ಷ ಗುಳುಂ ಮಾಡಿರುವ ಸುದ್ದಿಗಳಿವೆ. ಸುಜಲಾನ್‌ಗೆ ಸಹಕಾರ ನೀಡುತ್ತಿರುವುದಕ್ಕೆ ಪ್ರತಿಯಾಗಿ ಶಾಸಕ ಎಸ್.ಎಸ್. ಪಾಟೀಲ್ ಮತ್ತು ಆತನ ಪುತ್ರ ಶಿವಕುಮಾರ್ ಪಾಟೀಲ್‌ಗೆ 3 ಇಂಡಿಕಾ ಕಾರ್‌ಗಳು ಲಭ್ಯವಾಗಿವೆ ಎಂದು ಇಡೀ ತಾಲ್ಲೂಕೇ ಮಾತಾಡುತ್ತಿದೆ. ಜೆಡಿಎಸ್‌ನ ಮರಿಪುಢಾರಿಗಳಿಗೂ ಸುಜಲಾನ್ ತೀರ್ಥ ತಲುಪಿಯಾಗಿದೆ. ಕರ್ನಾಟಕ ವಿದ್ಯುತ್ ನಿಗಮ (KPCL) ಮಾಡಬಹುದಾಗಿದ್ದ ಕೆಲಸವನ್ನು ಅದ್ವಾನಿ ಸುಜಲಾನ್‌ಗೆ ಕೊಟ್ಟು, ಕಪ್ಪತ್ತಗುಡ್ಡವನ್ನೇ ಬೋಳಿಸುತ್ತಿರುವ ಕುಮಾರಸ್ವಾಮಿಗೆ ಗದಗಿನ ಜನ ಛಿ, ಥೂ ಎನ್ನಲಿದ್ದಾರಷ್ಟೇ.

ಚುನಾವಣೆಯಲ್ಲಿ ಅಕ್ರಮ ನಡೆದಿರುವುದರಿಂದ ನಾನು ಬಾಯಿಗೆ ಬಟ್ಟೆ ಕಟ್ಟಿಕೊಂಡು ಮತ ಹಾಕಿದೆ -ಗುರುಸ್ವಾಮಿ

ಜೆ.ಡಿ.ಎಸ್ಸು ಪ್ರಾಮಾಣಿಕವಾಗಿ ಪಡದಿರೊ ಓಟು ಹದುನೈದ್‌ಸವುರ

ಬಯಲು ಸೀಮೆಯ ಕಟ್ಟೆಪುರಾಣ

ಚಾಮುಂಡೇಶ್ವರಿ ಚುನಾವಣೆಯ ಕಾವು ಇನ್ನೂ ಇಳಿದಿರಲಿಲ್ಲ. ಜುಮ್ಮಿ, ಉಗ್ರಿ, ಸೀರ. ಅಳೆದು ಸುರಿಯುವುದನ್ನು ನೋಡಿ ಸಾಕಾದ ಕಾಳಮಾವ,

"ಬುದಿರ್ಲಿ ಹೋಗಲತ್ತಗೆ. ಯಲಕ್ಷನ್ ಮುಗುದು ಮೂರದಿನಾದ್ರು ಅದೇನ್ ಮಾತಾಡ್ತಿರಿ?" ಎಂದ.

"ಸದ್ಯಕೆ ಇಸ್ಟಾವ ಸುದ್ದಿದತು ಮಾವ. ಮಾತಾಡಕ್ಕೆ. ನಾವು ಇದುವರಿಗೂ ಇಂತ ಚುನಾವಣೆ ನೋಡಿರಲಿಲ್ಲ, ಕೇಳಿರಲಿಲ್ಲ, ಅದ್ಕೆ ಮಾತಾಡ್ತಿವಿ. ನೀನು ಸುಮ್ಮನಿರು."

"ನಾನು ಸುಮ್ಮನಿರದೆ ಇನ್ನೇನು ನ್ಯಗದಾಡ್ಲನೆ. ನೀವೆಯಪ್ಪ ತಲಿಗೆ ತಟ್ಟಗೆ ಮಾತಾಡೋರು. ಯಂಗೊ ಗೆದ್ನಲ್ಲ ಅತ್ತಗೆ ಅಂತ ಸುಮ್ಮನಾಗಕ್ಕೇನೂ?"

"ಕಾಳಮಾವ. ಈಗ ನ್ಯಡದಿರೊ ಯಲಕ್ಷನ್ನಿನ ವಿಷಯುದಲ್ಲಿ ಸುಮ್ಮನಿರಕ್ಯಾಗದಿಲ ಕಣೊ. ವಸ ತಲಿಮಾರಿನ ಜನಾಂಗ ಯಲಕ್ಷನ್ನ ಅಂದ್ರೆ ಹಿಂಗೆಯಾ ಅಂತ ತಿಳಕಂಡ್ರೆ ಕತಿಯೇನೂ ಅಂತ ಹೆದ್ರಿಕಾಗ್ಯದೆ ನಮಿಗೆ."

"ನಿಜ ಕಂಡ್ಯ ಉಗ್ರಿ, ಯಲಕ್ಷನ್ನು ಹಿಂಗಾದ್ರೆ ಬಡಬಗ್ಗರು ನಿಲ್ಲಕಾದತೇ? ರಾಜಕೀಯ ಮಾಡಕ್ಯಾದತೇ ಅಂತ ಯೇಚನೆ ಬಂದದೆ ನಂಗೆ" ಎಂದಳು ಜುಮ್ಮಿ.

"ಡಿ.ಕೆ. ಶಿವಕುಮಾರ ಇಲ್ದೆಯಿದ್ರೆ ಸೋತುಬುಡೋನು ಕಣೋ ಸಿದ್ಧರಾಮಯ್ಯ" ಎಂದ ಚಿಕ್ಕಣ್ಣ.

"ಶಿವಕುಮಾರೇನು ಮಾಡಕ್ಕೋಗಿದ್ನೆ. ಅವುನು ಮಾತ ಯಾವ ಒಕ್ಕಲಿಗರೂ ಕೇಳಲಿಲವಂತೆ. ಯಲ್ಲ ಕುಮಾರಣ್ಣನ ಕಡಿಕೋಗಿದ್ರಂತೆ."

"ಇದೆಯ ನೀನು ಕಂಡಿರದು. ಶಿವಕುಮಾರನಿಗೆ-ಕುಮಾರಸ್ವಾಮಿ ಏನೇನು ಮಾಡ್ತನೆ ಏನೇನು ಹಂಚಿತನೆ ಅಂತ ಯಲ್ಲ ಗೊತ್ತಿತ್ತಂತೆ, ಅದ್ಕೆ ಅಲವೆ ಮಾಲು ಸಮೇತ ಹಿಡುದಾಕಿದ್ದು."

"ಆ ಮಾಲೇನಾರ ಹಂಚಿದ್ರೆ ಸಿದರಾಮಯ್ಯ ಎಗಿರೋಯ್ತಿದ್ದ."

"ಏನು ಮಾಲದು?" ಎಂದ ಕಾಳಮಾವ.

"ಓಟಾಕೋರಿಗೆ ಹಂಚಕ್ಕೆ ಅಂತ ವಾಚು, ಉಂಗ್ರ, ಜುಂಕಿ, ಮಬೈಲು ಫೋನು ಇವುನ್ನಲ್ಲ ತುಂಬ ಪ್ಯಾಕ್ ಮಾಡಿ ಲಾರಿ ಲೋಡ್ ಮಾಡಿ ಕಳಿಸಿದ್ದರಂತೆ ಕಣಮಾವ, ಈ ಕುಮಾರಸ್ವಾಮಿ ಅವ ತ್ವಾಟದ ಮನೆಲಿ ಇಳಿಸಿಕಂಡು ಇನ್ನೇನು ಹಂಚಬೇಕು, ಅಷ್ಟರಲ್ಲಿ ಪೊಲೀಸನೋರು ಹಿಡುದಾಕಿದ್ರು."

"ಹೋಯ್ತಲ್ಲ ಮಾನ ಅಂಗರೇ?"

"ಆಯ್ಯೋ ಮಾವ, ಅವುರಿಗೆ ಮಾನ್ಯಾವುದು ಮರಿಯಾದಿ ಯಾವುದು, ಅಂಗಂದ್ರೇನು ಅಂತ ಕೇಳಂಗಾಗ್ಯವುರೆ ಗೊತ್ತೆ, ಇದೇ ಕುಮಾರಸ್ವಾಮಿ ತ್ವಾಟದ ಮನೆಲಿ ಮಾಲಸಮೇತ ಸಿಕ್ಕಿದಾಗ ಅಲ್ಲಿಗೆ ಪೇಪರ್ ನೋರು ಹೋಗಿದ್ರಂತೆ ಇಲ್ಲೇನು ನೋಡಕ್ಕೆ ಅಂತ ಬಂದಿದ್ದಿರಿ ನೀವು, ಬಟ್ಟೆ ಬಿಚ್ಚದ ನೋಡ್ತಿರಾ ಅಂದನಂತೆ. ಇದ ಕೇನೇಳ್ತಿ?"

"ಅವುರಪ್ಪ ವಳ್ಳೆ ಮಾತಾಡಿದ್ರೆ ತಾನೆ ಅವುನಾಡದು" ಎಂದ ಸೀರ.

"ಅದೇಳು ಮಕ್ಕಳ ಕೂರಿಸಿಗಂಡು ವಳ್ಳೆ ಮಾತಾಡಿ ಅಂತ ಅವುನ್ಯಾವತ್ತೇಳಿದ್ದನೂ, ಅಂತೂ ನಮ್ಮ ರೇವಣ್ಣನಿಗೂ ಬುದ್ದಿ ಬಂದದೆ ಅಂತ ಸಭೆಲೇಳ್ತನಲ್ಲ ಇದು ಸರಿಯೆ ಮಾವ?"

"ಇಸಿಸಿ ಅಂಗೇಳಿದ್ರಲ್ಲಿ ತಪ್ಪೇನದ್ದ?"

"ಅಲ್ಲ ಕಣಮಾವ, ಆ ರೇವಣ್ಣ ಪಟೇಲ್ರ ಸಂಪುಟದಲ್ಲಿ ಮಂತ್ರಿಯಾಗಿದ್ದ. ಧರಮಸಿಂಗನ ಸಂಪುಟದಲ್ಲೂ ಆಗಿದ್ದ. ಆಗ್ಯಲ್ಲ ಇವುನಿಗೆ ಬುದ್ಧಿ ಇರಲಿಲ್ಲ, ಈಗ ಬಂದದೆ ಅನ್ನಂಗಾಗಲಿಲವೆ ಅಪ್ಪನ ಮಾತು?"

"ಬುಡ್ಡ ಹೋಗಲತ್ತಗೆ. ಆ ದ್ಯಾವೇಗೌಡನ ಮಾತನೂ ಕಟಿಗಂಡ್ಯಾಕೆ ವದ್ದಾಡಿ" ಎಂದ ಸೀರ ರೋಸಿದವನಂತೆ.

"ಬುಡದಲ್ಲ ಕಣೊ ಮಾವ, ಜನ ಮಾತ ಕೇಳ್ತರೆ ಅಂತ ಏನೇನೋ ಮಾತಾಡಿದ್ರೆ ಸಿಗಾಯ್ಕಳರು ಇವುರೆಯ. ಜನ ಏನನ್ನಕಂಡರೂ ಅಂತ್ಲೂ ಯೋಚನೆ ಮಾಡದು ಬ್ಯಾಡವೆ?"

"ಯಾಕೇಚನೆ ಮಾಡಬೇಕೊ ಉಗ್ರಿ? ಆ ತರಯಲ್ಲ ಯೋಚನೆ ಮಾಡಿದ್ರೆ ಈ ತರದ ರಾಜಕಾರಣ ಮಾಡಕ್ಯಾಗದಿಲ್ಲ ಕಣೊ" ಎಂದುಕೊಂಡು ವಾಟಿಸ್ಸೆ ಬಂದ.

"ಎಲ್ಲಿಂದ ಬಂದ್ಲ ನೀನು?"

"ಎಲ್ಲಿಂದ್ಲಾರ ಬತ್ತಿನಿ ಕಣಕ್ಕ. ಅಂತೂ ಯಂಗೊ ಬಂದು ನಿನಿಗೆ ಮಕ ತೋರಿದನಲ್ಲ ಅದೇಳು?"

"ಅಂಗೆ ಆಯ್ತು ಕಂಡ್ಯ ಈಗ. ಪಾಪ ಆ ಸಿದರಾಮಯ್ಯ ಸೋತಿದ್ರೆ ಅವುನ ಕತೆ ಮುಗದೋಗದು ಕಂಡ್ಯ."


"ಅಂಗೇನೂ ಆಯ್ತಿರಲಿಲ್ಲ ಕಣಕ್ಕ. ತಿರಗ ಅಹಿಂದ ಅಂತ ವರಡೋನು ಆಗ ತಿರಗ ಬ್ಯಳಕಳೋನು ಯಾಕೇಳು?"

"ನೀನೆ ಹೇಳು?"

"ಸಿದರಾಮಯ್ಯ ಅವುನಿಗಿಂತ ಕಾಂಗ್ರೆ ಲೀಡ್ರಿಗೆ ಬೇಕಾಗ್ಯವುನೆ. ಶಿವಕುಮಾರ ಶಿವರಾಮ ಇಂತ ಲೀಡ್ರಿಗೆ ಈಗ ಸಿದರಾಮಯ್ಯನೆ ಬೇಕಾಗಿರದ್ರಿಂದ ಸೋತ್ರು ಅವುನ್ನ ಬಿಡುತಿರಲಿಲ್ಲ, ಎನಿ ಹೌ ಸಿದ್ದರಾಮಯ್ಯ ಸೋಲಬೇಕಾಗಿತ್ತು ಅಂತ ನನಿಗನ್ನುಸ್ತಾ ಅದೆ."

"ಆಯ್ಯೋ ನಿನ್ನ ಬಾಯಿಗೆ ಮಣ್ಣಾಕ, ಅದ್ಯಾಕ್ಲ ಅಂಗಂತಿ?"

"ಯಾಕೆ ಗೊತ್ತೇನಕ್ಕ? ಸಿದರಾಮಯ್ಯ ಸೋತಿದ್ರೆ ಅಪ್ಪ ಮಕ್ಕಳು ರಾಕ್ಷಸರಂಗಾಗೋರು, ಮಾಡಬಾರದ್ನೆ ಮಾಡೋರು, ಯಾರಿಗೂ ಕೇರ್ ಮಾಡ್ತಿರಲಿಲ್ಲ, ಯಾರ್ನೂ ಮಂತ್ರಿ ಮಾಡ್ತಿರಲಿಲ್ಲ. ಆಗ ಜನ ರಚ್ಚಗೇಳೋರು. ದ್ಯಾವೇಗೌಡನ ಪರಿವಾರ ನಾಶವಾಗದು. ಈಗ ಸಿದ್ದರಾಮಯ್ಯ ಗೆದ್ದಿರದ್ರಿಂದ ಯಲ್ಲಾ



ಹುಷಾರಾಗಿಬುಡ್ತರೆ ಅಲವೇ ದ್ವಡಪ್ಪಾ?"

"ಈ ತಲಿಕೆಟ್ಟ ನನ್ನ ಮಗನ ಯೇಚನೆ ನೋಡು ಯಂಗದೆ?" ಎಂದ ಕಾಳಮಾವ.

"ಎಲ್ಲಿ ದೊಡಪ್ಪ ನಿಮ್ಮ ದ್ಯಾವೇಗೌಡ್ರು ಕಾಣತಯಿಲ್ಲ ಮಾತಿಗೂ ಸಿಗತಯಿಲ್ಲ."

"ನನ್ನ ಮನೆ ಕಣಜದ್ವಳಗೆ ಇರಂಗೆ ಕೇಳ್ತಿಯಲ್ಲ ನೀನು?"

"ಆಕ್ಶುವಲಿ ಕಣಜದ್ವಳಗೆ ಇರಂಗೆ ಆಗ್ಯದೆ ಈಗ. ಸಿದ್ದರಾಮಯ್ಯ ನಿಂತರೇಟು, ಗೆದ್ದರೇಟು, ಸೋತರೇಟು ಅಂತ ಸುಮ್ಮನಿದ್ರೆ, ಇಂತ ಅವುಮಾನ್ವಲ್ಲ ಯಾಕಪ್ಪ? ಕಾರತಿಂದ ಕೋತಿ ತಿಮ್ಮನಂಗೆ ಕಣ್ಣೀರ ಹರಿಸಿದ್ರೆ ಅವುಮಾನಾಗದೆ ಇನ್ನೇನಾದತೂ?"

"ಅದಿರ್ಲಿ ಕಣೊ ವಾಟಿಸ್ಸೆ. ಈ ಜೆಡಿಎಸ್‌ನಿಂದು ಹಿಡದು ಬಿಜೆಪಿಗಳ್ಯಲ್ಲ ಇಪ್ಪತ್ತೈದು ಸವುರ ಲೀಡು ಬತ್ತ... ಅಂತ ಕರಟ್ಟಾಗಿ ಹೇಳತಿದ್ರಲ್ಲ ಯಂಗೆ?" ಎಂದ ಉಗ್ರಿ.

"ಅದೂ ಅವುರು ಹಂಚಿರೊ ಪದಾರ್ಥಗಳ ಲ್ಯಕ್ಕ ತಗಂಡು ನಿಜವಾಗ್ಲು ಅವುರಿಗೆ ಬರೊ ಓಟ ಟೋಟ್ಲು... ಮಾಡಿ ಹೇಳತಿದ್ರು ಕಣೊ ಉಗ್ರಿ."

"ಬುಡಿಸೇಳ್ಳ ಅದೇನು?"

"ನೋಡಕ್ಕ ಸುಮಾರು ನಲವತ್ತು ಸವುರ ಮೊಬೈಲು ಹಂಚಿದ್ರು. ಹತ್ತು ಸವುರ ಕಲರ್ ಟಿವಿ ಹಂಚಿದ್ರು... ಎಷ್ಟಾಯ್ತು?"

"ಐವತ್ತು ಸವುರಾಯ್ತು.".

"ಚಿನ್ನದುಂಗುರ, ಮೊಟ್ರು ಬೈಕು ಹತ್ತು ಸವುರ ಅಂತ ಇಟಗೊ. ಇನ್ನ ಮಂಗಳಾರತಿ ಮಾಡಿದೋರಿಗ... ಕುಮಾರಣ್ಣ ಲಕ್ಷ ಲಕ್ಷನೆ ಕೊಟ್ಟವುನೆ."

"ಮಂಗಳಾರತಿ ತಟ್ಟಿಗೆ ಲಕ್ಷ ಹಾಕಿದ್ರೆ?"

"ಹಾಕಿಸಿಗಂಡೋರೆ ಹೇಳ್ತರಲ್ಲಕ್ಕ. ಇನ್ನು ಲೀಡ್ರುಗಳನ್ನಲ್ಲ... ಸಂತೆಲಿ ಕುರಿ ಕೊಂಡಂಗೆ ಕೊಂಡ್ರು. ಆಮ್ಯಾಲೆ ಸ್ತ್ರೀಸಗತಿ... ಅಂಗನವಾಡಿಯೋರು ಅಂತ ಇದೀ ಚಾಮುಂಡೇಶ್ವರಿ... ಅರ್ಧ ಭಾಗವ ಕೊಂಡ್ರು ಕಣಕ್ಕ. ನನಿಗನ್ನಿಸಿದಂಗೆ ಅವುರಿಗ... ಪ್ರಾಮಾಣಿಕವಾಗಿ ಬಂದಿರವು ಕೇವಲ ಹದುನೈದು ಸವುರ... ಓಟು ಕಣಕ್ಕ. ಇನ್ನು ಒಂದು ಲಕ್ಷ ಓಟ ಬಾಚಿಗಂಡವುರ... ಕಣಕ್ಕ. ದಿಸೀಸ್ ರಿಯಲ್ ಫ್ಯಾಕ್ಟ್."

"ಅಂಬುರೀಸ ಹೋಗದೆಯಿದ್ರೆ ಸಿದರಾಮಯ್ಯ... ಹೋಗಿಬುಡನು ಕಂಡ್ಯ."

"ಯಕ್ಕಾ, ಅಂಬುರೀಸು ನಮ್ಮ ಜಿಲ್ಲೆ ರಾಜಕಾರಣ... ಬ್ಯಾರೆ ಜಿಲ್ಲೆಗೆ ಸಿನುಮ ಆಗುಟ್ರು ಅಷ್ಟೆಯಾ. ಅವುನೇಳಿದ... ಅಂತ ಕುಮಾರಣ್ಣ ಕಡಿಯೋರು ಓಟು ಮಾಡ್ತವುರ... ಅನ್ನದು ನನಿಗೆ ಡವುಟು."

"ಅವುನ್ಯಾರೊ ದತ್ತಾ ಅನ್ನೊನು ನಿಜವಾಗ್ಲು ನಾವೇ... ನಾಕು ಸವುರ ಓಟಲ್ಲಿ ಗೆದ್ದಿದಿವಿ ಅಂದವುನಲ್ಲಾ."

"ಯಂಗೆ ಗೆದ್ದವನಂತೆ?"

"ಅದೇನೊ ಕ್ಯಳಗಲಿಂದ ಯರಡ್ನೆದ ಒತ್ತಿದ್ದರಂತೆ"


"ಯಕ್ಕಾ, ನಿನಿಗೇನಾರ ಆ ದತ್ತ ಅನ್ನೋನು ಸಿಕ್ಕಿದ... ಲೋ ದತ್ತ ಯಲ್ಲಾರು ಕ್ಯಳಗಲಿಂದ ಯರಡ್ನೆದ್ನೆ ಕಂಡ... ಒತ್ತದು. ಮಹಾ ಕಂಡಿರೋನಂಗೆ ಇನ್ನೆಲ್ಲೂ... ಹೇಳಕ್ಕೋಗಬ್ಯಾಡ ಅಂತ ಹೇಳಕ್ಕ" ಎಂದು ವಾಟಿಸ್ಸೆ... ಇನ್ನೇನು ಗಹಗಹಿಸಿ ನಗುವವನಂತೆ ಮುಖ ಮಾಡಿದ... ಆಗ ಜುಮ್ಮಿ ಪಕಾರೆಂದು ನಗಾಡಿದಳು.

-ಬಿ. ಚಂದ್ರೇಗೌಡ

Zero Hour ಮುನ್ನಿ

1. ಉಪಚುನಾವಣೆ ಕುರಿತಂತೆ ಯಾವುದು ಸರಿಯಾಗಿದೆ?
   a) ಸೊಕ್ಕಿನ ಮುದ್ದೆಗಳಿಗೆ ಇಕ್ಕಿದ್ದಾನೆ ಮತದಾರ
   b) ಒಬ್ಬ ಪೀಟರ್‌ನ ಪ್ರಾಮಾಣಿಕತೆ ಎದುರು ಎಲ್ಲ ಪಕ್ಷಗಳ ತತ್ತರ
   c) ಚಾಮುಂಡೇಶ್ವರಿ, ಬಾಬಾಬುಡನ್‌ಗಿರಿ ಎರಡೂ ಕಡೆ ಚಿಡ್ಡಿ ಕಳಚಿ ಬಿದ್ದಿದೆ
   d) ಯಾರು ಗೆದ್ದರೇನು, ಮತದಾರ ಸೋಲುವುದು ತಪ್ಪಲಿಲ್ಲ
   e) ಮೇಲಿನೆಲ್ಲವೂ ಸರಿ
2. ಸಿಂಗೂರಲ್ಲಿ ಬುದ್ಧದೇವರ ಕಮ್ಯುನಿಸಂ ಜೋರಾಗಿದೆಯಲ್ಲ?
   a) ಟಾಟಾಗೆ ಕೇವಲ ಕೆಂಪು ಬಣ್ಣದ ಕಾರು ತಯಾರಿಸಲು ಹೇಳಿದ್ದಾರಂತೆ ಬುದ್ಧದೇವ
   b) ಸಿಂಗೂರಿನ ಮಣ್ಣು ಕೆಂಪಾಗಿರದೇ ಕಪ್ಪಾಗಿರುವುದರಿಂದ ಅದು ಫಲವತ್ತಾಗಿಲ್ಲ ಎಂಬುದು ಮಾರ್ಕ್ಸ್‌ವಾದ!
   c) ಟಾಟಾ ಕಾರುಗಳು ಗಾತ್ರ, ಬಣ್ಣ ಎಲ್ಲದರಲ್ಲಿ ಒಂದೇ ತರಹ ಇರುವಂತೆ ಮಾಡಿ ಸಮಾನತೆ ಸಾಧಿಸುತ್ತಾರಂತೆ....
   d) ಸದ್ಯದಲ್ಲೇ ಜಿ.ಎಸ್. ನಾಗರಾಜ್ ಇನ್ಫೋಸಿಸ್‌ಗೆ ಸಾವಿರ ಎಕರೆ ಕೊಡಿ ಎಂದು ಪ್ರತಿಭಟಿಸಲಿದ್ದಾರಂತೆ!
3. "ಕನ್ನಡಕ್ಕೊಬ್ಬನೇ ನಿರ್ದೇಶಕ. That's Prem" ಅಂದವ್ನೆ ರಕ್ಷ ಪುಟ್ಟ?
   a) 'ಪ್ರೇಮ್'ಪಾಶದಲ್ಲಿ ಬಿದ್ದವ್ನೆ
   b) 'ನನ್ನ ಕಣ್ಣಿಗೆ ಪ್ರೇಮ್ ಬಿಟ್ಟರೆ ಮತ್ತೇನು ಕಾಣುವುದಿಲ್ಲ' ಎಂದು ಅಂಥ ಪ್ರೇಮಿಯಾಗಿರಬೇಕು
   c) ಅಂದರೆ ಉಳಿದೋರೆಲ್ಲಾ ನಿರ್ದೇಶಕಿಯರು ಅಂತಾ ಅರ್ಥ!
   d) ಓಂಪ್ರಕಾಶ್ ರಾವ್‌ಗೆ ಡೈರೆಕ್ಟ್ರು ಅನ್ನೋಕಾಗುತ್ತಾ ಮತ್ತೆ?
4. ರಾಜ್ಯ ಚಡ್ಡಿಗಳಲ್ಲಿ ಕಿತ್ತಾಟ ಶುರುವಾಗಿದೆಯಲ್ಲ?
   a) ಅದು ನಿಲ್ಲದಿರಲಿ ಎಂದು ಹಾರ್ದಿಕವಾಗಿ ಶುಭಾಶಯ ಕೋರುತ್ತಿದ್ದೇವೆ.
   b) ಯಡ್ಡಿ, ಅನಂತ್, ಸಿ.ಟಿ. ರವಿ ಇತ್ಯಾದಿಗಳ ಚಿಡ್ಡಿ ಉದುರಿ ಹೋಗಲಿ
   c) ಪಾಪ, ದತ್ತನ ಶಾಪವಂತೆ!
   d) ಹಾಳಾಗಿ ಹೋಗ್ಲಿ ದೆಹಲಿಯಾತ್ರೆಗೆ ಹೋಗ್ಲಿ... ವಾಪಸ್ ಬರ್ದೇ ಇರ್ಲಿ
5. ಬೀದರನಲ್ಲಿ ಒಂದೇ ವರ್ಷದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಅವಮಾನದ ಒಂಭತ್ತು ಪ್ರಕರಣಗಳಂತೆ?
   a) ಲಿಂಗಧಾರಿಣಿ ಎಸ್.ಪಿ. ರೂಪಾ ಇದ್ದರೆ ಇನ್ನೇನಾಗುತ್ತೆ?
   b) ಪಕ್ಕದ ಖರ್ಗೆ ಕತ್ತೆ ಕಾಯ್ತಿರಬೇಕಷ್ಟೇ.
   c) ತನ್ನ ಕಚೇರಿಯಿಂದ ಅಂಬೇಡ್ಕರ್ ಭಾವಚಿತ್ರ ತೆಗೆದ ಯಡ್ಡಿಗೆ ಇಕ್ಕಿದರೆ ಎಲ್ಲ ಸರಿಯಾಗುತ್ತೆ

ಉತ್ತರಗಳು:1.e 2.b 3.c 4.a 5.c



ಹಲೋ ಸಿದ್ದು ಅಂಕಲ್,

ಕಂಗ್ರಾಟ್ಸ್‌ರಿ ಅಂಕಲ್. ನೀವ್ ಗೆದ್ದಿದ್ದು ಬರೋಬ್ಬರಿ ಐತಿ ನೋಡ್ರಿ... ಅಪ್ಪ ಮಗ ರಾಕ್ಷಸರಂಗ ಹಗಲು ರಾತ್ರಿ ಏನೆಲ್ಲ ಕಂತ್ರಿ ಕೆಲ್ಸ ಮಾಡಿದ್ರು... ಆದ್ರೂ ಜನಾ ನಿಮ್ ಕೈ ಬಿಡ್ಲಿಲ್ಲ... ಎಲ್ಲಾ ಜಾತ್ಯತೀತ ಮಂದಿ ಸಪೋರ್ಟು ನಿಮ್ಗೇ ಇತ್ತಲ್ಲ.

ಆದ್ರ ಅಂಕಲ್, ಈ ಖುಷಿಯಾಗೂ ಒಂದಿಷ್ಟು ಮಾತು ಹೇಳಾದೈತಿ.... ಬ್ಯಾಸರ ಮಾಡ್ಕೊಬೇಡಿ.... ನಾಕು ತಿಂಗಳಿಂದ ನಮ್ ಪೇಪರ್‌ನ್ಯಾಗ ಗೌಡರ ಕುಟುಂಬದ ಅಡ್ನಾಡಿ ದಂಧೆನೆಲ್ಲಾ ಬಯಲು ಮಾಡ್ತಾನೇ ಅದಿವಿ.... ಆದ್ರ ನೀವು ಒಮ್ಮೆನೂ ಈ ವಿಷ್ಯ ಎತ್ತಿ ಜೋರು ದನಿಯಾಗ ಮಾತಾಡ್ಲೇ ಇಲ್ಲ... ಆ ಡಿಕೆಶಿ ನೋಡ್ರಿ, ಅವ್ನೂ ಗೌಡರಂಗ ಭ್ರಷ್ಟ ಅದಾನ... ಆದ್ರೂ ಗೌಡರ ವಿರುದ್ಧ ತೊಡೆ ತಟ್ಟೋ ಧೈರ್ಯಾ ಮಾಡ್ತಾನ. ನೀವು ಪ್ರಾಮಾಣಿಕ ಇದ್ದೂ ಸುಮ್ನೆ ಕುಂತ್ರ ಕೆಲ್ಸ ಆಗಾದಿಲ್ಲರಿ... ಇನ್ಮುಂದೆ ಹಂಗ ಮಾಡಬ್ಯಾಡ ನೋಡ್ರಿ.

ಈ 257 ವೋಟಿನ ವಿನ್ನಿಗೆ ಪುಟಗೋಸಿ ಪೇಜಾವರನ್ನ ಕಾಲಿಗೆ ಬೀಳೋದು ಬೇಕಾಗಿತ್ತನ್ರಿ? ಇನ್ಮೇಲೆ ಹಂಗೇನಾದ್ರು ಮಾಡಿದ್ರ ಬರೀ ಕುರುಬರಲ್ಲ, ಎಲ್ಲಾ ಜಾತ್ಯತೀತ ಮಂದಿನೂ ನಿಮ್ಮಿಂದ ದೂರ ಆಗಿಬಿಡ್ತಾರ ನೋಡ್ರಿ...

ಇನ್ಮುಂದ ಗಟ್ಟಿ ದನಿಯೊಳ್ಗ ಮಾತಾಡ್ರಿ, ಅಹಿಂದ ಮಂದಿಗಾಗಿ ಹೊಸ ಹೊಸ ಪ್ರೊಗ್ರಾಮ್ ರೂಪಿಸ್ರಿ.... ಅಧ್ಯಯನ ಮಾಡ್ರಿ.....

ಈಗಿಷ್ಟು ಸಾಕು ಸಿದ್ದು ಅಂಕಲ್, ನೀವೀಗ ಫುಲ್ ಖುಷ್ಯಾಗದೀರಿ ಅಂತಾ ಕಾಣುತ್ತ... ಸದ್ಯಾಕ ಎಂಜಾಯ್ ಮಾಡ್ರಿ.....


-ಇತಿ ಮುನ್ನಿ, ಧಾರವಾಡ

ಒಂದು 'ಗಾದಿ' ಮಾತು

ಗೌಡ ಬಿದ್ದರೂ ಪಂಚೆ ಕಳಚಲಿಲ್ಲ ಅಂದನಂತೆ!

ಕೇಂದ್ರ ಸರ್ಕಾರ ಪೆಟ್ರೋಲ್ ಬೆಲೆ ಇಳಿಸಿದ್ದೂ ಸಹ ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಯೇ-ದೇವೇಗೌಡ

ನೆಮ್ಮದಿಗಾಗಿ



ಈ ನಜೀರ್‌ಸಾಬ್‌ಗೆ ತುಂಬ ಕಾಯಿಲೆಯಾಗಿದೆ. ಆದರೂ ಈತನ ಜೀವನ ಪ್ರೇಮ ಅಪಾರವಾದದ್ದು, ವ್ಯವಹಾರಜ್ಞಾನ ಕೂಡ. ಈತ ಎಂದೂ ಮಸೀದಿಗೆ ಹೋದವರಲ್ಲ; ಯಾವುದೇ ಜಾತೀಯ ಗುಂಪು ನಜೀರನನ್ನು ದುಗುಡದಿಂದ ತುಂಬುತ್ತದೆ. ಮೊನ್ನೆ ಗೆಳೆಯನೊಬ್ಬ ಹೇಳಿದ, ನಜೀರರನ್ನು ನೋಡಲು ಜನ ಬಂದಿದ್ದರು. ಅವರನ್ನು ಕೆಲವು ನಿಮಿಷ ನೋಡಿ ಮಾತಾಡಿಸುವುದು ನಜೀರರಿಗೆ ಸಾಧ್ಯ. ಎಲ್ಲರೂ ಕ್ಷಣ ಮಾತಾಡಿ ಹೋಗುತ್ತಿದ್ದಾಗ ಗೆಳೆಯನಿಗೆ ಇರಲು ನಜೀರ್ ಹೇಳಿದರು. 'ನಿಮಗೆ ಸುಸ್ತಾಗುತ್ತೆ' ಅಂದ ಗೆಳೆಯ. ನಜೀರ್ ಕೇಳಲಿಲ್ಲ, 'ಇರು' ಅಂದರು. ಈ ಗೆಳೆಯ ನಜೀರರ ಹಳೆಯ ಶಿಷ್ಯ. ದೊಡ್ಡ ಗುಟ್ಟು ಹೇಳುವಂತೆ ನಜೀರ್ ಹೇಳಿದರು. "ನೀನು ಹೀಗೆ ವೇಳೆ ಕಳೆದು ಬಿಟ್ಟೆ. ಈಗಲಾದರೂ ಒಂದು ಕೆಲಸ ಮಾಡು. ಒಂದೇ ಒಂದು ಎಕರೆ ನೆಲದಲ್ಲಿ ಕಾಕಡಾ ಮಲ್ಲಿಗೆ ಬೆಳಿ. ಈ ಬಳ್ಳಿಗಳು ನಿನ್ನನ್ನು ಬಡತನದಿಂದ ದೂರ ಇಡುತ್ತವೆ, ನೆಮ್ಮದಿಯಾಗಿ ಇಡುತ್ತವೆ."

ಗೆಳೆಯ ನಜೀರರ ವ್ಯವಹಾರಜ್ಞಾನ ಬಲ್ಲವನು; ಅವರು ಮಲ್ಲಿಗೆ ನೆನೆದು ಕೊಳ್ಳುತ್ತಿರುವುದನ್ನು ನೋಡಿ ಮುದಗೊಂಡ, ಹಾಗೆಯೇ ಎದೆಯ ಭಾರದಿಂದ ನಿಟ್ಟುಸಿರುಬಿಟ್ಟ.

ಜಗಳೂರಿನ ದಿಟ್ಟ ವ್ಯಕ್ತಿ

ಈತನ ಹೆಸರು ಹೇಳುವುದು ಬೇಡ. ಜಗಳೂರಿನ ವ್ಯಕ್ತಿ. ಜಗಳೂರಿಗೆ ನಾನು ಬರುವುದನ್ನು ಕೇಳಿ, "ಬರ್ತಾರಾ? ಬರಲಿ, ಈ ಕೊಳಕು ನಾಯಕರಿಗೆ ಉಗೀಲಿ" ಎಂದಿದ್ದನಂತೆ. ವರ್ಣರಂಜಿತ ಮನುಷ್ಯನೀತ. ದೊಡ್ಡ ಬಾಯಿ, ದಿಟ್ಟ ವ್ಯಕ್ತಿತ್ವದ ಬಡವ. ಕಲ್ಪಿಸಿಕೊಳ್ಳಿ–ಈತ ಜಗಳೂರಿನ ಪುರಸಭೆಗೆ ಎರಡು ಅವಧಿಗೆ ಅಧ್ಯಕ್ಷನಾಗಿದ್ದವನು; ಹನ್ನೆರಡು ವರ್ಷ ಪುರಸಭೆಯ ಸದಸ್ಯನಾಗಿದ್ದವನು. ಈತ ಇವತ್ತಿಗೂ ಇಲ್ಲಿ ಬಸ್ ಏಜಂಟ್. ಕಷ್ಟದಲ್ಲಿರುವ ಎಲ್ಲರಿಗೆ ನೆರವಾಗುವ ಮನುಷ್ಯ; ಸಾರ್ವಜನಿಕ ಹಣವನ್ನು ಮುಟ್ಟದ ಶುದ್ಧ ಹಸ್ತ, ಈತನ ಬಗ್ಗೆ ಹೇಳಿದವರು ಅರ್ಧ ನಗೆ, ಅರ್ಧ ಆಶ್ಚರ್ಯದಿಂದ ಮಾತಾಡಿದ್ದರು. ನನಗೆ ಸಂತೋಷ ಮಾತ್ರ ಆಗಿತ್ತು. ಈತನ ತರಹದ ಜನ ಎಲ್ಲೆಲ್ಲೂ ಇದ್ದಾರೆ; ಇವರ ಪ್ರಾಮಾಣಿಕತೆ ಎಲ್ಲೋ ಮೂಲೆಯಲ್ಲಿ ದೂರಕ್ಕೆ ಹರಡದೆ ಕಮರಿಹೋಗುತ್ತದೆ. ಆದರೆ ಅದೇ ಬಸ್ ಏಜಂಟ್ ಆಗಿದ್ದ ಗುಂಡೂರಾವ್ ತರಹದವರು ಮೆರೆಯುತ್ತ ಹೋಗುತ್ತಾರೆ; ಕಾಸಿಲ್ಲದೆ ಇದ್ದವರು ಕೋಟ್ಯಾಧೀಶರಾಗುತ್ತಾರೆ.


ಈತನ ಹೆಸರು ಏಕೆ ಬರೆಯಬಾರದು? ಸಂಕೋಚವಾದೀತೆಂದು ಮಾತ್ರ. ಆದರೂ ಆಗಲಿ. ಜಗಳೂರಿನ ಈ ವಿಚಿತ್ರ ವ್ಯಕ್ತಿಯ ಹೆಸರು ಓಬಪ್ಪ.

ದೂರದ ರಾಜ್ಯದಲ್ಲಿ

ಮೊನ್ನೆ ಒಂದು ವಿಶಿಷ್ಟ ಲೇಖನ ಓದಿದೆ. ಪತ್ರಿಕೆಯೊಂದರಲ್ಲಿ ಒಬ್ಬ ಮಾಜಿ ಅಧಿಕಾರಿ ಒಂದು ಲೇಖನ ಬರೆದ. ಆತ ಐ.ಎ.ಎಸ್ ಅಧಿಕಾರಿಯಾಗಿದ್ದವನು. ತನ್ನ ಬದುಕನ್ನೆಲ್ಲ ಪಟ್ಟಣದಲ್ಲಿ ಅಧಿಕಾರಿಯಾಗಿ ಕಳೆದವನು. ನಿವೃತ್ತನಾದೊಡನೆ ತನ್ನ ರಾಜ್ಯವಾದ ಬಿಹಾರದ ದೂರದ ಕುಗ್ರಾಮವೊಂದರಲ್ಲಿ ಸ್ವಲ್ಪ ನೆಲ ಕೊಂಡುಕೊಂಡು ಅಲ್ಲಿ ವಾಸಿಸತೊಡಗಿದ. ಆತನಿಗೆ ಅದೊಂದು ಹೊಸ ಲೋಕದಂತಿತ್ತು. ಆತನ ಸುತ್ತ ಕಂಡುಬಂದ ಬಡತನ, ಅಸಹಾಯಕತೆ, ಸಣ್ಣತನ ಕಂಡು ವಿಸ್ಮಿತನಾದ. ಭಾರತ ತನ್ನ ನಲವತ್ತು ವರ್ಷದ ಸ್ವಾತಂತ್ರ್ಯದ ದಿನಗಳಲ್ಲಿ ಪೂರ್ತಿ ಕುಗ್ಗಿ ಹೋಗಿತ್ತು. ಹಳ್ಳಿಯಲ್ಲಿ ಸಂಘಟನೆ ಸಾಧ್ಯವಿಲ್ಲ; ಯಾಕೆಂದರೆ ಅಲ್ಲಿ ಎಲ್ಲವೂ ಜಾತಿ, ಪಾಳೆಗಾರಿಕೆಯ ಮೇಲೆ ನಡೆಯುತ್ತದೆ. ಸಣ್ಣ ಕೆಲಸವಾಗಬೇಕೆಂದರೂ ಜಿಲ್ಲಾ ಮಟ್ಟದ ರಾಜಕಾರಣಿಯ ಮರ್ಜಿ ಹಿಡಿಯಬೇಕು. ಹೀಗೆ ಮರ್ಜಿ ಹಿಡಿಯಬೇಕಾದರೆ ಆ ರಾಜಕಾರಣಿಗೆ ಓಟುಗಳ ಮೂಲಕ ನೆರವಾಗಬೇಕು. ಇದಕ್ಕಾಗಿ ತನ್ನ ಜಾತಿಯ ಸಣ್ಣ ಗುಂಪು ಕಟ್ಟಿಕೊಂಡಿರಬೇಕು. ಜಿಲ್ಲಾ ಮಟ್ಟದ ರಾಜಕಾರಣಿ ರಾಜ್ಯಮಟ್ಟದ, ರಾಜಕಾರಣಿಯನ್ನು ಓಲೈಸುವುದು ಇದೇ ರೀತಿಯಲ್ಲಿ, ಸ್ವಂತ ಖ್ಯಾತಿಗಾಗಿ ಈತನ ಪ್ರಯತ್ನ. ತನ್ನನ್ನು ಆರಾಧಿಸುವವರು ಮಾತ್ರ ಈತನಿಗೆ ಪ್ರಜೆಗಳು.

ಮದುವೆ, ಪೂಜೆ, ಉತ್ಸವದಲ್ಲಿ ಮಾತ್ರ ಒಂದೆಡೆ ಸೇರುವ ಹಳ್ಳಿಗರು ಸಾರ್ವಜನಿಕ ಕೆಲಸಕ್ಕಾಗಿ, ಉತ್ಪಾದನೆ, ಉದ್ಯೋಗಕ್ಕೆ ಒತ್ತಾಯಿಸಲು ಸಂಘಟಿತರಾಗುವುದಿಲ್ಲ, ಸ್ವಂತದ ಕೆಲಸಕ್ಕೆ ಮಾತ್ರ ಅವರಲ್ಲಿ ಶಕ್ತಿ ಉಳಿದಿರುತ್ತದೆ; ಹೀಗಾಗಿ ಒಗ್ಗಟ್ಟಾಗಿ ಜಾತಿ, ಮತ, ಮೀರಿದ ವಿಷಯಗಳ ಬಗ್ಗೆ ಚರ್ಚಿಸುವುದಿಲ್ಲ, ಹಳ್ಳಿಗಳು ದಾರಿದ್ರ್ಯದಲ್ಲಿಯೇ ಉಳಿಯುತ್ತವೆ.

ಬಿಹಾರ್ ಭಾರತದ ವಿಚಿತ್ರ ರಾಜ್ಯ. ನೈಸರ್ಗಿಕ ಸಂಪತ್ತಿನ ದೃಷ್ಟಿಯಲ್ಲಿ ಭಾರತದ ಶ್ರೇಷ್ಠ ರಾಜ್ಯ. ಐದು ನದಿಗಳು, ಅಪಾರ ಅರಣ್ಯ, ಖನಿಜ ಸಂಪತ್ತು, ಬುದ್ಧನ ಜನ್ಮಸ್ಥಳ, ಜೆಪಿಯ ಚಳವಳಿ–ಎಲ್ಲವನ್ನೂ ಪಡೆದ ಈ ರಾಜ್ಯ ಭಾರತದ ಕಡು ಬಡವರ ರಾಜ್ಯ ಕೂಡ. ಮೇಲಿನ ಅಧಿಕಾರಿಯ ಅಚ್ಚರಿಯ ಗ್ರಹಿಕೆಯಲ್ಲಿ ಈ ದಾರಿದ್ರ್ಯದ ಗುಟ್ಟು ಕೂಡ ಇದೆ.




ಸೆಪ್ಟಂಬರ್ 4, 1988

ಸಾಹಿತಿ–ರಾಜಕೀಯಕ್ಕೆ

ಅದು ಹೇಗೆ ಏಕಕಾಲದಲ್ಲಿ ಅಂಥದೇ ಅನ್ನಿಸಿಕೆ ಸಾವಿರಾರು ಮೈಲಿಗಳ ಆಚೆ ಹುಟ್ಟಿ ಕೊಳ್ಳುತ್ತವೆ. ನನಗಾಗ ಇಪ್ಪತ್ತೆರಡು ವರ್ಷ. 'ವಾಮನ' ಕತೆಯನ್ನು ಬರೆದೆ. ಅಲ್ಲಿಯವರೆಗೆ ಹೇಳಿಕೊಳ್ಳುವಂಥ ಏನನ್ನೂ ಬರೆಯದೇ ಇದ್ದ ನಾನು ಪಟ್ಟು ಹಿಡಿದು ಕೂತು ಬರೆದಿದ್ದೆ. ಹತಾಶ ಸಾಹಿತಿಯ ಪತನವನ್ನು ಕುರಿತ ಕತೆ ಅದು; ಅದೇ ನನ್ನ ಒಳ್ಳೆಯ ಕತೆ ಅನ್ನುವವರಿದ್ದಾರೆ. ಅದಿರಲಿ. ಕೇವಲ ಎರಡು ವರ್ಷಗಳ ಬಳಿಕ ಜಪಾನೀ ಲೇಖಕನೊಬ್ಬ ಅಂಥದೇ ಕತೆ ಬರೆದಿದ್ದಾನೆಂದು ತಿಳಿಯಿತು.


ಮೊನ್ನೆ ನಾವು "ಈ ರಾಜೀವ್‌ಗೆ ಬುದ್ಧಿ ಇದೆಯೇ? ವಿದ್ಯುತ್ ಅಭಾವ ಎಂದು ಕೂಗಾಡುತ್ತಾರೆ, ಅಸಹಾಯಕತೆ ವ್ಯಕ್ತಪಡಿಸುತ್ತಾರೆ. ವಿದೇಶಗಳಿಂದ ಒಂದೂವರೆ ರೂಪಾಯಿಗೆ ಲೀಟರ್‌ನಂತೆ ಡೀಸಲ್ ತರಿಸಿ ನಾಲ್ಕು ರೂಪಾಯಿಗೆ ಮಾರುತ್ತಾರೆ! ತರಿಸಿದ ಬೆಲೆಗೆ ಇಲ್ಲಿ ಮಾರಿದರೆ ಲಕ್ಷಾಂತರ ಮೆಗಾವ್ಯಾಟ್ ವಿದ್ಯುತ್ ತಯಾರಿಸಬಹುದು. ಇಲ್ಲಿ ಒಂದಕ್ಕೊಂದು ಸಂಬಂಧವನ್ನಾದರೂ ಹೊಂದಿವೆಯೆ?" ಎಂದೆವು. ನಾಲ್ಕೇ ದಿನದಲ್ಲಿ ಲೋಕಸಭಾ ಸದಸ್ಯನೊಬ್ಬ ಇದನ್ನೇ ಹೇಳಿದ್ದ....



ಪೆರು ಬಗ್ಗೆ ನೀವು ಕೇಳಿರಬಹುದು. ಇದೊಂದು ಚೇತೋಹಾರಿಯಾದ, ಶ್ರೀಮಂತ ಇತಿಹಾಸದ ದೇಶ. ಈ ದೇಶ ಶತಮಾನ ಗಟ್ಟಲೆ ಸರ್ವಾಧಿಕಾರದಡಿ ನರಳಿ 1980ರಲ್ಲಿ ಸ್ವತಂತ್ರವಾಯಿತು; ಪ್ರಜಾಪ್ರಭುತ್ವವಾಯಿತು. ಆದರೆ ಮತ್ತೆ ಅದೇ ಗೊಂದಲ, ಹಿಂಸೆ ಆರಂಭವಾಗಿದೆ. ಬಡತನ ಇಮ್ಮಡಿಗೊಳ್ಳುತ್ತಿದೆ. ಜನತಂತ್ರವನ್ನು ಪ್ರೀತಿಸುವ ಜನ ಜಾಗ್ರತರಾಗತೊಡಗಿದ್ದಾರೆ. ಅವರಲ್ಲೊಬ್ಬ ಕಾದಂಬರಿಕಾರ ಲ್ಹೋಸಾ. ಈತನೊಬ್ಬ ಪ್ರತಿಭಾವಂತನಾದ ಪ್ರಶಸ್ತಿ ವಿಜೇತ ಸಾಹಿತಿ. ಈತನೀಗ ಪೆರು ದೇಶದಲ್ಲಿ ರಾಜಕೀಯಕ್ಕಿಳಿದಿದ್ದಾನೆ; ಪೆರುವಿನ ಅಧ್ಯಕ್ಷ ಅಲನ್ ಗಾರ್ಸಿಯಾನ ಭ್ರಷ್ಟ ಸರ್ಕಾರದ ವಿರುದ್ಧ ಸಿಡಿದೆದ್ದು ಜನರನ್ನು ಸಂಘಟಿಸುತ್ತಿದ್ದಾನೆ. ಲ್ಹೋಸಾ ಬಗ್ಗೆ ಕರುಣೆ ತೋರುವವರಿದ್ದಾರೆ; ಈತ ರಾಜಕೀಯಕ್ಕಿಳಿದಿದ್ದರಿಂದ ಸಾಹಿತ್ಯಕ್ಕೆ ಆದ ನಷ್ಟ ಕುರಿತು ಸಂತಾಪ ಸೂಚಿಸುವವರಿದ್ದಾರೆ. ಆದರೆ ಲ್ಹೋಸಾ ಹೇಳುತ್ತಾನೆ, "ನನಗೆ ರಾಜಕೀಯ ಅಂಥ ಇಷ್ಟದ ಕೆಲಸವಲ್ಲ, ಆದರೆ ಕೆಲವೊಮ್ಮೆ ನಾವೆಲ್ಲ ಇಷ್ಟದ, ಸ್ವಸಂತೋಷದ ಕೆಲಸಕ್ಕೆ ಬದಲು ಜನಕ್ಕೆ ಅತ್ಯಗತ್ಯವಾದ ಕೆಲಸ ಮಾಡಲೇಬೇಕಾಗುತ್ತದೆ..."

ಲ್ಹೋಸಾ ಗೆಲ್ಲುವ ಎಲ್ಲ ಸೂಚನೆಗಳಿವೆ.

ಚಾಮುಂಡೇಶ್ವರಿಗೆ ಯಾರು ಬಲಿ?



ಆರ್. ಗೋವಿಂದರಾಜು, ಬೆಂಗಳೂರು
ತಣ್ಣನೆಯ ಚಳಿ ಓಡಿಸಿ ಬೆಚ್ಚನೆಯ ಸುಖವನ್ನು ಪಡೆಯುವ ಸೂಕ್ತ ಮಾರ್ಗ ಯಾವುದು?
* ಬೇಸಿಗೆಗೆ ಕಾಯುವುದು.

ಎಸ್. ಶಶಿಧರ, ದಾವಣಗೆರೆ
ರಾಜಕಾರಣಿಗಳಿಗೇಕೆ 'ಕಾಮನ್‌ಸೆನ್ಸ್' ಇರೋದಿಲ್ಲ?
* ಇದ್ದಿದ್ದರೆ "ನಾನೇ ಕ್ಯಾಂಡಿಡೇಟು" ಅಂತ ಚಾಮುಂಡೇಶ್ವರಿಯಲ್ಲಿ ಕುಮಾರಸ್ವಾಮಿ ಹೇಳುತ್ತಿರಲಿಲ್ಲ.

ಆ.ರಾ.ಮಂಜುನಾಥ್, ಗೆದರೆ
ಚುಮುಚುಮು ಚಳಿಯಲ್ಲೂ ಹುಡ್ಗೀರು ಸ್ವೆಟರ್ ಹಾಕ್ದೇ ಫ್ರಾಕ್‌ನಲ್ಲೇ ಓಡಾಡ್ತರೇಕೆ?
* ಸ್ಕೂಲ್ ಯೂನಿಫಾರ್ಮ್‌ಗಳು ಹಾಗೇ ಇರುತ್ತಪ್ಪಾ.

ಅಕ್ಕಿ ಕೊಟ್ರೇಶ, ಉಪನಾಯಕನಹಳ್ಳಿ
ಹುಡುಗಿ ನಾಚಿ ನೀರಾದಳು ಅಂತಾರೆ, ಮುಂದೆ?
* ಮಂಜುಗಡ್ಡೆ ಆಗದಿದ್ದರೆ ನಿಮ್ಮ ಪುಣ್ಯ.

ಪಿ.ಎನ್.ಶ್ರೀವತ್ಸ, ಬೆಂಗಳೂರು
ಬೆಂಗಳೂರು ವಿಶ್ವವಿದ್ಯಾಲಯ 'ಡಾಕ್ಟರ್ ಆಫ್ ಲೆಟರ್ಸ್'ನ್ನು ಸರೋಜಾದೇವಿಗೆ ಕೊಡುವ ಬದಲು ಜಯಂತಿಗೇ ಕೊಡಬಹುದಿತ್ತಲ್ಲವೇ?
* ಜಯಂತಿ 'ಡಾಕ್ಟರ್ ಆಫ್ ಹಾರ್ಟ್ಸ್' ಅದಕ್ಕೆ.

ಎಚ್.ಸಿ. ನಾಗರತ್ನ, ಬೆಂಗಳೂರು
ಗಂಡನಿಗೆ ಹೇಳದಿರುವ ವಿಷಯ ಯಾವುದು?
* ಆತ ಮನೆ ಖರ್ಚಿಗೆಂದು ಕೊಡುವ ಪುಡಿಗಾಸಿನಲ್ಲಿ ನೀವು ಸಾವಿರಾರು ರೂಪಾಯಿ ಸಂಗ್ರಹಿಸಿರುವುದು.

ಅಮರಯ್ಯಾ, ಶೋರಾಪೂರ
ಮದ್ವೇ ಮುಂಚೆ ಎಂಜಾಯ್ ಮಾಡ್ಬೇಕೋ; ಮದ್ವೇನಂತ್ರಾನೋ?
* ಏನನ್ನ!


ಡಿ.ಎಲ್.ನಾಗರಾಜ್, ಹರಪನಹಳ್ಳಿ
ಗೌಡರ ಕುಟುಂಬಕ್ಕೆ ಯಾರು ಆರತಿ ಎತ್ತುವರು?
* ಈಗ ತಾನೇ ಜನ ಮಂಗಳಾರತಿ ಎತ್ತಿದ್ದಾರಲ್ಲಾ.

ಎಂ.ಎಸ್. ಕಾರ್ತಿಕ್, ಕುಮಟಾ
ಕೋಟ್ಯಾಧಿಪತಿಯಾಗಲು ಏನು ಮಾಡಲಿ?
* ಕೋಟಿ ರೂಪಾಯಿಗಳನ್ನು ದುಡಿಯಬೇಕು.

ಜೆ.ಎಲ್. ಖಲಂದರ್ ಅಜೀಜ್, ಜಾವಗಲ್
ಚಿಡ್ಡಿಗಳಿಗೆ ಬುದ್ಧಿ ಬರುವುದೆಂದು?
* ಎಲ್ಲರೂ ಸೇರಿ ಅವರ ಚಿಡ್ಡಿ ಕಳಚಿದಾಗ.

ಬಸವರಾಜ್ ಬೆಸ್ತರ್, ಗುಲ್ಬರ್ಗ
ವಿಜ್ಞಾನಿ ಕಲಾಂ ಬೂದಿ ಸಾಯಿಬಾಬಾನಲ್ಲಿ ಕಂಡದ್ದೇನು?
* ಮ್ಯಾಜಿಕ್ 20-20.

ಟಿ.ಯು.ಕುಮಾರ, ರಾಮದುರ್ಗ
ಮತಾಂತರಕ್ಕೆ ಮಾನಸಿಕ ದೌರ್ಬಲ್ಯವೇ ಕಾರಣ ಅಂದಿದ್ದಾರಲ್ಲಾ ಪೇಜಾವರ?
* ಮತಗಳ ನಡುವೆ ಅಂತರ ಇರಬೇಕು ಎನ್ನುವ ಪೇಜಾವರನಿಗೆ ಮಾನಸಿಕ ರೋಗ ಬಡಿ.



ಎಂ.ಎಸ್. ವಿನಯ್, ಕುಮಟಿ
ಚಾಮುಂಡೇಶ್ವರಿಗೆ ಯಾರು ಬಲಿ?
* ಕೋಣಗಳಂತೆ ಇರುವವರು ಅಂದ್ರೆ, ಗೊತ್ತಾಗುತ್ತೆ ಬಿಡಿ.

ಬಹುಮಾನಿತ ಪ್ರಶ್ನೆ

ಛೀ ತುಂಟಿ!

ವಯಸ್ಕರ ಶಿಕ್ಷಣ ಶಾಲೆಯಲ್ಲಿ ಪಾಠ ಹೇಳಿ ಕೊಡುವ ಉಪಾಧ್ಯಾಯನೊಬ್ಬನಿಗೆ ಪುಸ್ತಕದ ಜೊತೆಗೆ ವಯಸ್ಕರ ಆರೋಗ್ಯ ಹಾಗೂ ಅವರ ದೈಹಿಕ ಸಮಸ್ಯೆಗಳ ಪರಿಹಾರಕ್ಕಾಗಿ ಅಲ್ಪಸ್ವಲ್ಪ ಶಿಕ್ಷಣವನ್ನು ಕಲಿಸುವ ಚಟ.



ಹಾಗಾಗಿ ಆತ ಪಾಠಗಳ ಮಧ್ಯೆ ವಯಸ್ಕರಿಗೆ "ನಿಮಗೆ ಹೊಟ್ಟೆ ಬಂದರೆ ಏನು ತೊಂದರೆಯಾಗುತ್ತದೆ" ಎಂದು ಪ್ರಶ್ನೆ ಎಸೆದು ಉತ್ತರಕ್ಕಾಗಿ ಕಾದು ಕುಳಿತ. ಕತ್ತು ಬಗ್ಗಿಸಿಕೊಂಡು ಹೇಳಿಕೊಟ್ಟದ್ದನ್ನು ತಿದ್ದುತ್ತಿದ್ದ ಯುವಕನೊಬ್ಬ "ನಿಂತ್ಗಂಡು ಮಾಡಕ್ಕೆ ಕಷ್ಟ ಆಯ್ತದೆ" ಅಂದ.


ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಸಿದ್ದು ಪಡೆದ 1,15,512 ಮತಗಳಿಗೂ, ಶಿವಬಸಪ್ಪ ಪಡೆದ 1,15,255 ಮತಗಳಿಗೂ ಇರುವ ವ್ಯತ್ಯಾಸವೇನು?

ಡಿಸೆಂಬರ್ 6ರ ಸಂಚಿಕೆಯ ನಮ್ಮ ಪ್ರಶ್ನೆ: ಚಾಮುಂಡೇಶ್ವರಿ ಧರ್ಮಯುದ್ಧದಲ್ಲಿ ಅಪಹರಿಸಲ್ಪಟ್ಟ ಸೀತೆ ಯಾರು?
ನಿಮ್ಮ ಉತ್ತರ: ಚಾಮುಂಡೇಶ್ವರಿಯಲ್ಲಿ ನಡೆದದ್ದು ''ಸೀತಾಪಹರಣ''ವಲ್ಲ, ''ಮಹಿಷಾಸುರ ವಧೆ''.
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು

ನೋಡ್ತಾ ಇರಿ, ಮೊದಲ, ಎರಡನೇ ಸ್ಥಾನದಲ್ಲಿರುವವರು ಅಕ್ರಮ ಎಸಗಿರುವುದರಿಂದ ಮೂರನೇ ಸ್ಥಾನದಲ್ಲಿರುವ ನನ್ನನ್ನೇ ವಿಜಯಿ ಅಂತಾ ಘೋಷಿಸ್ತಾರೆ -ಸರ್ವೋತ್ತಮ



ತಬ್ಬಲಿಯು ನೀನಾದೆ ಗೌಡನೆ...!

ತಮ್ಮ ವಂಶದ ಪ್ರತಿಷ್ಠೆಯನ್ನೇ ಪಣಕ್ಕಿಟ್ಟು ಗೌಡ ಅಂಡ್ ಸನ್ಸ್ ಚಾಮುಂಡೇಶ್ವರಿಯಲ್ಲಿ ಗುದ್ದಾಡಿದ್ದರೂ ಸೋತಿದ್ದಾರೆ. ಆದರೆ ಈಗ ಈ ಸೋಲಿನ ನಂತರ ಯಾರಿಗೆ ಲಾಭ ಯಾರಿಗೆ ನಷ್ಟ ಎಂಬುದಕ್ಕಿಂತ ಪ್ರಸ್ತುತ ಕೋ-ಜಾ ಸರ್ಕಾರ ಉರುಳುತ್ತದೆಯಾ? ಅಥವಾ ಕೋಮುವಾದದ ಕೆಸರಿನಲ್ಲಿ ಬೆಳೆದ ಬಜೆಪಿ ಪಕ್ಷ ಇಬ್ಭಾಗಗೊಳ್ಳಲಿದೆಯಾ? ಗೌಡರ ಪರಿವಾರದ ದೌಲತ್ತಿನಿಂದ ರೋಸಿ ಹೋಗಿ ಜಾತ್ಯತೀತ ಜನತಾದಳವೇ ಒಡೆದು ಹೋಗಲಿದೆಯಾ? ತಮ್ಮ ಕುತಂತ್ರಗಳಿಂದ ಗೌಡರು ಕಾಂಗ್ರೆಸ್ ಪಕ್ಷದಲ್ಲೇ ಒಡಕು ತಂದು ತಮ್ಮ ಫ್ಯಾಮಿಲಿ ರಾಜಕಾರಣ ಮುಂದುವರಿಯುವಂತೆ ನೋಡಿಕೊಳ್ಳುತ್ತಾರಾ?

ಕರ್ನಾಟಕದ ಇಂದಿನ ರಾಜಕೀಯದಲ್ಲಿ ಈ ಎಲ್ಲಾ ಪ್ರಶ್ನೆಗಳು ಮುಖ್ಯವಾಗಿದೆ.

ಸಿದ್ಧರಾಮಯ್ಯನವರ ಗೆಲುವು ಅವರಿಗೆ ವೈಯಕ್ತಿಕವಾಗಿ ಮತ್ತು ಅವರ ಹಿತೈಷಿಗಳಿಗೆ ನೆಮ್ಮದಿ ತಂದಿರಬಹುದು. ಜಾತ್ಯತೀತತೆಯ ಸೋಗಿನಡಿ ಕೋಮುವಾದಿ ಸರ್ಕಾರ ನಡೆಸುತ್ತಿರುವ ಗೌಡರ ವಿರೋಧಿಗಳೂ ತೃಪ್ತಿ ನೀಡಿರಬಹುದು. ಕೊನೆ ಪಕ್ಷ, ಅಕಸ್ಮಾತ್ ಸೋತು ತಮ್ಮ ಹೈಕಮಾಂಡ್‌ನಿಂದ ಉಗಿಸಿಕೊಳ್ಳುವ ಅಪಾಯದಿಂದ ತಪ್ಪಿಸಿಕೊಂಡಿದ್ದಕ್ಕೆ ಹಲವು ಕಾಂಗೈಗಳಿಗೂ ಸಂತಸವಾಗಿರಬಹುದು.

ಗೌರಿ ಲಂಕೇಶ್ ಮತ್ತು ಬಿಳಿದಾಳೆ ಈಶ

ಆದರೆ ಇವರೆಲ್ಲರಿಗಿಂತ ಇವತ್ತು ಸಿದ್ಧು ಗೆಲುವಿನಿಂದ ಹೆಚ್ಚು ಸಂತೋಷಪಟ್ಟಿರುವವರು, ಖಾಸಗಿಯಾಗಿ ಸಿಹಿ ಹಂಚುತ್ತಿರುವವರು ಬೇರಾರೂ ಅಲ್ಲ, ಬಜೆಪಿ ಪಕ್ಷದ ಚೆಡ್ಡಿಗಳು!


ಇದು ಊಹಾಪೋಹವಲ್ಲ. ಚಾಮುಂಡೇಶ್ವರಿ ಚುನಾವಣಾ ಕಾವು ಏರಿದ್ದಾಗ ಬಜೆಪಿಗಳು ಮಾಡಿದ್ದೇನು ಎಂಬುದನ್ನು ಗಮನಿಸಿ. ಮೊದಲಿಗೆ ಬಜೆಪಿಯ ಪಿತೃಸಂಸ್ಥೆ (ಅಖಂಡ ಬ್ರಹ್ಮಚಾರಿಗಳ) ಆರ್‌ಎಸ್‌ಎಸ್ ಮಾಡಿದ್ದೇನು? "ಈ ಚುನಾವಣೆಗೂ ನಮಗೂ ಸಂಬಂಧವಿಲ್ಲ" ಎಂದು ತಟಸ್ಥವಾಯಿತು. ಆನಂತರ ಮೈಸೂರಿನ ಬಜೆಪಿ ನಾಯಕರಾದ ಶಂಕರಲಿಂಗೇಗೌಡ, ರಾಮದಾಸ್ ಇತ್ಯಾದಿ ಆರ್‌ಎಸ್‌ಎಸ್‌ನ ಬೆದರುಬೊಂಬೆಗಳು ಸುಮ್ಮನಾದವು. ಯಡ್ಡಿಯಂತಹ ಇತರೆ ಚೆಡ್ಡಿಗಳು ಮೈಸೂರಿಗೆ ಹೋಗಿ ಅಟೆಂಡೆನ್ಸ್ ಹಾಕಿ ನಾಪತ್ತೆಯಾದವು. ಇದಿಷ್ಟೇ ಅಲ್ಲ, ಯಾವಾಗ ಎಲೆಕ್ಷನ್ ಅಧಿಕಾರಿ ರೇಮಂಡ್ ಪೀಟರ್ ವಿರುದ್ಧ ಗೌಡರ ಗೌಡ ದೇವೇಗೌಡ ಕೆಂಡಕಾರುತ್ತಿದ್ದರೋ, ಆಗಲೇ ಯಡ್ಡಿ ಅದೇ ಪೀಟರ್ ಪರವಾಗಿ ದನಿ ಎತ್ತಿದರು. ಇದೆಲ್ಲ ನಡೆದದ್ದು ಸಾರ್ವಜನಿಕವಾಗಿ. ಆದರೆ ಗುಪ್ತವಾಗಿಯೂ ಬಜೆಪಿ ಕಾರ್ಯ ನಿರ್ವಹಿಸಿತ್ತು. ತನ್ನ ಹಲವಾರು ಪಡೆಗಳ ಮೂಲಕ ಕಾಂಗ್ರೆಸ್ ಪರವಾಗಿ ನಿಶ್ಶಬ್ಧವಾಗಿ ಪ್ರಚಾರದಲ್ಲಿ ಬಜೆಪಿ ತೊಡಗಿತ್ತಲ್ಲದೆ, ತನ್ನ ಶಕ್ತ್ಯಾನುಸಾರ ಕಾಂಗ್ರೆಸ್ ಕಾರ್ಯಕರ್ತರಿಗೆ ಧನ-ಹೆಂಡದ ಸಹಾಯವನ್ನೂ ಮಾಡಿತು.

ಇದೆಲ್ಲ ನಡೆದದ್ದು ಸಿದ್ಧರಾಮಯ್ಯನವರ ಬಗೆಗಿನ ಗೌರವಕ್ಕಾಗಿ ಅಲ್ಲ, ಕಾಂಗ್ರೆಸ್ ಬಗೆಗಿನ ಪ್ರೀತಿಗೂ ಅಲ್ಲ, ಬದಲಾಗಿ ದೇವೇಗೌಡ ಮತ್ತವರ 'ನಿಜವಾದ' ಮಗ ಕುಮಾರಸ್ವಾಮಿಗೆ ಮುಖಭಂಗ ಉಂಟು ಮಾಡಲು!

ಗೌಡರ ಸರ್ವಾಧಿಕಾರಿತನವನ್ನು ಕುಗ್ಗಿಸಿದರೆ, ಕುಮಾರಸ್ವಾಮಿಯ ತಿಮಿರನ್ನು ಕರಗಿಸಿದರೆ, ಆಗಲಾದರೂ ಅವರಿಬ್ಬರ ಜುಟ್ಟು ತಮ್ಮ ಹಿಡಿತಕ್ಕೆ ಸಿಗಬಹುದೆಂಬ ದುರಾಲೋಚನೆಯಿಂದ! ಹೇಳಿಕೇಳಿ, ಅತಿಹೆಚ್ಚು ಶಾಸಕರನ್ನು ಹೊಂದಿರುವ ಬಜೆಪಿ, ಅತಿ ಕಡಿಮೆ ಬಲ ಪಡೆದಿರುವ ಗೌಡರ ತಾಳಕ್ಕೆ ಕುಣಿಯಬೇಕಾಗಿದೆ. ಈ ಮಧ್ಯೆ ಹಲವೇ ಹಲವರು ಅಧಿಕಾರ ಪಡೆದಿದ್ದಾರೆ ಮಾತ್ರವಲ್ಲ, ಅಧಿಕಾರದೊಂದಿಗೆ ಬರುವ ಅಮೇಧ್ಯಕ್ಕೆ ಇನ್ನೂ ಅದೆಷ್ಟೋ ಚೆಡ್ಡಿಗಳು ನಾಲಿಗೆ ಚಾಚಿ ಕೂತಿವೆ. ಇಂತಹ ಸಂದರ್ಭದಲ್ಲಿ ಗೌಡರ ಜನತಾದಳ ಸೋತರೆ ಕಾಂಗ್ರೆಸ್‌ಗಿಂತ ಬಜೆಪಿಗೇ ಹೆಚ್ಚು ಲಾಭವಲ್ಲವೇ?!


ಚುನಾವಣಾ ಫಲಿತಾಂಶ ಹೊರಬೀಳುತ್ತಿದ್ದಂತೆ ಬಜೆಪಿ ನಾಯಕರಿಗೆ ಆನಂದವೋ ಆನಂದ. ಟಿವಿ ಕ್ಯಾಮೆರಾಗಳ ಮುಂದೆ ಅವರು ಹಾಜರಾದಾಗ ಆ ಆನಂದವನ್ನು ಅವರು ಹತ್ತಿಕ್ಕಲು ಪಡುತ್ತಿದ್ದ ಪಾಡು ಹಾಸ್ಯಾಸ್ಪದವಾಗಿತ್ತು!

ಚೆಡ್ಡಿಗಳ ಈ ಷಡ್ಯಂತ್ರ ಪ್ರಾರಂಭವಾಗಿದ್ದು ಪಕ್ಷದ ಅಭ್ಯರ್ಥಿಯನ್ನು ನೇಮಿಸದೆ ಇರುವ ನಿರ್ಧಾರ ತೆಗೆದುಕೊಂಡ ಸಂದರ್ಭದಲ್ಲಿ. ಇಲ್ಲೊಂದು ಲೆಕ್ಕಾಚಾರವನ್ನು ಉದಾಹರಣೆಯಾಗಿ ನೀಡಬಹುದು. ಕಳೆದ ಎರಡು ದಶಕಗಳಿಂದ ಚಾಮುಂಡೇಶ್ವರಿಯಲ್ಲಿ ಸಿದ್ಧರಾಮಯ್ಯನವರೇ ಗೆಲ್ಲುತ್ತಾ ಬಂದಿದ್ದಾರೆ (1989 ರಲ್ಲಿ ರಾಜಶೇಖರಮೂರ್ತಿ, 1999 ರಲ್ಲಿ ಗುರುಸ್ವಾಮಿ ಹೊರತುಪಡಿಸಿದರೆ). ಅಷ್ಟು ಮಾತ್ರವಲ್ಲ, ಈ ಕ್ಷೇತ್ರದಲ್ಲಿ ಬಹುತೇಕ ಬಾರಿ ಬಜೆಪಿ ಎರಡನೇ ಸ್ಥಾನವನ್ನೂ, ಕಾಂಗ್ರೆಸ್ ಮೂರನೇ ಸ್ಥಾನವನ್ನು ಪಡೆಯುತ್ತಾ ಬಂದಿದೆ. ಹೀಗಿದ್ದಾಗ್ಯೂ ಬಜೆಪಿ ತನ್ನ ಅಭ್ಯರ್ಥಿಯನ್ನು ಹಾಕದೆ, ಅಲ್ಲಿ ಗೌಡರ ಫ್ಯಾಮಿಲಿ ಮತ್ತು ಸಿದ್ಧರಾಮಯ್ಯನವರ ನಡುವೆ ನೇರ ಹಣಾಹಣಿಗೆ ಜಾಗ ಬಿಟ್ಟುಕೊಟ್ಟದ್ದು ಆನಂತರ ಒಳಗಿದೊಳಗೆ ಸಿದ್ಧು ಗೆಲುವಿಗೆ ಕೆಲಸ ಮಾಡಿದ್ದು ಯಾಕೆ? ಜೆಡಿಎಸ್ ಅಭ್ಯರ್ಥಿ ಗೆದ್ದರೆ ತಮ್ಮ ಸಮ್ಮಿಶ್ರ ಸರ್ಕಾರಕ್ಕೆ ಮನ್ನಣೆ, ಸೋತರೆ ಗೌಡರಿಗೆ ಮುಖಭಂಗ ಎಂಬ ತರ್ಕದಿಂದ!



ಈ ತರ್ಕದಿಂದಾಗಿ ಗೌಡರ ಫ್ಯಾಮಿಲಿ ಸೋತಿದೆ, ಬಜೆಪಿ ಗೆದ್ದಿದೆ. ಚೆಡ್ಡಿಗಳು ಸಂಭ್ರಮಿಸದೇ ಇರುತ್ತಾರೆಯೇ? ಪುರೋಹಿತಶಾಹಿ ಪಕ್ಷದ ಇಂತಹ ಕುತಂತ್ರಗಳನ್ನು ಅರಿಯದ ದಳದ ತುಂಡು ನಾಯಕ ಗೌಡ ಮತ್ತವರ ಮಗ ಕೋಟ್ಯಂತರ ರೂಪಾಯಿಗಳನ್ನು ಸುರಿಸಿ, ಹೆಂಡದ ಹೊಳೆಯನ್ನೇ ಹರಿಸಿ, ಆಮಿಷಗಳನ್ನೇ ಸುರಿಮಳೆಗೈದು, "ನಾವ್ಯಾಕೆ ಸೋತೆವು?" ಅಂತ "ಆತ್ಮಾವಲೋಕನ" ಮಾಡಿಕೊಳ್ಳುತ್ತಿರುವುದು ಶೂದ್ರರು ಬುದ್ಧಿಗೇಡಿತನದ ಪರಮಾವಧಿ ಅಲ್ಲದೆ, ಮತ್ತಿನ್ನೇನೂ ಅಲ್ಲ!

ವಿಚಿತ್ರವೆಂದರೆ, ಸಿದ್ಧು ಗೆಲುವಿನ ಬಗ್ಗೆ ಚೆಡ್ಡಿಗಳು ಸಂತೋಷಗೊಂಡಷ್ಟೇ ಹರ್ಷಿತರಾಗಿರುವುದು ಸ್ವತಃ ಗೌಡರ ಜನತಾದಳದ ಹಲವಾರು ನಾಯಕರು! ಅವರಲ್ಲಿ ಒಕ್ಕಲಿಗರೂ, ಲಿಂಗಾಯತರೂ ಇರುವುದು ಇನ್ನೂ ವಿಚಿತ್ರವಾಗಿದೆ!



ಗೌಡರೇನೋ ಚಾಮುಂಡೇಶ್ವರಿಯಲ್ಲಿ ತಮ್ಮ ವಂಶಪಾರಂಪರ್ಯ ರಾಜಕೀಯವನ್ನು ವಿರೋಧಿಸುವ ಒಕ್ಕಲಿಗರ ಮುಂದೆ "ನಮ್ಮ ಜಾತಿಯ ಮರ್ಯಾದೆಯನ್ನಾದರೂ ಉಳಿಸಿ" ಎಂದು ಗೋಗರೆದಿದ್ದರು. ಆದರೆ ಇವತ್ತು ಅವರದೇ ಒಕ್ಕಲಿಗ ಜಾತಿಗೆ ಸೇರಿದ ಹಲವಾರು ಶಾಸಕರು ಗೌಡ ಮತ್ತವರ ಪುತ್ರರ ದಬ್ಬಾಳಿಕೆ ವಿರುದ್ಧ ತಿರುಗಿಬಿದ್ದಿದ್ದಾರೆ. ಅವರಲ್ಲಿ ನಾಗಮಂಗಲದ ಚೆಲುವರಾಯಸ್ವಾಮಿ ಪ್ರಮುಖ. ಕಾಂಗ್ರೆಸ್ ಪಕ್ಷದ ಬಾಗಿಲು ಎರಡಿಂಚು ತೆರೆದರೂ ಸಾಕು, ಅಲ್ಲಿಗೆ ಹಾರಿಹೋಗುವ ಯತ್ನದಲ್ಲಿರುವ ಚೆಲುವರಾಯಸ್ವಾಮಿ ಇವತ್ತಿಗೂ ಕಾಂಗ್ರೆಸ್‌ನ ನಾಯಕರೊಂದಿಗೆ ದಿನನಿತ್ಯ ಸಂಪರ್ಕದಲ್ಲಿದ್ದಾರೆ. ಇದು ಗೊತ್ತಾಗಿಯೇ, ಮೊನ್ನೆಯ 'ಆತ್ಮಾವಲೋಕನ ಸಭೆ'ಯಲ್ಲಿ "ಯಾರೂ ಬೇರೆ ಪಕ್ಷದ ಕಡೆ ನೋಡಬಾರದು" ಎಂಬ ನಿರ್ಣಯಕ್ಕೆ ಇದೇ ಚೆಲುವನಿಂದ ಅನುಮೋದನೆಯನ್ನು ಕುಮಾರಸ್ವಾಮಿ ಪಡೆದದ್ದು! ಆದರೆ ಗೌಡರ ದುರಾದೃಷ್ಟ ನೋಡಿ: ಗೌಡರೊಂದಿಗೆ ಇದ್ದರೆ ತನ್ನನ್ನೆಂದೂ ಬೆಳೆಯಲು ಬಿಡುವುದಿಲ್ಲ, ತನ್ನ ಜಾಗಕ್ಕೆ ವೈರಿ ಶಿವರಾಮೇಗೌಡನನ್ನು ತರುವ ಯತ್ನ ನಡೆದಿದೆ, ಸಿದ್ಧರಾಮಯ್ಯನವರ ಬೆಂಬಲವಿಲ್ಲದೆ ತಾನು ಮುಂದಿನ ಚುನಾವಣೆಯಲ್ಲಿ ಗೆಲ್ಲಲಾಗುವುದಿಲ್ಲ, ಮುಂದಿನ ಬಾರಿ ಜನತಾದಳಕ್ಕೆ ಭವಿಷ್ಯವಿಲ್ಲ.... ಎಂದೆಲ್ಲಾ ಅರಿತಿರುವ ಚೆಲುವರಾಯಸ್ವಾಮಿ ಕಾಂಗ್ರೆಸ್‌ನೊಂ[...] ತನ್ನ ಸಲ್ಲಾಪವನ್ನು ನಿಲ್ಲಿಸಿಲ್ಲ. ಚೆಲುವರಾಯಸ್ವಾಮಿಯಂ[...] ಇತರೆ ಹಲವಾರು ಒಕ್ಕಲಿಗ ಶಾಸಕರೂ ಗೌಡರ ಫ್ಯಾ[...] ರಾಜಕಾರಣದಿಂದ ಬೇಸತ್ತು ಬಂಡಾಯವೆದ್ದಿರು[...] ಅಚ್ಚರಿಯೇನಲ್ಲ.

ಇನ್ನು ಶಿವಬಸಪ್ಪ ಎಂಬ ಕೋಲೆ ಬಸವನಿಗೆ ಪಕ್ಷದ ಟಿಕೆಟು ಕೊಟ್ಟು ಲಿಂಗಾಯತರ ಮತಗಳನ್ನು ಪಡೆಯುವ ಗೌಡರ ಸಂಚೂ ವಿಫಲವಾಗಿದೆ. ಜೆ.ಎಚ್. ಪಟೇಲ್‌ರ ಪುತ್ರ ಮಹಿಮಾ ಬಂಡಾಯವೆದ್ದು ಹಲವು ತಿಂಗಳುಗಳಾಗಿವೆ. ಮಹಿಮಾನಂತೆಯೇ ಇತರೆ ಲಿಂಗಾಯತ ನಾಯಕರಿಗೂ ಗೌಡರ ಕಾರ್ಯವೈಖರಿ ನೋಡಿ[...] ಜಿಗುಪ್ಸೆಯಾಗಿದೆ.

ಕಳೆದ ಎರಡು ವರ್ಷಗಳಿಂದ ಗೌಡ[...] ಲಿಂಗಾಯತರಿಗೆ ಮಾಡಿರುವುದೇನು? ಎ[...] ಪ್ರಕಾಶರಿಗೆ ಅವಮಾನದ ಮೇಲೆ ಅವಮ[...] ರಾಜಶೇಖರಮೂರ್ತಿಯವರಿಗೆ ಭ್ರಮನಿರಸನ, ವಿಜ[...] ಸಂಕೇಶ್ವರರಿಗೆ ಫುಟ್‌ಬೋರ್ಡ್ ಸ್ಥಾನ, ಮಹಿಮಾನ[...] ಯುವಕರ ಬಗ್ಗೆ ನಿರ್ಲಕ್ಷ್ಯ.... ಇಷ್ಟೆಲ್ಲಾ ಆದ ಮೇ[...] ತನಗೆ ಲಿಂಗಾಯತರು 'ಶರಣು' ಎನ್ನಬೇಕೆಂದರೆ ಅ[...] ತಲೆ ಕೆಟ್ಟದೆಯೇ?!

ಇವತ್ತು ರಾಜ್ಯ ರಾಜಕೀಯದಲ್ಲಿ ಈ ಲಿಂಗಾ[...] ಸಮುದಾಯದ ದೈನೇಸಿ ಸ್ಥಿತಿ ಹೇಗಿದೆ ಎಂದರೆ, ಗ[...] ಪಟಾಲಂನಲ್ಲಿ ಜಾಗವಿಲ್ಲ, ಬಜೆಪಿಯ ಗರ್ಭಗುಡಿ[...] ಮರ್ಯಾದೆ ಇಲ್ಲ, ಕಾಂಗ್ರೆಸ್‌ನಲ್ಲಿ ಆಟಕ್ಕುಂಟು ಲೆಕ್ಕ[...] ಎನ್ನುವಂತಾಗಿದೆ. ಯಡಿಯೂರಪ್ಪ ಇವತ್ತು ಉಪಮು[...] ಮಂತ್ರಿಯಾಗಿದ್ದರೂ ಆತನನ್ನು ಲಿಂಗಾಯತರ ನಾ[...] ಎಂದು ಯಾರೂ ಪರಿಗಣಿಸುವುದಿಲ್ಲ. ಯ[...] ಯೂರಪ್ಪನಿಗೆ ಕಡಿವಾಣ ಹಾಕಲು ಇವತ್ತು ಬಸವರ[...] ಯತ್ನಾಳ್ ಎಂಬಾತನನ್ನು ಮುಂಚೂಣಿಗೆ ತ[...] ಪ್ರಯತ್ನಗಳು ನಡೆಯುತ್ತಿವೆಯಾದರೂ ಈ ಯತ್ನ[...] ಕೂಡ ಜನವರಿ ಅನಂತಕುಮಾರನ ಕೈಗೊ[...] ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ!

ಅದೆಲ್ಲ ಇರಲಿ, ಗೌಡರ ರಾಜಕೀಯದ ವಿ[...] ಒಕ್ಕಲಿಗರೂ, ಲಿಂಗಾಯತರೂ ಬಂಡಾಯವೆದ್ದಿ[...] ಈಗ ಗೌಡರ ಪರವಾಗಿ ಯಾರಿರಬಹುದು ಎ[...] ಹುಡುಕುವುದೇ ವಿಫಲ ಪ್ರಯತ್ನವಾಗಿದೆ. ಸಿದ್ಧರಾಮ[...] ನವರಿಗೆ ಮಾಡಿದ ಅನ್ಯಾಯದ ನಂತರ ಕುರುಬರೆ[...] ಗೌಡರನ್ನು ಮೂಸಿಯೂ ನೋಡುವುದಿಲ್ಲ. ಬ[...] ಯೊಂದಿಗೆ ಕೈಜೋಡಿಸಿದ ನಂತರ ಕಮ್ಯುನಿಸ್[...] ಅಲ್ಪಸಂಖ್ಯಾತರೂ ಗೌಡರಿಗೆ ಕ್ಯಾರೆ ಅನ್ನುವುದಿಲ್ಲ. [...] ಕೋ-ಜಾ ಸರ್ಕಾರ ನಡೆಸುತ್ತಿರುವುದರಿಂದ ಸಮ[...] ವಾದಿ ಪಕ್ಷವಾಗಲಿ, ಬಹುಜನ ಸಮಾಜ ಪಕ್ಷವಾ[...] ಗೌಡರ ಬಗ್ಗೆ ಕ್ಯಾರೆ ಅನ್ನುತ್ತಿಲ್ಲ. ಈಗ ದೇವೇ[...] ರೊಂದಿಗೆ ಉಳಿದಿರುವವರ್‍ಯಾರು ಎಂದು ನೋಡಿ[...] ಅವರ ವಂಶಬಿಟ್ಟರೆ ಇನ್ಯಾರೂ ಇಲ್ಲ!

ಅರ್ಧ ಒಕ್ಕಲಿಗರಿಲ್ಲ, ಮುಕ್ಕಾಲು ಲಿಂಗಾಯತ[...] ನೂರಕ್ಕೆ ನೂರರಷ್ಟು ಕುರುಬರಿಲ್ಲ, ಜಾತ್ಯತೀತ[...] ಅಲ್ಪಸಂಖ್ಯಾತರೂ ಇಲ್ಲ, ಈಡಿಗರು ಬಂಗಾರಪ್ಪ[...] ರೊಂದಿಗಿದ್ದಾರೆ. ಹೆಚ್ಚುವರಿ ದಲಿತರು ಬಹು[...] ಸಮಾಜ ಪಕ್ಷದೊಂದಿಗಿದ್ದಾರೆ. ಬ್ರಾಹ್ಮಣರು ಬ[...] ಯೊಂದಿಗಿದ್ದಾರೆ.

ಇವತ್ತು ಗೌಡರೊಂದಿಗೆ ಇರುವುದು ಅವರ ಮ[...] 'ಸಂಪಾದಿಸಿರುವ' ತೋಳ್ಬಲ ಮತ್ತು ಹಣಬಲ. [...] ಇವೆರಡರಿಂದ ಚುನಾವಣೆಗಳನ್ನು ಗೆಲ್ಲಲಾಗುವ[...] ಎಂದು ಸಿದ್ಧರಾಮಯ್ಯನವರು ಚಾಮುಂಡೇಶ್ವರಿ[...] ತೋರಿಸಿ ಕೊಟ್ಟಿದ್ದಾರೆ.

ಮೊನ್ನೆ ಸಿದ್ಧರಾಮಯ್ಯನವರು ಕೇವಲ ಮತಗಳಿಂದ ಗೆದ್ದದ್ದನ್ನು ತಮ್ಮ 'ನೈತಿಕ ಗೆ[...] ಎಂದು ಹೇಳುತ್ತಿರುವ ಗೌಡ ಮತ್ತವರ ಕುಮಾರಸ್ವಾಮಿ ಒಂದು ಅಂಶವನ್ನು ನೆನಪಿಡಬೇ[...] ಕಳೆದ ಚುನಾವಣೆಗಳಲ್ಲಿ ಗೆದ್ದ ಬಹುತೇಕ ಜನತಾ[...] ಶಾಸಕರೂ ಅಲ್ಪ ಅಂತರದಲ್ಲೇ ಗೆದ್ದಿದ್ದರು. ಆ ಶಾಸಕ[...] ಬೆಂಬಲ, ಜಾತ್ಯತೀತ ಜನತಾದಳದ ನಿಲುವಿನ ಇದ್ದ ನಂಬಿಕೆ ಈಗ ಕುಸಿದು ಹೋಗಿವೆ.

ಗೌಡ ಮತ್ತವರ ವಂಶ ನೆನಪಿಡಬೇಕಾಗಿ[...] ಮತ್ತೊಂದು ಅಂಶ ಯಾವುದೆಂದರೆ, 257 ಮತದಾ[...] ಅವರ ಪಕ್ಷದ ಸಮಾಧಿಗೆ ಚಾಮುಂಡೇಶ್ವರಿ[...] ಅಡಿಗಲ್ಲು ಹಾಕಿದ್ದಾರಷ್ಟೇ. ಬರುವ ಚುನಾವಣೆ[...] ರಾಜ್ಯದಾದ್ಯಂತ ಮತದಾರರು ಅವರ ವಂಶದ ಸ್ವತ್ತಾ[...] ಪಕ್ಷಕ್ಕೆ ಗೋರಿ ನಿರ್ಮಿಸಿಯೇ ತೀರುತ್ತಾರೆ!

ಶಿವಬಸಪ್ಪನನ್ನು ಸೋಲಿಸಿದ ಶೋಭಾಯಾತ್ರೆ

ಗೌಡರ ಗುಂಪಿಗೆ ಹೇಗಾದರೂ ಮಾಡಿ ಮುಖಭಂಗ ಮಾಡಲು ಒಳಗಿಂದೊಳಗೇ ಷಡ್ಯಂತ್ರ ನಡೆಸುತ್ತಿದ್ದ ಬಜೆಪಿಗಳು ಅದಕ್ಕಾಗಿ ದತ್ತಪೀಠ ವಿವಾದವನ್ನು ಚೆನ್ನಾಗಿ ಬಳಸಿಕೊಂಡುಬಿಟ್ಟರು.

ಚುನಾವಣೆ ಸಂದರ್ಭದಲ್ಲಿ ಎಂತಹ ಮುಠ್ಠಾಳರೂ ಯಾವುದೇ ಜಾತಿ-ಜನಾಂಗದವರನ್ನು ದೂರ ಮಾಡಿಕೊಳ್ಳುವ ಕೆಲಸ ಮಾಡುವುದಿಲ್ಲ ತಾನೆ? ಆದರೆ ಬಜೆಪಿ ಮಾಡಿದ್ದೇನು ನೋಡಿ....

ಶಿವಬಸಪ್ಪ ಜೆಡಿಎಸ್-ಬಜೆಪಿಗಳ ಒಮ್ಮತದ ಅಭ್ಯರ್ಥಿಯಾಗಿದ್ದಾಗಲೂ ಚಾಮುಂಡೇಶ್ವರಿಯಲ್ಲಿ ಬಜೆಪಿ ಲೀಡರ್‌ಗಳು ಓಡಾಡಿದ್ದು ಕಡಿಮೆ. ಅದರ ಬದಲಾಗಿ ಎಲೆಕ್ಷನ್‌ಗೆ ಎರಡು ದಿನ ಇರುವಾಗಲೇ ಡಿಸೆಂಬರ್ 2 ರಂದು ಚಿಕ್ಕಮಗಳೂರಿನಲ್ಲಿ ಎರಡು ಸಾವಿರ ಜನ ಸೇರಿಸಿ ಕೋಮುದ್ವೇಷ ಕೆರಳಿಸುವ ರ್‍ಯಾಲಿ ಮಾಡಿದವರು ಇವರು. ಮುಸ್ಲಿಮರಲ್ಲಿ ಭೀತಿ ಹುಟ್ಟಿಸಲೆಂದೇ ನಡೆಸಿದ ಈ ರ್‍ಯಾಲಿಗೆ ಜೆಡಿಎಸ್ ಗೃಹಮಂತ್ರಿ ಎಂ.ಪಿ. ಪ್ರಕಾಶ್ ಮೇಲೆ ಒತ್ತಡ ತಂದು ಅನುಮತಿ ಗಿಟ್ಟಿಸಿದ್ದರು ಬಜೆಪಿಗಳು. ಅಷ್ಟೂ ಸಾಲದೆಂಬಂತೆ ಅದೇ ದಿನ ಪ್ರತಿಭಟನೆ ನಡೆಸಿದ ಕೋಮು ಸೌಹಾರ್ದ ವೇದಿಕೆಯ ನೂರಾರು ಕಾರ್ಯಕರ್ತರನ್ನು ಅರೆಸ್ಟ್ ಮಾಡಿಸಿ ವಿನಾಕಾರಣ ಜೈಲಿಗಟ್ಟುತ್ತು



ಜಿಲ್ಲಾಡಳಿತ. ಇವೆಲ್ಲಾ ಜಿಲ್ಲಾ ಬಜೆಪಿ ಸಚಿವ-ಶಾಸಕರ ಕುಮ್ಮಕ್ಕಿನಿಂದಲೇ ನಡೆದ ಘಟನೆಗಳು. ಪರಿಸ್ಥಿತಿ ಇನ್ನಷ್ಟು ಹದಗೆಡಿಸಲು ಎಲೆಕ್ಷನ್ ದಿನವೇ ಮತ್ತೆ ಮೂರು ಸಾವಿರ ಜನರನ್ನು ಸೇರಿಸಿ ದತ್ತ ಜಯಂತಿ ಆಚರಿಸಿತು ಸಂಘ ಪರಿವಾರ.

ಇವೆಲ್ಲಾ ಚಾಮುಂಡೇಶ್ವರಿ ಎಲೆಕ್ಷನ್ ಮೇಲೆ ಎಫೆಕ್ಟ್ ಆಗಿದೆ. ಮುಸ್ಲಿಮರು, ದಲಿತರು, ಕ್ರಿಶ್ಚಿಯನ್ನರು ಹಿಂದುಳಿದ ವರ್ಗದ ಜನ ಹಾಗೂ ಪ್ರಜ್ಞಾವಂತ ಮತದಾರರು ಜೆಡಿಎಸ್‌ನಿಂದ ಇನ್ನಷ್ಟು ದೂರವಾಗಲು ಇವೂ ಕಾಣಿಕೆ ನೀಡಿಬಿಟ್ಟವು.

ಮತ್ತೊಂದೆಡೆ ಜೆಡಿಎಸ್‌ನ ಜಮೀರ್ ಅಹ್ಮದ್ ಮೈಸೂರಿನಲ್ಲೆಲ್ಲಾ ಓಡಾಡಿ ಕೆಲವು ಮುಸ್ಲಿಮರ ಮನ ಒಲಿಸಿಕೊಂಡಿದ್ದರು, ಗೌಡರಂತೂ ಕಾಂಗೈ ಶಾಸಕ ತನ್ವೀರ್ ಸೇಠ್‌ಗೆ ಕಾಸು ಕೊಟ್ಟು ಖರೀದಿಸಿಕೊಂಡಿದ್ದರು. ಇದೆಲ್ಲದರಿಂದ ಮುಸ್ಲಿಂ ಓಟುಗಳು ಶಿವಬಸಪ್ಪನಿಗೆ ಬಂತು ಎಂದು ನಂಬಕೊಳ್ಳಲಾಗಿತ್ತು. ಆದರೆ ಬಜೆಪಿಗಳ ದತ್ತಪೀಠ ಗಲಾಟೆಯಿಂದ ಮುಸ್ಲಿಮರು ಕಾಂಗ್ರೆಸ್ ಕಡೆಗೆ ನಡೆದುಬಿಟ್ಟರು. ಗೌಡರಿಗೆ ಸೋಲಾಯಿತು.

ಎಲ್ಲಕ್ಕಿಂತ ಮುಖ್ಯವಾಗಿ ಬಜೆಪಿ ಬಯಸಿದ್ದೇ ನಡೆದುಹೋಯಿತು.

ಸೋಲು ಗೆಲುವಿನ ಲೆಕ್ಕಾಚಾರ, ಬೆಟ್ಟಿಂಗಿಗೂ ಸಕಾಲ -ಹೆಡ್‌ಲೈನ್ ಸುದ್ದಿ

ಚಾಮುಂಡೇಶ್ವರಿಯಲ್ಲಿ ಸಿದ್ಧರಾಮಯ್ಯ ಗೆಲುವಿಗೆ ಎರಡು ಬಹಿರಂಗ ಕಾರಣಗಳಿದ್ದವು.

ಒಂದು ದೇವೇಗೌಡರ ಕುಟುಂಬದ ದುರಾಡಳಿತ, ಅಟ್ಟಹಾಸ ಹಾಗೂ ಅಹಂಕಾರಗಳು. ಹಾಗಾಗಿ ಜನ ಈ ಕೇಡಿ ಕುಟುಂಬವನ್ನು ಸೋಲಿಸಿದರು. ಇನ್ನೊಂದು ಸಿದ್ಧರಾಮಯ್ಯನವರ ವೈಯಕ್ತಿಕ ಸಾಮರ್ಥ್ಯ. ದಕ್ಷ ಆಡಳಿತಗಾರ, ಅಹಿಂದ ಹಾಗೂ ದಮನಿತ ವರ್ಗಗಳ ನಾಯಕ ಎಂಬ ಇಮೇಜ್ ಸಿದ್ಧರಾಮಯ್ಯನವರಿಗಿತ್ತು. ಜೊತೆಗೆ ಗೌಡರ ಪುಂಡ ಗುಂಪು ಅಟ್ಟಹಾಸ, ದಬ್ಬಾಳಿಕೆ ನಡೆಸಲು ಯತ್ನಿಸುತ್ತಿದ್ದಾಗ ಸಿದ್ದು ಮತದಾರರೊಂದಿಗೆ ಸೌಜನ್ಯದಿಂದ ವರ್ತಿಸಿದರು. ಕುಮಾರಸ್ವಾಮಿ ಅಧಿಕಾರದ ದರ್ಪ ತೋರುತ್ತಿದ್ದಾಗ ಸಿದ್ದು ವಿನಯ ಪ್ರದರ್ಶಿಸಿದ್ದರು. ಜನ ಇದನ್ನು ಗಮನಿಸಿದ್ದರು.


ಇವೆಲ್ಲವೂ ಸಿದ್ಧರಾಮಯ್ಯಗೆ ಓಟ್ ಆಗಿ ಬದಲಾದವು. ಆದರೆ ಇವಿಷ್ಟರಿಂದಲೇ ಸಿದ್ಧರಾಮಯ್ಯ ಎಲೆಕ್ಷನ್ ಗೆಲ್ಲಲು ಆಗುತ್ತಿರಲಿಲ್ಲ. ಕೇವಲ 257 ಓಟುಗಳ ಗೆಲುವಿನ ಅಂತರ ಇದನ್ನು ಸಾಬೀತುಮಾಡುತ್ತಿದೆ.

ಅತ್ಯಂತ ಕಠಿಣವಾಗಿದ್ದ, ಇಡೀ ಸರ್ಕಾರ, ಕೆಟ್ಟ ಜಾತಿವಾದ, ಭಾರಿ ಹಣದ ಪ್ರವಾಹ–ಇವೆಲ್ಲವನ್ನೂ ಎದುರಿಸಿ ಹೋರಾಡಿ ಗೆಲುವಿನ ದಡ ಸೇರಲು ಸಿದ್ದುಗೆ ನೆರವಾದವರು ಬೇರಾರೂ ಅಲ್ಲ.... ಅದು ಡಿ.ಕೆ. ಶಿವಕುಮಾರ್.

ಡಿ.ಕೆ. ಒರಟ, ಹುಂಬ, ಪ್ರಬುದ್ಧತೆ ಬೆಳೆದಿರದ ನಾಯಕ ಎಂಬ ಅಭಿಪ್ರಾಯ ಜನರಲ್ಲಿದೆ. ಇದರಲ್ಲಿ ಕೆಲವು ವಾಸ್ತವ ಕೂಡ. ಆದರೆ ಚಾಮುಂಡೇಶ್ವರಿಯಲ್ಲಿ ಗೌಡರ ಪಾಳಯ ಮಾಡುತ್ತಿದ್ದ ತಂತ್ರಕ್ಕೆ ಪ್ರತಿತಂತ್ರ ರೂಪಿಸಿದ್ದು, ಪಿತೂರಿಗಳಿಗೆ ಪರಿಹಾರ ಹುಡುಕಿದ್ದು, ತೋಳ್ಬಲ ತೋರಿಸಲು ಬಂದವರಿಗೆ ಭುಜಬಲ ತೋರಿಸಿ ಹಿಮ್ಮೆಟ್ಟಿಸಲು ಸಾಧ್ಯವಾಗಿದ್ದು ಡಿಕೆ ನಡೆಸಿದ ವ್ಯವಸ್ಥಿತ ಕಾರ್ಯಾಚರಣೆಯಿಂದ.

ಡಿಕೆ ಬಗ್ಗೆ ಗೌಡಾಗೆ ಭಯವಿತ್ತು

ಸಿದ್ಧರಾಮಯ್ಯ ಎಷ್ಟೇ ಪಳಗಿದ ರಾಜಕಾರಣಿಯಾದರೂ ಒಬ್ಬ ಕುಮಾರಸ್ವಾಮಿ ಮಾಡಿದಂತೆ ತಾನೇ ಕೈಯಾರೆ ಸಾವಿರ ರೂಪಾಯಿನ ನೋಟು ಮತದಾರನ ಕೈಲಿ ತುರುಕಿ ಓಟಿನ ಭಿಕ್ಷೆ ಬೇಡುವುದಿಲ್ಲ ಎಂಬುದು ಗೌಡ ಫ್ಯಾಮಿಲಿಗೆ ಗೊತ್ತಿತ್ತು. ಅದೇ ರೀತಿ ಸಾರಾಯಿ ಪೊಟ್ಟಣ, ಗಿಫ್ಟ್ ಪ್ಯಾಕೇಟುಗಳನ್ನು ಹಂಚುವುದು, ಜಾತಿ ದ್ವೇಷ–ಕಿಚ್ಚು ಹಚ್ಚುವ ತಳಮಟ್ಟದ ಕೆಲಸ ಮಾಡಲೂ ಸಿದ್ದುಗೆ ಸಾಧ್ಯವಿಲ್ಲ ಎಂಬುದು ಅವರ ಲೆಕ್ಕಾಚಾರವಾಗಿತ್ತು.




ಇದು ಒಂದು ರೀತಿ ಸಭ್ಯ ಪೈಲ್ವಾನ್ ಒಬ್ಬನ ಮೇಲೆ ಕುಸ್ತಿ ಮಾಡಲು ಲಂಗೋಟಿ ಸೈತ ಹಾಕಿಕೊಳ್ಳದೆ ಅಖಾಡಕ್ಕೆ ನುಗ್ಗಿ ಅಸಹ್ಯ ವರ್ತನೆ ತೋರುವಂತಹ ರಣತಂತ್ರವಾಗಿತ್ತು.

ಆಗ ಅಖಾಡಕ್ಕಿಳಿದಿದ್ದೇ ಡಿಕೆ. ನೀನು ಅಂದರೆ ನಿಮ್ಮಪ್ಪ ಎನ್ನುವಂತೆ ಎಲೆಕ್ಷನ್ ರಾಜಕೀಯ ಮಾಡುವುದರಲ್ಲಿ ಡಿಕೆ ನಿಸ್ಸೀಮ ಎಂಬುದು ಗೌಡರಿಗೆ ಗೊತ್ತಿತ್ತು. ಹಾಗಾಗಿ ಸಿದ್ಧರಾಮಯ್ಯ ಪರವಾಗಿ ಕಾಂಗ್ರೆಸ್‌ನಿಂದ ಬೇರೆ ಯಾರ್‍ಯಾರು ಬರುತ್ತಾರೋ ಬಿಡುತ್ತಾರೋ ಆದರೆ ಡಿಕೆ ಮಾತ್ರ ಚಾಮುಂಡೇಶ್ವರಿಯಲ್ಲಿ ಕಾಣಿಸಿಕೊಳ್ಳಬಾರದೆಂದು ಜೆಡಿಎಸ್ ತೀರ್ಮಾನಿಸಿತ್ತು. ಆ ಕಾರಣದಿಂದಲೇ ನವೆಂಬರ್ 15 ರಂದು ಡಿಕೆಯ ಗಾಂಧಿನಗರ ಕಚೇರಿ, ಬಳ್ಳಾರಿಯಲ್ಲಿದ್ದ ಪಿಕೆಟಿ ಅದಿರು ಕಂಪನಿ ಆಫೀಸ್‌ಗಳ ಮೇಲೆ ದಾಳಿ ನಡೆಸಿ ಇಡೀ ಡಿಕೆ ಫ್ಯಾಮಿಲಿಯನ್ನೇ ಅರೆಸ್ಟ್ ಮಾಡಿಸುವ ಯತ್ನ ನಡೆಯಿತು. ಆದರೆ ಡಿಕೆ ಈ ಬೆದರಿಕೆಗೆ ಜಗ್ಗದೆ ನವೆಂಬರ್ 24ರ ಸುಮಾರಿಗೆ ಚಾಮುಂಡೇಶ್ವರಿಗೆ ನುಗ್ಗಿ ಹೋದ ಮೇಲೆ ಪರಿಸ್ಥಿತಿ ಬದಲಾಗಿಹೋಯಿತು. ಬೋಗಾದಿಗೆ ಜೆಡಿಎಸ್ ಅಭ್ಯರ್ಥಿ ಬಿಟ್ಟರೆ ಬೇರ್‍ಯಾರಿಗೂ ಪ್ರವೇಶವಿಲ್ಲ ಎನ್ನುತ್ತಿದ್ದ ಕೆಲ ಜೆಡಿಎಸ್ ಪುಂಡರನ್ನು ಲೆಕ್ಕಿಸದೆ ಅಂಬರೀಷ್ ಹಾಗೂ ಡಿಕೆ ಬೋಗಾದಿಗೆ ಹೋದರು. ಕೊನೆಗೆ ಮತ ಎಣಿಕೆಯಾದಾಗ ಗೊತ್ತಾಗಿದ್ದೇನೆಂದರೆ ಅದೇ ಊರಿನಲ್ಲಿ ಐನೂರು ಚಿಲ್ಲರೆ ಓಟುಗಳು ಜೆಡಿಎಸ್‌ಗೆ ಬಿದ್ದರೆ ಮುನ್ನೂರಾ ಎಂಭತ್ತೊಂದು ಓಟುಗಳು ಕಾಂಗ್ರೆಸ್ ಪಡೆದಿತ್ತು. ಜನ ಅಕ್ಷರಮಟ್ಟಿಗೆ ಜೆಡಿಎಸ್ ಗೂಂಡಾಗಳ ಭೀತಿ ಮೀರಿ ಸಿದ್ದುಗೆ ಬೆಂಬಲಿಸಿದ್ದರು.

ಅಂಬಿ, ಡಿಕೆ ಹಾಗೂ ಉಮಾಶ್ರೀ ಬೋಗಾದಿಗೆ ಹೋಗಿಬಂದಿದ್ದು ಕಾಂಗ್ರೆ ಕಾರ್ಯಕರ್ತರಲ್ಲಿ ಹುಮ್ಮಸ್ಸು ತಂದಿತ್ತು.

ಚಾಮುಂಡೇಶ್ವರಿಯಲ್ಲೇ ಇದ್ದ ಎರಡು ವಾರದಲ್ಲಿ ಡಿಕೆ ಗುಂಪು ಗೌಡರ ಬಣ ಮಾಡಿದಂತೆ ಹಣ, ಸಾರಾಯಿ ಹಂಚಿ, ತಂತ್ರ-ಪ್ರತಿತಂತ್ರಗಳನ್ನು ರೂಪಿಸಿ ಎಲ್ಲಾ ಚುನಾವಣಾ ನೀತಿಸಂಹಿತೆಗಳನ್ನು ಮೀರಿದ ರಾಜಕೀಯವನ್ನು ಮಾಡಿತ್ತು. ಆದರೆ ಡಿಕೆಯ ನಿಜವಾದ ಬುದ್ಧಿವಂತಿಕೆ ಬೆಳಕಿಗೆ ಬಂದಿದ್ದು ಡಿಸೆಂಬರ್ 4ರ ಚುನಾವಣೆಯ ದಿನ. ಅವತ್ತು ಬೆಳಗ್ಗೆ ಹನ್ನೆರಡು ಗಂಟೆಯ ಹೊತ್ತಿಗೆ ಯಾವಾವ ಗ್ರಾಮಗಳಲ್ಲಿ




ಗೌಡ ತಂತ್ರಕ್ಕೆ ಡಿಕೆ ಪ್ರತಿ ತಂತ್ರ

ಬಿಳಿದಾಳೆ ಈಶ

ಎಷ್ಟೆಷ್ಟು ಪೋಲಿಂಗ್ ಆಗಿದೆ ಎಂಬ ಮಾಹಿತಿ ತರಿಸಿಕೊಂಡ ಡಿಕೆಗೆ ಶಾಕ್ ಕಾದಿತ್ತು. ಕಾಂಗ್ರೆಸ್‌ಗೆ ಸಾಲಿಡ್ಡಾಗಿ ಓಟು ಬರಬೇಕಿದ್ದ ಎಷ್ಟೋ ಕಡೆ ಶೇ. ಐವತ್ತರಷ್ಟೂ ಮತದಾನವಾಗಿರಲಿಲ್ಲ. ಅನುಮಾನ ಬಂದ ಡಿಕೆ ಕ್ರಾಸ್ ಚೆಕ್ ಮಾಡಿಸಿ ನೋಡಿದಾಗ ಕೆಲವು ಸ್ಥಳೀಯ ಕಾಂಗ್ರೆಸ್ ತುಂಡು ಲೀಡರ್‌ಗಳನ್ನು ಗೌಡಾ ಕುಟುಂಬ ಖರೀದಿಸಿದ್ದು ಗೊತ್ತಾಯಿತು. ಮತ್ತೊಂದೆಡೆ ಜೆಡಿಎಸ್ ಬೆಂಬಲಿಸುತ್ತಿದ್ದ ಊರುಗಳಲ್ಲಿ ಶೇ. 70-80 ರಷ್ಟು ಮತದಾನವಾಗುತ್ತಿತ್ತು. ಆಗೇನಾದರೂ 'ಎಲ್ಲಾ ಮುಗಿದುಹೋಯಿತೆಂದು' ಕಾಂಗ್ರೆಗಳು ಕೈಚೆಲ್ಲಿ ಬಿಟ್ಟಿದ್ದರೆ ಇವತ್ತು ಸಿದ್ಧರಾಮಯ್ಯ ವಿಧಾನಸೌಧಕ್ಕೆ ಬರಲಾಗುತ್ತಿರಲಿಲ್ಲ. ಓಟಿಂಗ್ ಬಗ್ಗೆ ಕ್ಷಣಕ್ಷಣಕ್ಕೂ ಆನ್‌ಲೈನ್ ಮಾಹಿತಿ ಪಡೆದುಕೊಳ್ಳುತ್ತಾ ಪರಿಸ್ಥಿತಿಯನ್ನು ಅಂದಾಜು ಮಾಡುತ್ತಿದ್ದ ಡಿಕೆ ತಾನು ಕುಳಿತಿದ್ದ ಸ್ಥಳದಿಂದಲೇ ಇಡೀ ಎಲೆಕ್ಷನ್ ನಿರ್ವಹಿಸಲು ಶುರು ಮಾಡಿಬಿಟ್ಟರು. ಗೌಡರಿಂದ ಹಣ ತಿಂದು ಕೈಕೊಟ್ಟಿದ್ದ ಲೋಕಲ್ ಲೀಡರ್‌ಗಳ ಬದಲಾಗಿ ನಿಂತ ಹೆಜ್ಜೆಯಲ್ಲೇ ಬೇರೆಯವರನ್ನು ಹುಡುಕಿ, ಹುರಿದುಂಬಿಸಿ ಖರ್ಚಿಗೂ ಹಣ ತಲುಪಿಸಿ ಜನ ಬಂದು ಓಟ್ ಹಾಕುವಂತೆ ಮಾಡತೊಡಗಿದರು. ಹಾಗಾಗಿ ಸಂಜೆಯ ಹೊತ್ತಿಗೆ ಸಿದ್ದು ಪರಿಸ್ಥಿತಿ ಸುಧಾರಿಸಿತ್ತು. ಡಿಕೆ ಇಷ್ಟೆಲ್ಲಾ ನಿಗಾ



ಇಟ್ಟಿದ್ದರೂ ನರಸಿಂಹರಾಜದ ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಸಿದ್ದುಗೆ ಮೋಸ ಮಾಡುವುದನ್ನು ತಪ್ಪಿಸಲಾಗಲಿಲ್ಲ. ತನ್ವೀರ್‌ಗೆ ಕಂಟ್ರೋಲ್ ಇರುವ ಏರಿಯಾಗಳಿಂದಲೇ ಸಿದ್ಧರಾಮಯ್ಯಗೆ ಕನಿಷ್ಠ ಆರು ಸಾವಿರ ಓಟುಗಳು ಬರುತ್ತವೆಂದು ಕಾಂಗ್ರೆ ಬಣ ಲೆಕ್ಕಾ ಹಾಕಿಕೊಂಡಿತ್ತು. ಆದರೆ ಎಲೆಕ್ಷನ್ ದಿನ ಮಧ್ಯಾಹ್ನ ಮುಗಿದರೂ ಜನ ಮತದಾನಕ್ಕೆ ಬರುವ ಉತ್ಸಾಹ ತೋರಲೇ ಇಲ್ಲ. ಸ್ವತಃ ಶಾಸಕ ತನ್ವೀರ್ ಎಲ್ಲೂ ಕಾಣಿಸಿಕೊಂಡಿರಲಿಲ್ಲ.



ಶಾಸಕ ತನ್ವೀರ್‌ರನ್ನು ಗೌಡ ಫ್ಯಾಮಿಲಿ ಖರೀದಿಸಿಬಿಟ್ಟಿತ್ತು. ಈ ಮೊತ್ತ ಕೋಟಿಗಳ ಲೆಕ್ಕದಲ್ಲಿದೆ ಎಂಬ ರೂಮರ್ ಇದೆ. ಅದೇನೇ ಇರಲಿ, ತನ್ವೀರ್ ಬೆಂಬಲಿಗರು ಬಂದು ಓಟು ಹಾಕದಿದ್ದರೆ ಆಗಬಹುದಾದ ಅಪಾಯ ಗ್ರಹಿಸಿದ ಡಿಕೆ ತನ್ವೀರ್‌ಗಾಗಿ ಎಲ್ಲಾ ಕಡೆ ಹುಡುಕಿಸಿದರೂ ಆತ ಸಿಗಲಿಲ್ಲ.

ತನ್ವೀರ್ ಸೇಠ್ ಮೀರ್ ಸಾದಿಕ್ ಆಗಿ ಬದಲಾಗಿದ್ದರು.

ಈಗ ನೆನಪಿಸಿಕೊಳ್ಳುವುದಾದರೆ ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ತನ್ವೀರ್ ಗೆಲ್ಲುವುದೇ ಅನುಮಾನವಾಗಿದ್ದಾಗ ಸಹಾಯ ಮಾಡಿ ಗೆಲ್ಲಿಸಿದ್ದು ಇದೇ ಡಿಕೆ. ಆದರೆ ಈ ಬಾರಿ ತನ್ವೀರ್ ಗುರುವಿಗೇ ತಿರುಮಂತ್ರ ಹಾಕಿಬಿಟ್ಟಿದ್ದರು.

ತನ್ವೀರ್ ಕೈಕೊಟ್ಟಿದ್ದರಿಂದಾಗಿ ಸಿದ್ದುಗೆ ನಾಲ್ಕು ಸಾವಿರದಷ್ಟು ಲೀಡ್ ಕಡಿಮೆಯಾಯಿತೆಂಬುದು ಈಗ ಎಲ್ಲರಿಗೂ ಗೊತ್ತಾಗಿದೆ.

ಏನೇ ಆಗಲಿ, ಕಾಂಗ್ರೆಸ್ ರಾಜಕೀಯ ಎಂದರೆ ಹೀಗೆ ತಾನೆ!

ಒಟ್ಟಿನಲ್ಲಿ ಗೌಡ ಫ್ಯಾಮಿಲಿ ಡಿಕೆ ಬಗ್ಗೆ ಯಾವ ಕಾರಣಕ್ಕೆ ಹೆದರಿಕೊಂಡಿತ್ತೋ ಕೊನೆಗೆ ಅದೇ ನಿಜವಾಯಿತು. ಸಿದ್ದು ಗೆಲುವಿಗೆ ಡಿಕೆ ನೆರವಾಗಿದ್ದರು.

ಕಾಂಗ್ರೆಗೊಬ್ಬ ರಣನೀತಿಗಾರ

ಎಲೆಕ್ಷನ್ ರಣರಂಗದಲ್ಲಿ ಡಿಕೆ ತಾಕತ್ತು ಸಾಬೀತಾಗಿರುವುದು ಇದೇ ಮೊದಲ ಬಾರಿ ಏನಲ್ಲ. 2004 ರಲ್ಲಿ ನಡೆದ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲೂ ಕನಕಪುರ ಕ್ಷೇತ್ರದಲ್ಲಿ ಬಿರುಗಾಳಿಯಂತಿದ್ದ ದೇವೇಗೌಡರೆದುರು ತೇಜಸ್ವಿನಿ ಎಂಬ ಗಾಳಿಪಟವನ್ನು ಅಖಾಡಕ್ಕಿಳಿಸಿದ್ದೇ ಡಿಕೆ. ಈ ಗಾಳಿಪಟ ಗೋತಾ ಹೊಡೆಯುವುದು ಗ್ಯಾರಂಟಿ ಎಂದು ಎಲ್ಲರೂ ನಂಬಿದ್ದರು. ಆದರೆ ಕನಕಪುರ, ಚನ್ನಪಟ್ಟಣ, ರಾಮನಗರ, ಮಾಗಡಿ, ಉತ್ತರಹಳ್ಳಿ, ಆನೇಕಲ್‌ಗಳಲ್ಲೆಲ್ಲಾ ಚಂಡಮಾರುತದಂತೆ ಓಡಾಡಿ, ಕಾರ್ಯಕರ್ತರನ್ನು ಸಂಘಟಿಸಿ, ಕೋಟಿಗಟ್ಟಲೆ ಹಣ ಖರ್ಚು ಮಾಡಿ ತೇಜಸ್ವಿನಿಯನ್ನು ಗೆಲ್ಲಿಸಿದ್ದೇ ಡಿಕೆ.

ಅದಕ್ಕೂ ಮೊದಲು ಅಂಬರೀಷ್ ಜೆಡಿಎಸ್‌ನಿಂದ ರಾಮನಗರ ಅಸೆಂಬ್ಲಿಯಿಂದ ಸ್ಪರ್ಧಿಸಿದ್ದಾಗ ಅಂಬಿಗೇ ಮಣ್ಣುಮುಕ್ಕಿಸಿ ಸಿ.ಎಂ. ಲಿಂಗಪ್ಪನನ್ನು ಗೆಲುವಿನ ದಡ ಹತ್ತಿಸಿದ್ದೂ ಇದೇ ಡಿಕೆ ಎಂಬುದು ಸ್ವತಃ ಈಗ ಕಾಂಗ್ರೆಸ್‌ನಲ್ಲಿರುವ ಅಂಬಿಗೂ ಗೊತ್ತು.

ಕನಕಪುರ ಕಾಂಗ್ರೆ ಸಂಸದ ದಿವಂಗತ ಚಂದ್ರಶೇಖರ ಮೂರ್ತಿಯವರ ವಿರೋಧ ಕಟ್ಟಿಕೊಂಡಿದ್ದ ಡಿಕೆಗೆ 95 ರಲ್ಲೊಮ್ಮೆ ಕಾಂಗ್ರೆ ಟಿಕೆಟ್ ತಪ್ಪಿಸಲಾಗಿತ್ತು. ಆಗ ಸಾತನೂರಿನಿಂದಲೇ ಬಂಡಾಯ ಅಭ್ಯರ್ಥಿಯಾಗಿ ಸೈಕಲ್ ಗುರುತಿನ ಮೇಲೆ ಸ್ಪರ್ಧಿಸಿ ಸೆಣಸಿ ಗೆದ್ದಿದ್ದರು ಡಿಕೆ.

ಇವೆಲ್ಲಾ ಇವತ್ತು ರಾಜ್ಯ ಕಾಂಗ್ರೆ ಪ್ರಮುಖ ನಾಯಕನೆನಿಸಿಕೊಳ್ಳುವ ಮಟ್ಟಕ್ಕೆ ಬೆಳೆದಿರುವ ಡಿಕೆಯ ಇತ್ಯೋಪರಿ.

ಓಟಿನ ಭಂಡ ರಾಜಕೀಯಕ್ಕೆ ಬೇಕಾದ ಎಲ್ಲಾ 'ಸದ್ಗುಣ'ಗಳನ್ನು ಕಲಿತಿರುವ ಡಿಕೆ ರಾಜಕೀಯಕ್ಕೆ ಕಾಲಿಟ್ಟು 20 ವರ್ಷವಾಗಿದ್ದರೂ ಇನ್ನೂ ಮುತ್ಸದ್ದಿತನ ಕಲಿಯಲಿಲ್ಲ ಎಂಬುದೇ ಎದ್ದು ಕಾಣುವ ದೊಡ್ಡ ಲೋಪ.

ಸಿದ್ಧರಾಮಯ್ಯನವರ ಪಾಲಿಗೆ ಚಾಮುಂಡೇಶ್ವರಿಯಲ್ಲಿ ಡಿಕೆ ಆಪತ್ಬಾಂಧವನಂತೆ ಹೋಗಿರಬಹುದು, ಆದರೆ ಸ್ವತಃ ಒಬ್ಬ ರಾಜಕಾರಣಿಯಾಗಿ ಡಿಕೆ ಫ್ಯಾಮಿಲಿ ಗೌಡ ಫ್ಯಾಮಿಲಿಗಿಂತಾ ಯಾವುದರಲ್ಲೂ ಕಡಿಮೆಯಿಲ್ಲ, ಅಕ್ರಮ ಗಣಿಗಾರಿಕೆ, ಭ್ರಷ್ಟಾಚಾರ, ಗೂಂಡಾಗಿರಿಗಳಲ್ಲೂ ಡಿಕೆ ಚಾಂಪಿಯನ್ನೆ. ಡಿಕೆಯ ಸಾತನೂರು ಕ್ಷೇತ್ರದ ಸಮಸ್ತ ಉಸ್ತುವಾರಿ ನಡೆಸುವುದು ಸೋದರ ಡಿ.ಕೆ. ಸುರೇಶ್. ಮಿನಿ ಪಾಳೆಗಾರನಂತೆ ಆಳುತ್ತಿರುವ ಸೂರಿ ಪುಂಡಾಟಿಕೆಯ ಲೀಡರ್ ಆಗಿ ಬೆಳೆದಿದ್ದಾನೆ. ಬಹುಶಃ ಇಡೀ ಕರ್ನಾಟಕದಲ್ಲಿ ಅತೀ ಹೆಚ್ಚು ದಲಿತರ ಕೊಲೆಗಳಾಗುತ್ತಿರುವುದು ಸಾತನೂರಿನಲ್ಲೇ ಎಂದರೆ ಡಿಕೆ ಸಾಮ್ರಾಜ್ಯದ ಕರಾಳ ಮುಖ ಗೊತ್ತಾಗಬಹುದು.

ಈ ದಿನ ಸಾವಿರಾರು ಕೋಟಿಗಳ ವ್ಯವಹಾರ ನಡೆಸುವ ಹಂತ ತಲುಪಿರುವ ಡಿಕೆ ತನ್ನ ಕರಾಳಮುಖ ಮರೆಮಾಚಿಕೊಳ್ಳಲು ಪತ್ರಿಕಾಗೋಷ್ಠಿಗಳಲ್ಲಿ ಸಂಸ್ಕೃತ ಶ್ಲೋಕ ಹೇಳುವ, ಹೋಮ-ಹವನ ಮಾಡಿಸುವ ಚಿಲ್ಲರೆ ಕೆಲಸಗಳನ್ನು ಮಾಡುತ್ತಿದ್ದಾರೆ.

ಜನ ಇದನ್ನು ನಂಬುವುದಿಲ್ಲ ಎಂಬುದನ್ನು ಡಿಕೆ ನೆನಪಿಡಬೇಕಿದೆ.

ದೇವೇಗೌಡರ ದುಷ್ಟತನವನ್ನು ಸೋಲಿಸಲು ಅದನ್ನೂ ಮೀರಿದ ದುಷ್ಟ ಹಂತಕ್ಕೆ ಹೋಗುವುದು ಪರಿಹಾರವಲ್ಲ. ಸಿದ್ಧರಾಮಯ್ಯ ಹಾಗೂ ಡಿಕೆ ಇದನ್ನು ನೆನಪಿಟ್ಟುಕೊಂಡರೆ ಉತ್ತಮ.

ಆಶ್ಚರ್ಯದ ಸಂಗತಿ ಎಂದರೆ ಕುಮಾರಸ್ವಾಮಿ ಮಗ ನಿಖಿಲ್ ಗೌಡನ ಪುಂಡಾಟಿಕೆ ಪ್ರಕರಣವಾದಾಗ ಡಿಕೆ ಪ್ರತಿಕ್ರಿಯೆ ವಿಭಿನ್ನವಾಗಿತ್ತು.

"ಎಲ್ಲಾ ಮಕ್ಕಳು ತಪ್ಪು ಮಾಡುತ್ತಾರೆ, ಅವರನ್ನು ತಿದ್ದಿ ಬೆಳೆಸಬೇಕು. ಆದರೆ ಕಾನೂನಿನ ಮುಂದೆ ಎಲ್ಲರೂ ಸಮಾನರಂತಿರಬೇಕು" ಎಂದಿದ್ದರು ಡಿಕೆ. ಅದು ದ್ವೇಷ-ಸೇಡು ಮೀರಿದ ಗಂಭೀರ ಪ್ರತಿಕ್ರಿಯೆಯಾಗಿತ್ತು.

ಆದರೆ ಗೌಡ ಹಾಗೂ ಡಿಕೆ ಫ್ಯಾಮಿಲಿಗಳ ನಡುವಿನ ಕಾದಾಟದಲ್ಲಿ ಜನ ರಂಜನೆ ಬಯಸುತ್ತಾರೆಂದು ಡಿಕೆ ಹದ್ದು ಮೀರಿ, ಬೀದಿಜಗಳದ ಲೆವೆಲ್‌ಗೆ ಹೋದರೆ 'ಪುಂಡು ನಾಯಕ'ನೆಂಬ ಬಿರುದು ಡಿಕೆಗೆ ಶಾಶ್ವತವಾಗಿ ಅಂಟಿಕೊಳ್ಳಲಿದೆ. ಆಗ ಡಿಕೆ ಈಗಿರುವ ಲೆವೆಲ್ ದಾಟಿ ಇನ್ನೂ ಮೇಲಕ್ಕೇರುವ ಅವಕಾಶಗಳನ್ನು ಕಳೆದುಕೊಳ್ಳುತ್ತಾರೆ.

ಡಿಕೆಗಿದು ಅರ್ಥವಾಗಬೇಕಿದೆ. ●

ಸುಭಾಶ್ಚಂದ್ರ ಖೆಡ್ಡಾ

ಮುಖ್ಯಮಂತ್ರಿ ಪರಾರಿಗೆ ಪೊಲೀಸರೇ ಕಾರಣ!

ಚುನಾವಣಾ ವೀಕ್ಷಕ ರೇಮಂಡ್ ಪೀಟರ್ 'ಚಾಮುಂಡೇಶ್ವರಿಯಿಂದ ಎಲ್ಲಾ ನಾಯಕರು ಆಚೆ ಹೋಗುವಂತೆ' ಆದೇಶಿಸಿದ್ದರಲ್ಲ, ಆದರೂ ಮುಖ್ಯಮಂತ್ರಿ ಕುಮಾರಸ್ವಾಮಿ ಕ್ಷೇತ್ರದ ಫಾರಂ ಹೌಸ್ ಒಂದರಲ್ಲಿ ಬಚ್ಚಿಟ್ಟುಕೊಂಡು ಮೀಡಿಯಾಗಳಿಗೆ ಸಿಕ್ಕಿಬಿದ್ದರು. ಟಿವಿ ಕ್ಯಾಮರಾಗಳೆದುರು ಕಳ್ಳನಂತೆ ಕಾರು ಹತ್ತಿ ಪರಾರಿಯಾದರು.

ತಮಾಷೆ ಎಂದರೆ ಕುಮಾರಸ್ವಾಮಿ ಹೀಗೆ ನಿಯಮಬಾಹಿರವಾಗಿ ತೋಟದ ಮನೆಯಲ್ಲಿದ್ದ ಸುದ್ದಿಯನ್ನು ಮಾಧ್ಯಮದವರಿಗೆ ತಿಳಿಸಿದ್ದೇ ಪೊಲೀಸರು. ಅದೂ ಮುಖ್ಯಮಂತ್ರಿ ಬೆಂಗಾವಲಿಗಿದ್ದ ಪೊಲೀಸರೆಂದರೆ ಯಾರೂ ನಂಬಲಾರರೇನೊ. ಗೌಡ ಕುಟುಂಬದ ಅಟ್ಟಹಾಸ ನೋಡಿ ಜಿಗುಪ್ಸೆ ಪಟ್ಟುಕೊಂಡಿದ್ದ ಕೆಲ ಹಿರಿಯ ಪೊಲೀಸ್ ಅಧಿಕಾರಿಗಳು ಆಯಾ ದಿನ ಕುಮಾರಸ್ವಾಮಿ ಎಲ್ಲಿಗೆ ಹೋಗುತ್ತಿದ್ದಾರೆ, ತಂಗುವುದೆಲ್ಲಿ, ಯಾರನ್ನು ಭೇಟಿಯಾದರು, ದುಡ್ಡು ಸಾರಾಯಿ ಎಲ್ಲಿಂದ ಬರುತ್ತಿದೆ, ಎಲ್ಲಿಗೆ ಹೋಗುತ್ತಿದೆ ಎಂಬೆಲ್ಲಾ ಸುದ್ದಿಗಳನ್ನು ಆದಷ್ಟು ಸಂಗ್ರಹಿಸಿ ಕಾಂಗ್ರೆ ಪಾಳಯಕ್ಕೆ ರವಾನಿಸುತ್ತಿದ್ದರು. ಸಿದ್ಧರಾಮಯ್ಯನವರ ಬೆಂಬಲಿಗ ದಾವಣಗೆರೆಯ ಸುಭಾಷ್ ಚಂದ್ರ ಇದನ್ನೆಲ್ಲಾ co-ordinate ಮಾಡಿ ಪ್ರತಿತಂತ್ರ ರೂಪಿಸುತ್ತಿದ್ದರು.



ಎಂ.ಟಿ.ಸುಭಾಷ್‌ಚಂದ್ರ

ಅದೇರೀತಿ ಕುಮಾರಸ್ವಾಮಿ ಚುನಾವಣಾ ಆಯೋಗದ ಆದೇಶ ಉಲ್ಲಂಘಿಸಿ ಫಾರಂಹೌಸಿನಲ್ಲಿ ಕದ್ದು ಕುಳಿತಿದ್ದ ಸುದ್ದಿ ಪೊಲೀಸರಿಂದಲೇ ಸುಭಾಶ್ಚಂದ್ರಾಗೆ ಗೊತ್ತಾಯಿತು. ಸುಭಾಷ್ ಬೇರೇನೂ ಮಾಡದೆ ಕೆಲ ಟಿವಿ ವರದಿಗಾರರಿಗೆ ಈ ಸುದ್ದಿ ಕೊಟ್ಟು ಕ್ಯಾಮರಾ ಸಹಿತ ಸ್ಥಳಕ್ಕೆ ಕಳಿಸಿಬಿಟ್ಟರು.

ಮುಖ್ಯಮಂತ್ರಿ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದು ಕಳ್ಳನಂತೆ ಸ್ಥಳಬಿಟ್ಟು ಪರಾರಿಯಾದ. ಹೀಗೆ ಕುಮಾರಸ್ವಾಮಿಯನ್ನು ಹಿಡಿದುಕೊಡಲು ಪ್ಲಾನ್ ಮಾಡಿದ್ದ ಪೊಲೀಸ್ ಅಧಿಕಾರಿಗಳು ಆಮೇಲೆ ಬಿದ್ದೂ ಬಿದ್ದೂ ನಗಾಡಿದರಂತೆ.

ನೋಡಿ ಸಾರ್, ನಾನಿನ್ನೂ ಜೀವಂತ ಇದ್ದೀನಿ. ಮತದಾರರ ಪಟ್ಟಿಯಲ್ಲಿ ನನ್ನ ಹೆಸರಿಗೆ ರೆಡ್‌ಮಾರ್ಕ್ ಹಾಕಿದ್ದಾರೆ-ಕರೀಗೌಡ (35) ಮತದಾರ


"ಇದು ಧರ್ಮಯುದ್ಧ. ತಾಯಿ ಚಾಮುಂಡೇಶ್ವರಿ ಖಂಡಿತಾ ದುಷ್ಟರ ಸಂಹಾರ ಮಾಡೇ ಮಾಡ್ತಾಳೆ. ಅದಕ್ಕೇ ಚುನಾವಣಾ ಪ್ರಚಾರಕ್ಕೂ ಮುನ್ನ ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿ ಹರಕೆ ಹೊತ್ತಿದ್ದೀನಿ!"

ಇದು ಮಾಜಿ ಪ್ರಧಾನಿ ದೇವೇಗೌಡರು ಚಾಮುಂಡಿ ಬೆಟ್ಟಕ್ಕೆ ಬಂದು ಸಕುಟುಂಬ ಸಮೇತರಾಗಿ ತಾಯಿ ಚಾಮುಂಡೇಶ್ವರಿಯ ಸನ್ನಿಧಿಯಲ್ಲಿ ನಿಂತು ಆಡಿದ ಮಾತು. ಬಹುತೇಕ ಪತ್ರಿಕೆಗಳಲ್ಲಿ ಇದು ಅಚ್ಚಾಗಿದೆ. ಟೀವಿಗಳಲ್ಲಿ ದೃಶ್ಯ ಸಮೇತ ವರದಿಯಾಗಿದೆ. ಅವತ್ತು ದೇವೇಗೌಡರ ಜೊತೆ ನಿಂತು ಪಿತೃವಾಕ್ಯ ಪರಿಪಾಲಕನಂತೆ ಮಂತ್ರಿ ರೇವಣ್ಣ ಮತ್ತೊಂದು ಡೈಲಾಗ್ ಹೊಡೆದಿದ್ದ: "ನೋಡ್ತಾ ಇರಿ. ಯಾರು ನಮ್ಮ ಬೆನ್ನಿಗೆ ಚೂರಿ ಹಾಕಿದ್ರೋ, ನಮ್ಮ ಕುಟುಂಬಕ್ಕೆ ಯಾರು ದ್ರೋಹ ಬಗೆದರೋ ಅಂಥವರಿಗೆ ತಾಯಿ ಚಾಮುಂಡೇಶ್ವರಿ ಶಿಕ್ಷೆ ಕೊಟ್ಟೇ ಕೊಡ್ತಾಳೆ!"

Of course ಅದನ್ನು ಚಾಮುಂಡೇಶ್ವರಿಯ ಫಲಿತಾಂಶವೇ ಸಾಬೀತು ಮಾಡಿದೆ. ಅಂತಿಮವಾಗಿ 'ತಾಯಿ ಚಾಮುಂಡೇಶ್ವರಿಯ ಮಹಿಮೆಯೇ' ಮೆರೆದಿದೆ. ಯಾರು ದುಷ್ಟರು, ಧರ್ಮಯುದ್ಧ ಯಾರದು ಎಂಬುದನ್ನೂ 'ತಾಯಿ ಚಾಮುಂಡಿಯೇ' ತೀರ್ಪು ಕೊಟ್ಟಿದ್ದಾಳೆ. ಮಾಜಿ ಪ್ರಧಾನಿ ದೇವೇಗೌಡರ ಅಕ್ಷೌಹಿಣಿ ಸೈನ್ಯ, ಇಡೀ ಕೋ-ಜಾ ಸರ್ಕಾರದ ಅಷ್ಟೂ ಮಂದಿ ಮಂತ್ರಿಗಳು, ಬಿಜೆಪಿ ಮತ್ತು ಜೆಡಿಎಸ್‌ನಂಥ ಅಧಿಕಾರಾರೂಢ ಎರಡು ಬಲಾಢ್ಯ ಪಕ್ಷಗಳು, ಕೊಪ್ಪರಿಗೆ ಗಟ್ಟಲೇ ದುಡ್ಡು, ಮತದಾರರಿಗೆ ಟೀವಿ, ಮೊಬೈಲು ಎಲ್ಲಾ ಕೊಟ್ರೂ, ಪತ್ರಿಕೆಗಳನ್ನೆಲ್ಲ ಸಾರಾಸಗಟಾಗಿ ಖರೀದಿಸಿಯೂ, ಎರಡು ಬಲಾಢ್ಯ ಜಾತಿಗಳು ಒಟ್ಟಿಗೇ ನಿಂತೂ ಒಬ್ಬ ಸಿದ್ಧರಾಮಯ್ಯನನ್ನು ಸೋಲಿಸಲು ದೇವೇಗೌಡರ ಕೈಲಾಗಲಿಲ್ಲ.

ಇರಲಿ, ಚುನಾವಣೆಯೆಂದರೆ ಇವೆಲ್ಲಾ ಇದ್ದದ್ದೇ. ಜನರ ಮನಸ್ಥಿತಿ ಯಾವತ್ತಿಗೂ ಆಳುವ ಸರ್ಕಾರದ ವಿರುದ್ಧವೇ ಅಲ್ಲವೆ? ಅಷ್ಟಕ್ಕೂ ಯಾವ ಮಹಾ ಲೀಡ್ ಪಡೆದು ಸಿದ್ದು ಗೆದ್ದರು? ಬರೀ ಇನ್ನೂರ ಐವತ್ತೇಳು ಮತಗಳಿಂದ ಸಿದ್ಧರಾಮಯ್ಯ ಗೆದ್ದಿದ್ದಾರೆಂದರೆ ಅದೊಂದು ಗೆಲುವಾ? ಎಲೆಕ್ಟ್ರಾನಿಕ್ ಮತಪೆಟ್ಟಿಗೆಯಲ್ಲಿ ಮೊದಲನೇ ಗುಂಡಿ ಒತ್ತಿ ಎಂದಿದ್ದನ್ನೇ ಜನ ಕನ್‌ಫ್ಯೂಸ್ ಮಾಡಿಕೊಂಡು ಕೆಳಗಿನಿಂದ ಮೊದಲನೇ ಗುಂಡಿ ಒತ್ತುಬಿಟ್ಟಿದ್ದಾರೆ. ಹಾಗಿಲ್ಲದೇ ಹೋಗಿದ್ದರೆ ಪಕ್ಷೇತರ ಅಭ್ಯರ್ಥಿ ಸರ್ವೋತ್ತಮ ಎಂಬ ಅನಾಮಧೇಯನಿಗೆ ನಾಲ್ಕು ಸಾವಿರ ಚಿಲ್ಲರೆ ಓಟುಗಳು ಬರುತ್ತಿತ್ತಾ? ಅದೇ ಮತಗಳು ನಮ್ಮ ಶಿವಬಸಪ್ಪನಿಗೆ ಬಿದ್ದಿದ್ದರೆ ಸಿದ್ದು ಗೆಲ್ಲುತ್ತಿದ್ದರಾ? ಕಾಂಗ್ರೆಸ್ ಪಾಲಿಗೆ ಚುನಾವಣಾ ಆಯೋಗದ ಜಾನ್ ಪೀಟರ್ ನೆರವು ಒದಗಿ ಬರದೇ ಹೋಗಿದ್ದರೆ ನಮ್ಮನ್ನು ಸೋಲಿಸಲಾಗುತ್ತಿತ್ತಾ?

ಇದು ಮುಖ್ಯಮಂತ್ರಿ



ಗೌಡಾಸುರ ಸಂಹಾರ

ಕುಮಾರಸ್ವಾಮಿ ಫಲಿತಾಂಶದ ನಂತರ ಮರುಗಿದ ರೀತಿ! ಹೇಳಲು ಮಣ್ಣಿನ ಮೊಮ್ಮಗನಿಗೆ ಬೇರೆ ಏನು ತಾನೇ ಉಳಿದಿತ್ತು? ಯಾವುದನ್ನು ದೇವೇಗೌಡರು ಧರ್ಮಯುದ್ಧ ಎಂದು ಸ್ವಯಂಘೋಷಿಸಿಕೊಂಡರೋ ಅದರ ಸತ್ಯಾಸತ್ಯತೆ ಹೇಗಿತ್ತೆಂದರೆ-

ಹೇಳಿಕೊಳ್ಳಲು ಜೆಡಿಎಸ್-ಬಿಜೆಪಿ ಕೂಟದ ಒಂದೇ ಒಂದು ಜನಪರ ಸಾಧನೆಯಿರಲಿಲ್ಲ. ಇಡೀ ಕ್ಷೇತ್ರದ ಮತದಾರರನ್ನು ಸಾರಾಸಗಟಾಗಿ ಖರೀದಿಸುವ ಬ್ಲೂಪ್ರಿಂಟ್ ಒಂದನ್ನು ಸಾಕ್ಷಾತ್ ದೇವೇಗೌಡರೇ ಬರೆದು ಮಗನ ಕೈಗಿತ್ತಿದ್ದರು. ಚುನಾವಣೆಗೂ ಮೊದಲೇ ಕೇವಲ ಚಾಮುಂಡೇಶ್ವರಿ ಕ್ಷೇತ್ರವೊಂದಕ್ಕೆ 238 ಕೋಟಿ ರೂಪಾಯಿಗಳ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರ ಘೋಷಿಸಿತ್ತು. ಬಜೆಟ್‌ನ ವಿನಃ ಐದು ಕೋಟಿಯ ಮೇಲೆ ನಯಾಪೈಸೆಯನ್ನು ಕೂಡ ಸಚಿವ ಸಂಪುಟದ ಅನುಮೋದನೆ ಯಿಲ್ಲದೇ ಸರ್ಕಾರಿ ಬೊಕ್ಕಸದಿಂದ ಬಿಡುಗಡೆ ಮಾಡುವಂತಿಲ್ಲ. ಅದರಲ್ಲೂ ಹತ್ತು ಕೋಟಿಯಷ್ಟು ದುಡ್ಡನ್ನು ಬಿಡುಗಡೆ ಮಾಡಬೇಕೆಂದರೆ ಅದಕ್ಕೆ ವಿಧಾನಸಭೆಯ ಅಧಿವೇಶನದಲ್ಲೇ ಸಮ್ಮತಿ ಕಡ್ಡಾಯ.


ರೆಡ್‌ಹ್ಯಾಂಡ್ ಸಿಕ್ಕಿಬಿದ್ದ ಮುಖ್ಯಮಂತ್ರಿ

"ನನಗೆ ಸಂವಿಧಾನವೇ ಗೊತ್ತಿಲ್ಲ, ಚಾತ್ಯತೀತ ಪದದ ಅರ್ಥವೇ ಗೊತ್ತಿಲ್ಲ" ಎಂದು ಮುಖ್ಯಮಂತ್ರಿಯಾದ ಮರುಗಳಿಗೆಗೇ ಹೇಳಿಕೆ ಕೊಟ್ಟ ಕುಮಾರಸ್ವಾಮಿಗೆ, ಬಜೆಟ್‌ನ ವಿನಃ ಈಪಾಟಿ ದುಡ್ಡನ್ನು ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂದು ಹೇಳುವವರ್‍ಯಾರು?

ಕೇವಲ ಚಾಮುಂಡೇಶ್ವರಿಗೆಂದೇ ಬೊಕ್ಕಸದ ಹತ್ತು ಕೋಟಿಯ ನಿಧಿಯನ್ನು ಒಂದೇ ದಿನದಲ್ಲಿ ಬಿಡುಗಡೆ ಮಾಡಿತ್ತು ಕುಮಾರಸ್ವಾಮಿ ಸರ್ಕಾರ. ಹಾಗೇ ಬಿಡುಗಡೆಯಾದ ದುಡ್ಡನ್ನು ತಂದು ಚಾಮುಂಡೇಶ್ವರಿ ಕ್ಷೇತ್ರದ ನಾಯಕ ಜನಾಂಗದವರಿಗೆ ತಲಾ ಐದೈದು ಸಾವಿರದಂತೆ ಹಂಚಲಾಯ್ತು. ಬಂದಷ್ಟು ಬರಲಿ ಯಾರಪ್ಪನ ದುಡ್ಡು! ಎಂದು ನಾಯಕರ ಹುಡುಗರು ಸರ್ಕಾರ ಕೊಟ್ಟ ಚೆಕ್ಕುಗಳನ್ನೆಲ್ಲ ಮೈಸೂರಿನ ದೇವರಾಜ ಅರಸು ರಸ್ತೆಯ ಮಾರ್ವಾಡಿಗಳಿಗೆ ಒತ್ತೆಯಿಟ್ಟು ಡಿಸ್ಕೌಂಟ್ ಮಾಡಿಕೊಂಡರು.

ರಾ. ಸೋಮನಾಥ್

ಸರ್ಕಾರವೊಂದರ ಹುಚ್ಚಾಟಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ?

ಇನ್ನು ಪಿತಾಮಹ ದೇವೇಗೌಡರ ತಯಾರಿ ಹೇಗಿತ್ತೆಂದರೆ; ಚಾಮುಂಡೇಶ್ವರಿಯ ಸರಿಸುಮಾರು ನಲವತ್ತೈದು ಸಾವಿರ ನಾಯಕರ ಮತಗಳ ಮೇಲೆ ಕಣ್ಣಿಟ್ಟೇ ನಾಯಕರ ಲೀಡರ್ ಚಿಕ್ಕ ಮಾದುವನ್ನು ಎಮ್ಮೆಲ್ಸಿ ಮಾಡಿದ್ದರು.

ಹದಿನೈದು ಸಾವಿರದಷ್ಟಿದ್ದ ಉಪ್ಪಾರರ ಮತಗಳ ಮೇಲೆ ಕಣ್ಣಿಟ್ಟು ನೀರಾವರಿಯವರನ್ನು ಎಮ್ಮೆಲ್ಸಿ ಗಾದಿಗೆ ತಂದರು. ಅದರಲ್ಲೂ ಮುಖ್ಯಮಂತ್ರಿ ಕುಮಾರಸ್ವಾಮಿ ಕೇವಲ ಚಾಮುಂಡೇಶ್ವರಿ ಕ್ಷೇತ್ರದ ಹಳ್ಳಿಗಳಿಗೆಂದೇ ಹದಿನೈದು ಬಾರಿ ಭೇಟಿ ಕೊಟ್ಟರು. ಮೊದಲು ಚಿಕ್ಕಕಾನ್ಯರ ಲಿಂಗಾಯತರ ಮನೆಯಲ್ಲಿ ಮಲಗಿ ಅದಕ್ಕೂ ಟೀಕೆಗಳು ಬಂದಾಗ ದಡದ ಕಲ್ಲಳ್ಳಿಯ ದಲಿತ ಚಲುವಯ್ಯನ ಮನೆಯಲ್ಲಿ ಮಲಗೆದ್ದರು.

ಇನ್ನು ಚುನಾವಣೆ ಘೋಷಣೆಯಾದ ನಂತರದ ಅಪ್ಪ ಮಕ್ಕಳ ಆರ್ಭಟ ಹೇಗಿತ್ತೆಂದರೆ; ದೇವೇಗೌಡರೇ ಪಾಂಡಿಚೇರಿಗೆ ಹೋಗಿ ಶನಿಪರಮಾತ್ಮನಿಗೆ ಹರಕೆ ಹೊತ್ತರು. ಗೌಡರ ಇಡೀ ಕುಟುಂಬ ಸತತ ಮೂರು ದಿನಗಳ ಕಾಲ ಶೃಂಗೇರಿಯಲ್ಲಿ ತಂಗಿ ಸಿದ್ಧು ವಿನಾಶ ಯಜ್ಞ ನಡೆಸಿತು. ಇದು ನನ್ನ ಕೊನೆಯ ಹೋರಾಟ ಎಂದರು ದೇವೇಗೌಡ. ಚಾಮುಂಡೇಶ್ವರಿಯ ನಾಲ್ಕು


ಓಟಿನ ಲೂಟಿಗೆ ಮಣ್ಣಿನ ಮಕ್ಕಳ ಕೊಡುಗೆ

ಪೋರ್ಕಿ ಚನ್ನಿಗಪ್ಪನೇ ಗೌಡರ ವಕ್ತಾರ

'ಸಚಿವ ಚೆಲುವರಾಯಸ್ವಾಮಿಗೆ ಬುದ್ಧಿ ಭ್ರಮಣೆಯಾಗಿದೆ.'

-ಈ ಮಾತು ಆಡಿದ್ದು ಕಾಂಗ್ರೆಸ್‌ನವರೂ ಅಲ್ಲ, ಬಿಜೆಪಿಗಳೂ ಅಲ್ಲ, ಅಥವಾ ಚೆಲುವರಾಯಸ್ವಾಮಿಯ ಆಜನ್ಮವೈರಿ ಶಿವರಾಮೇಗೌಡರೂ ಅಲ್ಲ, ಬದಲಾಗಿ ಗೌಡ ಫ್ಯಾಮಿಲಿಯ ಜೀತದಾಳು ಸಚಿವ ಚನ್ನಿಗಪ್ಪ.

ಎಂಥ ವಿಚಿತ್ರ ನೋಡಿ!



ಚೆಲುವರಾಯಸ್ವಾಮಿಯೂ ಜೆಡಿಎಸ್ ಸಚಿವನೆ, ಚೆನ್ನಿಗನೂ ಜೆಡಿಎಸ್ ಮಂತ್ರಿಯೆ. ಹೀಗಿದ್ದರೂ ಚನ್ನಿಗಪ್ಪ ಹೀಗೆ ಚೆಲುವನ ಬಗ್ಗೆ ಮಾತನಾಡಿದ್ದೇಕೆ, ಅದೂ ಎಲೆಕ್ಷನ್ ಸಮಯದಲ್ಲಿ!

ಅದಕ್ಕೆ ಕಾರಣವಿದೆ.

ಗೌಡರ ಕುಟುಂಬಕ್ಕೀಗ ಸಚಿವ ಚೆಲುವರಾಯಸ್ವಾಮಿಯ ನಿಷ್ಠೆ ಬಗ್ಗೆ ಅನುಮಾನಗಳು ಶುರುವಾಗಿವೆ. ನಾಗಮಂಗಲದಲ್ಲಿ ಕುರುಬರ ಓಟುಗಳೇ ನಿರ್ಣಾಯಕ. ಅವರ ಬೆಂಬಲ ಅರ್ಥಾತ್ ಸಿದ್ಧರಾಮಯ್ಯ ಆಶೀರ್ವಾದ ಸಿಗದಿದ್ದರೆ ಮುಂದಿನ ಎಲೆಕ್ಷನ್‌ನಲ್ಲಿ ಚೆಲುವರಾಯಸ್ವಾಮಿ ಗೆಲ್ಲುವುದು ಕನಸಿನ ಮಾತೇ ಸರಿ. ಹಾಗಾಗಿ ಸಿದ್ದು ವಿರುದ್ಧ ಗೌಡರು ನಿರೀಕ್ಷಿಸುವಷ್ಟು ಚೆಲುವ ಜಗಳಕ್ಕೆ ಬೀಳುತ್ತಿಲ್ಲ ಎಂಬ ಅನುಮಾನ ಗೌಡರಿಗೆ. ಚೆಲುವರಾಯಸ್ವಾಮಿ ಒಳಗಿಂದೊಳಗೇ ಸಿದ್ದುಗೆ ನೆರವಾಗಿದ್ದಾರೆಂಬ ಡೌಟು ಕೂಡ ಇದೆ. ಆ ಕಾರಣಕ್ಕೇನೆ ಸಾರಿಗೆ ಇಲಾಖೆ ಡೀಲ್‌ಗಳು ಪೂರ್ತಿ ಚೆಲುವನ ಪಾಲಾಗದಂತೆ ಗೌಡರ ಭಂಟ ನಾರಾಯಣಗೌಡನನ್ನು ಸಾರಿಗೆ ಕಮಿಷನರ್ ಆಗಿ ತರಲಾಗಿದೆ.

ಇದೆಲ್ಲಾ ಗೊತ್ತಿರುವ ಕಾರಣಕ್ಕೇನೆ ಚನ್ನಿಗಪ್ಪನ ಬಾಯಿಂದ ಈ ಹೊಲಸು ಮಾತುಗಳು ಬರುತ್ತಿವೆ. ಬರೀ ಇಷ್ಟೇ ಅಲ್ಲಾ, ಸಿಂಧ್ಯಾ ವಿರುದ್ಧವೂ ಚನ್ನಿಗಪ್ಪ ಟಿವಿ ಕ್ಯಾಮರಾದೆದುರು ಮಾತಾಡಿದ ಶೈಲಿ ಇತ್ತಲ್ಲ; ಅಶ್ಲೀಲವಾಗಿ ಕೈ ಅಲ್ಲಾಡಿಸುವುದು, ವಿಕಾರವಾಗಿ ನಗುವುದು.... ಈ ಪೋರ್ಕಿ ಶೈಲಿಗಳೆಲ್ಲಾ ಚನ್ನಿಗನ ಹುಟ್ಟುಗುಣ. ಇಂತಾ ಶೋಭದ್ರಗೇಡಿಯನ್ನು ಗೌಡರು ಪಾರ್ಟಿ ವಕ್ತಾರನೆಂಬಂತೆ ಮಾಧ್ಯಮಗಳೆದುರು ಬಿಡುತ್ತಿದ್ದಾರೆಂದರೆ ಗೌಡರ ಲೆವೆಲ್ ಇನ್ನೆಷ್ಟು ಕೆಳಮಟ್ಟದ್ದಿರಬೇಕು ಯೋಚಿಸಿ.

ಕೋ-ಜಾ ಬುಡಕ್ಕೆ ಬಳ್ಳಾರಿ ಡೈನಾಮೆಟ್

ರಾಜ್ಯದ ಅತ್ಯಂತ ಶಕ್ತಿಶಾಲಿ ಬಳ್ಳಾರಿ ಗಣಿಲಾಬಿ ಸದ್ಯಕ್ಕೆ ಸೈಲೆಂಟಾಗಿರುವಂತೆ ಭಾಸವಾಗುತ್ತಿದೆ. ಅಲ್ಲಲ್ಲಿ ತಣ್ಣಗೆ ಒಂದೆರಡು ಕದಲಿಕೆ ಬಿಟ್ಟರೆ ದೊಡ್ಡಮಟ್ಟದ ಚಟುವಟಿಕೆ ಅಲ್ಲಿಂದ ವರದಿಯಾಗುತ್ತಿಲ್ಲ.

ಡೈನಾಮೆಟ್ -ಸ್ಫೋಟಗೊಳ್ಳುವ ಮೊದಲೂ ಹೀಗೇ ತಾನೆ?


ಅನಿಲ್ ಲಾಡ್

ತಣ್ಣಗೆ ಆಗೀಗ ಸುರ್-ಸುರ್ ಎಂದು ಕೊನೆಗೆ ಢಮಾರ್ ಎನಿಸಿಬಿಡುತ್ತದೆ. ಹಾಲಿ ಕೋ-ಜಾ ಸರ್ಕಾರಕ್ಕೆ ಈಗಲೂ ಬಳ್ಳಾರಿ ಡೈನಾಮೆಟ್‌ನ ಭೀತಿ ಕಾಡುತ್ತಲೇ ಇದೆ.

ಗಣಿ ದಂಧೆಯ ಪ್ರಮುಖರ ಪೈಕಿ ಬಿಜೆಪಿಯ ಜನಾರ್ಧನ ರೆಡ್ಡಿ ಗೌಡರ ಕುಟುಂಬದ ಮಾನ ಮರ್ಯಾದೆಯನ್ನೆಲ್ಲಾ ಹರಾಜು ಹಾಕಿದ ಮೇಲೆ ಗೌಡರ ಪಾಲಿಗೆ ಪರಿಸ್ಥಿತಿ ಇನ್ನಷ್ಟು ಕೆಟ್ಟಿದೆ. ಹಾಲಿ ಜೆಡಿಎಸ್ ಶಾಸಕ ಸಂತೋಷ್ ಲಾಡ್ ಜೊತೆ ಗೌಡ ಪರಿವಾರದ ಸಂಬಂಧ ಹಳಸಿಕೊಂಡಿದೆ. ಆ ಕಾರಣಕ್ಕೇನೆ ಚಾಮುಂಡೇಶ್ವರಿ ಸೋಲಿನ ನಂತರ ನಡೆದ ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಗೆ ಸಂತೋಷ್ ಲಾಡ್ ಹೋಗಲಿಲ್ಲ. ಕುಮಾರಸ್ವಾಮಿ ನಾಯಕತ್ವದ ಬಗ್ಗೆ ತನ್ನ ನಿಷ್ಠೆಯಿದೆ ಎಂದೂ ಸಂತೋಷ್ ಲಾಡ್ ಒಪ್ಪಿಕೊಂಡಿಲ್ಲ. ಬಳ್ಳಾರಿ ಗಣಿ ವ್ಯವಹಾರದಲ್ಲಿ ತಲೆ ಹಾಕಿ ಎಲ್ಲವನ್ನೂ, ಎಲ್ಲರನ್ನು ದಮನಿಸಿ ಪಾಳೇಗಾರಿಕೆ ನಡೆಸಲು ಗೌಡ ಕುಟುಂಬ ಯತ್ನಿಸಿದ್ದೇ ಇದಕ್ಕೆ ಕಾರಣ. ಮೇಲಾಗಿ ಸಂತೋಷ್ ಲಾಡ್‌ರನ್ನು ಜೆಡಿಎಸ್‌ನ ATM ಕಾರ್ಡ್ ತರಹ ಮಾತ್ರ ಬಳಸಿದ ಗೌಡರು ಲಾಡ್‌ಗೆ ಪಾರ್ಟಿಯೊಳಗೆ ಹಾಗೂ ಸರ್ಕಾರದಲ್ಲಿ ಯಾವುದೇ ಸ್ಥಾನಮಾನ ನೀಡದೆ ಕುಳಿಸಿರುವುದೂ ಲಾಡ್‌ಗೆ ಕೋಪ ತಂದಿದೆ.


ಸಂತೋಷ್ ಲಾಡ್

ಸಂತೋಷ್ ಲಾಡ್ ಕತೆ ಹೀಗಾದರೆ ಬಿಜೆಪಿಯಲ್ಲಿರುವ ಅನಿಲ್ ಲಾಡ್ ಸಹ ಸಂತೋಷವಾಗಿಲ್ಲ. ಯಡ್ಡಿ-ಅನಂತೂ ಜಗಳದಲ್ಲಿ ಹೈರಾಣಾಗಿರುವ ಅನಿಲ್ ಅನಂತೂ ಪರ ಇದ್ದಾರೆ ಎಂಬ ಡೌಟಿನಿಂದ ಯಡ್ಡಿ ಅನಿಲ್‌ರನ್ನು ಮೂಲೆಗೆ ತಳ್ಳಿದ್ದಾರೆ. ಇದು ಹೀಗೇ ಬೆಳೆಯುತ್ತಾ ಹೋದರೆ ಜನಾರ್ಧನ ರೆಡ್ಡಿ, ಸಂತೋಷ್-ಅನಿಲ್ ಲಾಡ್ ಬ್ರದರ್ಸ್, ಕರುಣಾಕರ ರೆಡ್ಡಿ ಮುಂತಾದವರೆಲ್ಲಾ ಕಾಂಗ್ರೆಸ್‌ನತ್ತ ವಾಲಿದರೂ ಆಶ್ಚರ್ಯವಿಲ್ಲ. ಏಕೆಂದರೆ ಈಗಾಗಲೇ ಕೋ-ಜಾ ಸರ್ಕಾರದ ವಿರೋಧ ಕಟ್ಟಿಕೊಂಡಿರುವ ಗಣಿ ಮಾಲೀಕರಿಗೆ ಪಕ್ಕದ ಆಂಧ್ರದಲ್ಲಿ ಕಾಂಗ್ರೆಸ್ ಸರ್ಕಾರವಿರುವುದು ತಮ್ಮ ವ್ಯವಹಾರ ನಡೆಸಲು ಅನುಕೂಲಕರ ಅನ್ನಿಸಿದೆ. ಅಷ್ಟೇ ಅಲ್ಲಾ ಮುಂದಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಹಾಗೂ ಕೇಂದ್ರದಲ್ಲಿ ಯುಪಿಎ ಗೆಲ್ಲುತ್ತದೆಂದು ಅವರಿಗೆ ಅನ್ನಿಸಿದೆ. ಬಳ್ಳಾರಿ ಗಣಿ ಧಣಿಗಳು ಕೋ-ಜಾಗಳಿಗೆ ಕೈಕೊಟ್ಟರೆ ಅದು ಗೌಡಾಗೆ ಡೈನಾಮೇಟ್ ಏಟೇ. ಬಿಜೆಪಿಗೂ ಸಹ.

ನನಗೆ ಬದ್ಧತೆಯಿದೆ. ನಿಷ್ಠೆಯಿಂದ ಕೆಲಸ ಮಾಡುತ್ತೇನೆ -ರೇಮಂಡ್ ಪೀಟರ್

ಬೇಕ ಎನ್ನೇ ಇರಲಿ; ಆದರೆ ಮೈಸೂರಿನ ಕೆಲ ಪತ್ರಕರ್ತರು ಮಾತ್ರ ಈ ರೀತಿ ಜಾತಿ ಕೆಡಬಾರದಿತ್ತು!

ಅದರಲ್ಲೂ ಅರಣ್ಯ ಮಂತ್ರಿ ಚನ್ನಿಗಪ್ಪ 'ಮೈಸೂರು ಮಿತ್ರ'ದ ಫೋಟೋಗ್ರಾಫರ್ ಕೆ. ಕಿರಣ್‌ಕುಮಾರ್ ಮೇಲೆ ಹಲ್ಲೆ ನಡೆಸಿ ಆತನ ಕ್ಯಾಮರಾ ಕಿತ್ತೊಯ್ದು ಘಟನೆ ಇಡೀ ಪತ್ರಿಕೋದ್ಯಮಕ್ಕೇ ಎಸಗಿದ ಅಪಚಾರವಾಗಿತ್ತು. ಯಾರೇ ವೃತ್ತಿನಿಷ್ಠ ಪತ್ರಕರ್ತನಾದರೂ ಇಂಥ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದೇ ಅಕ್ಷಮ್ಯ.

ನೀತಿಗೆಟ್ಟ ಪತ್ರಕರ್ತರು

ಆದರೆ ಮೈಸೂರಿನ ಪತ್ರಿಕೋದ್ಯಮದ ದುರಂತ ನೋಡಿತ್ತೆಂದರೆ ಯಾವ 'ಮೈಸೂರು ಮಿತ್ರ'ಕ್ಕಾಗಿ ಫೋಟೋಗ್ರಾಫರ್ ಕಿರಣ್‌ಕುಮಾರ್ ತನ್ನ ಪ್ರಾಣವನ್ನೂ ಲೆಕ್ಕಿಸದೇ ನುಗ್ಗಿ ಚನ್ನಿಗಪ್ಪನ ದುರಾಚಾರದ ಫೋಟೋ ಕ್ಲಿಕ್ಕಿಸಿದ್ದನೋ, ಅದೇ 'ಮೈಸೂರು ಮಿತ್ರ'ದ ಧಣಿಗಳು ತಮ್ಮದೇ ಫೋಟೋಗ್ರಾಫರ್‌ನ ಸಮಾಧಿಯ ಮೇಲೆ ಊಟಕ್ಕೆ ಕುಂತುಬಿಟ್ಟರು.



ಮೈಸೂರು ಮಿತ್ರದ ಕಂಟಕ ದಮನಕಾರಾದ ಗೋವಿಂದೇಗೌಡ ಮತ್ತು ಶಿವಣ್ಣರ ಮಧ್ಯೆ ಫೋಟೋಗ್ರಾಫರ್ ಕಿರಣ್ ಕುಮಾರ್

ಇಂಥಾದ್ದೊಂದು ದೋಖಾಕ್ಕೆ ಕಾರಣರಾದವರು ಸ್ಟಾರ್ ಆಫ್ ಮೈಸೂರ್‌ನ ನ್ಯೂಸ್ ಎಡಿಟರ್ ಎಂ.ಆರ್. ಶಿವಣ್ಣ ಮೈಸೂರು ಮಿತ್ರದ ಸುದ್ದಿ ಸಂಪಾದಕ ಎಂ. ಗೋವಿಂದೇಗೌಡ ಮತ್ತು ಕನ್ನಡ ಪ್ರಭದ ರಿಪೋರ್ಟರ್ ಅಂಶಿಪ್ರಸನ್ನ!

ಹೆಸರಿಗಷ್ಟೇ ಪತ್ರಕರ್ತರಾದರೂ ಊಟದ ಲೆಕ್ಕದಲ್ಲಿ ಮೂವರೂ ಜೆಡಿಎಸ್ ಕಾರ್ಯಕರ್ತರೇ. ನವೆಂಬರ್ 29 ರ ಮಧ್ಯಾಹ್ನ ಒಂದೂ ಮುಕ್ಕಾಲರ ಹೊತ್ತಿಗೆ ಹಡಜನ ಕ್ರಾಸ್ ಬಳಿ ಹನ್ನೆರಡು ಕಾರುಗಳಲ್ಲಿ ಸಾಗುತ್ತಿದ್ದ ಚನ್ನಿಗಪ್ಪನ ಪಟಾಲಂ ಚುನಾವಣಾ ಆಯೋಗದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿದೆ. ತನ್ನನ್ನು ಬಿಟ್ಟುಬಿಡಿ ಎಂದು ಚನ್ನಿಗಪ್ಪ ಕೈಮುಗಿದು ಗೋಗರೆಯುತ್ತಿದ್ದ ದೃಶ್ಯಗಳನ್ನು ಕಿರಣ್‌ಕುಮಾರ್ ಸೆರೆಹಿಡಿದಿದ್ದಾರೆ. ಅಷ್ಟಕ್ಕೇ ಕ್ರುದ್ಧನಾದ ಚೆನ್ನಿಗಪ್ಪ 'ಇದೆಲ್ಲಾ ಈ ನನ್ಮಗಂದೇ ಕೆಲಸ, ಹಿಡ್ಕೊಳ್ರೋ' ಎಂದು ಹೂಂಕರಿಸಿದ್ದಾನೆ. ಚನ್ನಿಗಪ್ಪನ ಭಟ್ಟಂಗಿಗಳು ಕಿರಣ್‌ಕುಮಾರ್ ಮೇಲೆ ಹಲ್ಲೆ ನಡೆಸಿ, ಆತನನ್ನು ಮುಳ್ಳಿನ ಬೇಲಿಗೆ ತಳ್ಳಿದ್ದೇ ಕ್ಯಾಮೆರಾ ಕಿತ್ತೊಯ್ದಿದ್ದಾರೆ.

ಇಷ್ಟಾಗಿದ್ದೇ ತಡ ಆಕಾಶವೇ ಕಳಚಿಬಿದ್ದಂತೆ ಮೈಸೂರು ಮಿತ್ರದ ಸಬ್ ಎಡಿಟರ್‌ಗಳಾದ ಶಿವಣ್ಣ ಮತ್ತು ಗೋವಿಂದೇಗೌಡರು ಪತ್ರಿಕಾಗೋಷ್ಠಿ ಕರೆದು ಬಾಯಿಬಡಕೊಂಡಿದ್ದಾರೆ. ಈ ಬಗ್ಗೆ ಮೈಸೂರಿನ ಪತ್ರಕರ್ತರೆಲ್ಲ ಸೇರಿ ಅಂಶಿ ಪ್ರಸನ್ನನ ನೇತೃತ್ವದಲ್ಲಿ ಎಸ್ಪಿ ಮುರುಗನ್ ಕಚೇರಿ ಮುಂದೆ ಪ್ರತಿಭಟಿಸಿದ್ದಾರೆ. ಪತ್ರಕರ್ತರ ಒತ್ತಾಯಕ್ಕೆ ಮಣಿದು ಪೊಲೀಸರು ಮಂತ್ರಿ ಚನ್ನಿಗಪ್ಪನ ವಿರುದ್ಧವೇ ರಾಬರಿ ಕೇಸ್ ಹಾಕಿ ಎಫ್‌ಐಆರ್ ಕೂಡ ಹರಿದಿದ್ದಾರೆ. ಮರುದಿನದ ಬೆಳಿಗ್ಗೆಯ ಹೊತ್ತಿಗೆ ಇದು ರಾಜ್ಯಮಟ್ಟದ ಬಹುತೇಕ ಪತ್ರಿಕೆಗಳಲ್ಲಿ ಮುಖಪುಟದ ಸುದ್ದಿಯಾಗಿದೆ. ತಮಾಷೆಯೆಂದರೆ ಹಲ್ಲೆ ನಡೆದ ಮಾರನೆ ಬೆಳಿಗ್ಗೆಯೇ ಒದೆ ತಿಂದ ಫೋಟೋಗ್ರಾಫರ್ ಮತ್ತು ಹಲ್ಲೆ ನಡೆಸಿದ ಚನ್ನಿಗಪ್ಪ ಇಬ್ಬರೂ ಭಾಯೀಭಾಯಿಯ ಶೈಲಿಯಲ್ಲಿ ಪತ್ರಿಕಾಗೋಷ್ಠಿ ಕರೆದು ರಾಜಿ ನಾಟಕ ಆಡುತ್ತಿದ್ದರೆ ಪ್ರತಿಭಟಿಸಿದ ಪತ್ರಕರ್ತರೇ ಕಕ್ಕಾಬಿಕ್ಕಿ!



ಅಂಶಿ ಪ್ರಸನ್ನ

ಯಾವ ಪತ್ರಕರ್ತರೆಲ್ಲ ಸೇರಿ ಚನ್ನಿಗಪ್ಪನನ್ನು ಸಮರ್ಥಿಸಲು ಬಂದ ವೈಎಸ್‌ವಿ ದತ್ತನ ಕೊರಳು ಪಟ್ಟಿ ಹಿಡಿದು ಹೊರದಬ್ಬಿದ್ದರೋ ಅವರ ಕಿವಿಗೇ ಹೂವಿಟ್ಟಿದ್ದ 'ಮೈಸೂರು ಮಿತ್ರ'ದ ಶಿವಣ್ಣ!

ಹಕೀಕತ್ತೇನೆಂದರೆ; ಹಲ್ಲೆ ನಡೆದ ಸಂಜೆಯೇ ಮೈಸೂರು ಮಿತ್ರದ ಕಛೇರಿಯಲ್ಲಿ ಡೀಲು ಕುದುರಿತ್ತು. ಸಾಕ್ಷಾತ್ ಚನ್ನಿಗಪ್ಪನೇ 'ಮೈಸೂರು ಮಿತ್ರ'ದ ಕಛೇರಿಗೆ ಬಂದು ಮಾಲೀಕ ಕೆ.ಬಿ. ಗಣಪತಿಯ ಮಗ ವಿಕ್ರಂ ಜೊತೆ ವ್ಯವಹಾರ ಕುದುರಿಸುತ್ತಿದ್ದರೆ ಅದಕ್ಕೆ ಸಬ್ ಎಡಿಟರ್‌ಗಳಾದ ಶಿವಣ್ಣ ಮತ್ತು ಗೋವಿಂದೇಗೌಡರು ಪಕ್ಕ ವಾದ್ಯಗಳಂತೆ ಎತ್ತಿಕೊಟ್ಟಿದ್ದಾರೆ. ಇನ್ನೂ ದುರಂತವೆಂದರೆ ಹಲ್ಲೆಯ ವಿರುದ್ಧ ಮುಂದೆ ನಿಂತು ಪ್ರತಿಭಟಿಸಿದ ಕನ್ನಡ ಪ್ರಭದ ರಿಪೋರ್ಟರ್ ಅಂಶಿ ಪ್ರಸನ್ನನೇ ಚನ್ನಿಗಪ್ಪನನ್ನು ಮೈಸೂರು ಮಿತ್ರದ ಕಛೇರಿಗೆ ಕರೆತಂದಿದ್ದ!

ಅಷ್ಟಕ್ಕೂ ಮೈಸೂರಿನ ಪತ್ರಿಕೆಗಳ ಪೈಕಿ ಆಂದೋಲನದ ರಾಜಶೇಖರಕೋಟಿಯವರ ಹೊರತಾಗಿ ಕೆಲ ಲೋಕಲ್ ಪತ್ರಿಕೆಗಳು ಇಡೀ ಚುನಾವಣೆಯುದ್ದಕ್ಕೂ ಜೆಡಿಎಸ್‌ನ ಮುಖಂಡರುಗಳಂತೆ ಸುದ್ದಿ ಬರೆದವು. ಅದರಲ್ಲೂ ಮೈಸೂರು ಮಿತ್ರದ ಪತ್ರಕರ್ತರಂತೂ ಎಂ.ಆರ್. ಶಿವಣ್ಣ, ಗೋವಿಂದೇಗೌಡರ ಜೊತೆಯಾದರೆ ಸಾಕು 'ಸಂದೇಶ್ ದಿ ಪ್ರಿನ್ಸ್' ಹೋಟೆಲ್‌ನಲ್ಲಿ ಕುಡಿದು ತಟ್ಟಾಡುತ್ತಿದ್ದರು. ಇನ್ನು ಕನ್ನಡ ಪ್ರಭದ ಅಂಶಿ ಪ್ರಸನ್ನ ಸಾಕ್ಷಾತ್ ದೇವೇಗೌಡರ ಮಾನಸ ಪುತ್ರನಂತೆ ಓಡಾಡಿದ. ಕಾರಣವಿಷ್ಟೇ: ಈ ಅಂಶಿ ಪ್ರಸನ್ನನ ಮದುವೆಗೆ ದೇವೇಗೌಡರೇ ಬಿಜಯಂಗೈದು ಅಕ್ಷತಾಳು ಹಾಕಿದ್ದರಂತೆ!

ಮೈಸೂರು ದಿ(ವ)ಗಂತದ ಎಡಿಟರ್ ಮಳಲಿ ನಟರಾಜ್ ಕುಮಾರಣ್ಣನನ್ನು ತನ್ನ ಮನೆಗೇ ಕರೆದೊಯ್ದು ಮಸ್ಕಾ ಹೊಡೆಯುತ್ತಾನೆಂದರೆ ಏನರ್ಥ?

ಇದು ಪತ್ರಿಕೋದ್ಯಮದ ದುರಂತವಲ್ಲದೇ ಮತ್ತೇನು?

ಪತ್ರಿಕೆಗಳ ಜೆಡಿಎಸ್ ಪಕ್ಷಪಾತ ಕೊನೆಕೊನೆಗೆ ಯಾವ ಹಂತ ಮುಟ್ಟಿತೆಂದರೆ, ಸಾಕ್ಷಾತ್ ಸಿದ್ಧರಾಮಯ್ಯನವರೇ 'ಮೈಸೂರು ಮಿತ್ರ'ದ ಎಡಿಟರ್ ಗಣಪತಿಯ ಮನೆಮುಂದೆ ನಿಂತು ಮಸ್ಕಾ ಹೊಡೆಯಬೇಕಾಯಿತು. ವಿಜಯ ಕರ್ನಾಟಕದ ಎಡಿಟರ್ ವಿಭಟ್ಟರಂತೂ ಜೆಡಿಎಸ್ ಪಾಲಿಗೆ ತುತ್ತೂರಿಯಾಗಿಬಿಟ್ಟರು. ಯಾಕೆಂದರೆ ಕುಮಾರಣ್ಣನ ಕಸ್ತೂರಿ ಚಾನಲ್ಲಿಗೆ ವಿಭಟ್ಟರೇ ಮುಖ್ಯಸ್ಥರಂತೆ. ಅದಕ್ಕೇ ಈಗಿನಿಂದಲೇ ಮಸ್ಕಾ ಹೊಡೆಯುತ್ತಿದ್ದಾರಂತೆ!

ಪತ್ರಕರ್ತರ ಬಗ್ಗೆ, ಪತ್ರಿಕೋದ್ಯಮದ ಬಗ್ಗೆ ಇದ್ದ ಚೂರುಪಾರು ವಿಶ್ವಾಸಕ್ಕೂ ಧಕ್ಕೆಯಾದರೆ ಜನಕ್ಕೆ ನಂಬಲು ಏನು ತಾನೇ ಬಾಕಿ ಉಳಿದಂತಾಯ್ತು?

ಹೋಬಳಿಗಳ ಪೈಕಿ ಒಕ್ಕಲಿಗರ ಪ್ರಾಬಲ್ಯವಾದ ಇಲವಾಲಕ್ಕೆ ಸಾರಿಗೆ ಮಂತ್ರಿ ಚೆಲುವರಾಯಸ್ವಾಮಿ. ಕಸಬಾ ಹೋಬಳಿಗೆ ಅರಣ್ಯ ಮಂತ್ರಿ ಚೆನ್ನಿಗಪ್ಪ, ವರುಣಾ ಹೋಬಳಿಗೆ ಲೋಕೋಪಯೋಗಿ ಮಂತ್ರಿ ಮಗ ರೇವಣ್ಣ ಮತ್ತು ಜಯಪುರ ಹೋಬಳಿಗೆ ವಸತಿ ಸಚಿವ ಡಿ.ಟಿ. ಜಯಕುಮಾರ್‌ರಂಥ ನಾಲ್ವರು ಪ್ರಭಾವಿ ಮಂತ್ರಿಗಳ ಹೆಗಲಿಗೆ ಚುನಾವಣಾ ಪ್ರಚಾರದ ಹೊಣೆ ವಹಿಸಿ ಕೊಟ್ಟರು.

ಪ್ರತಿ ಹಳ್ಳಿಯಲ್ಲೂ ಕನಿಷ್ಠ ಹತ್ತು ಮಂದಿ ಜೆಡಿಎಸ್ ಕಾರ್ಯಕರ್ತರು ತಂಗಲೇಬೇಕು. ಇಡೀ ಊರಿನಲ್ಲಿ ಒಬ್ಬೇ ಒಬ್ಬ ಜೆಡಿಎಸ್ ಪರ ಮತದಾರ ಇಲ್ಲದೇ ಹೋದರೂ ಕಾರುಗಳಲ್ಲೇ ಮಲಗಿ ಆ ಊರಿನಲ್ಲಿ ಏನೇನು ನಡೀತದೆ ಎಂಬ ಬಗ್ಗೆ ಕಣ್ಣಿಡಿ ಎಂದು ಫರ್ಮಾನು ಹೊರಡಿಸಲಾಯ್ತು. ಇದೆಲ್ಲದರ ಹೊರತಾಗಿ ಇಡೀ ಜೆಡಿಎಸ್ ಸರ್ಕಾರವೇ ಚಾಮುಂಡೇಶ್ವರಿ ಕ್ಷೇತ್ರದ ಮೇಲೆ ಮುಗಿಬಿದ್ದಿತ್ತು.

ಉದ್ಬೂರು ಎಂಬ ಹಳ್ಳಿಯೊಂದಕ್ಕೆ 20 ಕೋಟಿಯ ಕಾಮಗಾರಿ ಘೋಷಿಸಿದರು ಕುಮಾರಸ್ವಾಮಿ. ಕೂರ್ಗಳ್ಳಿಯನ್ನು ಕಾರ್ಪೋರೇಷನ್ನಿಗೆ ಸೇರಿಸ್ತೀವಿ ಎಂದು 8 ಕೋಟಿಯ ಕಾಮಗಾರಿಯ ಆಶ್ವಾಸನೆ ಕೊಟ್ಟರು. ರಮ್ಮನಹಳ್ಳಿಯೊಂದಕ್ಕೇ ಮತ್ತೆ 20 ಕೋಟಿ ಮಂಜೂರು ಮಾಡುತ್ತೇವೆಂದರು. ಹೂಟಗಳ್ಳಿಗೆ 12 ಕೋಟಿ, ಚಿಕ್ಕಹಾನ್ಸಕ್ಕೆ ಎರಡು ಕೋಟಿ, ದಡದ ಕಲ್ಲಹಳ್ಳಿಗೆ 3 ಕೋಟಿ; ಹೀಗೆ ಸರ್ಕಾರದ ಮಂತ್ರಿಗಳು ಬಾಯಿಗೆ ಬಂದಷ್ಟು ಭರವಸೆ ಕೊಟ್ಟರು.

ಇಡೀ ಕ್ಷೇತ್ರದಲ್ಲಿ ನಾಯಕರ ಗ್ರಾಮಗಳ ಉಸ್ತುವಾರಿ ಹೊತ್ತಿದ್ದ ಎಮ್ಮೆಲ್ಸಿ ಚಿಕ್ಕಮಾದು ಉದ್ಬೂರು ಗ್ರಾಮವೊಂದಕ್ಕೇ ಎಂಟು ನೂರು ಬಿಟ್ಟಿ ಮೊಬೈಲುಗಳನ್ನು ಹಂಚಿದ್ದೂ ಅಲ್ಲದೇ 30 ಲಕ್ಷ ರೂಪಾಯಿಗಳಷ್ಟು ದುಡ್ಡು ಹಂಚಿದ. ಕೇವಲ ರಮ್ಮನಹಳ್ಳಿಗೆ ಆರುನೂರು ಮೊಬೈಲು ಕೊಟ್ಟು 20 ಲಕ್ಷದಷ್ಟು ಕ್ಯಾಷ್ ಹಂಚಲಾಯ್ತು, ಗೌಡರ ಬಂಟ ಚಕ್ರಪಾಣಿಯಂತೂ ಇಲವಾಲ, ವರುಣಾ, ಮರಗಸಹಳ್ಳಿ, ಆಲನಹಳ್ಳಿಯಂಥ ಗ್ರಾಮಗಳಲ್ಲಿ ಲೋಡುಗಟ್ಟಲೇ ಮೊಬೈಲು, ದುಡ್ಡು ಹಂಚಿಕೊಂಡು ಬಂದ.

ಇತ್ತ ಸಂದೇಶ್ ನಾಗರಾಜನ ಪ್ರಿನ್ಸ್ ಹೋಟೆಲನ್ನೇ ಅಡ್ಡ ಮಾಡಿಕೊಂಡ ಮುಖ್ಯಮಂತ್ರಿ ಕುಮಾರಸ್ವಾಮಿ ಇಡೀ ಚಾಮುಂಡೇಶ್ವರಿಯ ಒಂದೊಂದು ಗ್ರಾಮದ ಕಲಾ ಮೂರ್ತಿಗಳು, ಸ್ತ್ರೀ ಶಕ್ತಿ ಗುಂಪುಗಳನ್ನು ಕರೆಕರೆದು ಕೋಟಿಕ ಕಂತೆಗಳನ್ನು ಕೊಟ್ಟರು. ಒಂದೇ ದಿನದಲ್ಲಿ ನಲವತ್ತು ಕೋಟಿ ರೂಪಾಯಿಗಳಷ್ಟು ಬ್ರಿಫ್ ಕೇಸುಗಳು ಸಂದೇಶ್ ಪ್ರಿನ್ಸ್ ಹೋಟೆಲಿನಿಂದ ಬಟವಾಡೆ [illegible] ಕೊನೆಕೊನೆಗೆ ಹರಿದ ದುಡ್ಡನ್ನು ನೋಡಿ ಜೆಡಿಎಸ್ ನಾಯಕರೇ ನಿಂತು ಅವರವರಲ್ಲೇ ಹೊಡೆದಾಡಿಕೊಂಡರು. ಈ ಪೈಕಿ ಹನ್ನೆರಡು ಸೂಟ್ ಕೇಸುಗಳಲ್ಲಿ ಚೆಲುವರಾಯಸ್ವಾಮಿ ಮತ್ತು ಮಾಗಡಿ ಶಾಸಕ ಬಾಲಕೃಷ್ಣ ತಂಗಿದ್ದ ರೇಸಾರ್ಟಿಗೆ ದೊಡ್ಡ ಮೊತ್ತದ ನಿಧಿಯೇ ಬಂದಿತ್ತು. ಅದರಲ್ಲಿ 20 ಲಕ್ಷವಿದ್ದ ಒಂದು ಸೂಟ್‌ಕೇಸ್ ಅನ್ನು ಬಾಲಕೃಷ್ಣನ ಡ್ರೈವರ್ ಕೇಡಿ ಜಯರಾಮ ಕದ್ದುಬಿಟ್ಟ. ಅದಕ್ಕೆ ನಾಗೇಶ ನನಗೂ ಪಾಲುಕೊಡು ಎಂದು ಕಿತ್ತಾಡಿದ. ಇಬ್ಬರ ಜಗಳದಲ್ಲಿ ಮೂರನೇಯವನಿಗೆ ಲಾಭ ಎಂಬಂತೆ ಮಂಡ್ಯದ ಬಿ.ಜೆ. ಪುಟ್ಟಸ್ವಾಮಿ ಉರ್ಫ್ ಬಜೆಪಿ ಎಂಬ ಜೆಡಿಎಸ್ ಕಾರ್ಯಕರ್ತನೊಬ್ಬ ಸೂಟ್‌ಕೇಸ್‌ನಲ್ಲಿದ್ದ ಅರ್ಧಕ್ಕರ್ಧ ದುಡ್ಡು ಹೊಡೆದುಬಿಟ್ಟ.



ಜಪ್ತಿಯಾದ ಜೆಡಿಎಸ್ ಲಿಕ್ಕರ್ ವಾಹನಗಳು

ಹೋಗಲಿ ಉಳಿದ ದುಡ್ಡನ್ನಾದರೂ ಚೆಲುವರಾಯ ಹಂಚಿದನಾ? ಒಂದಷ್ಟು ಸೂಟ್‌ಕೇಸ್‌ಗಳನ್ನು ಪ್ರಭಾವತಿ ಜೈರಾಮ್ ಮಡಿಲಿಗೆ ಹಾಕಿ, ಇನ್ನೂ ಕೆಲವನ್ನು ಬಾಲಕೃಷ್ಣ ಹೊತ್ತೊಯ್ದ. ಚುನಾವಣೆಗಿನ್ನು ಎರಡು ದಿನವಿರುವಂತೆ ಚೆಲುವ-ಬಾಲ ಇಬ್ಬರೂ ತಮ್ಮ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿಬಿಟ್ಟರು!

ಪಾಪಿ ಸ್ವತ್ತು ಪರರ ಪಾಲಾಗದೇ ಇರುತ್ತಾ?

ಕುರುಡು ಕಾಂಚಾಣದ ಮುಂದೆ ಕೊನೆಕೊನೆಗೆ ಕಾಂಗ್ರೆಸ್ ಬೆಂಬಲಕ್ಕೆ ಅಂತ ನಿಂತಿದ್ದು ಕುರುಬರು ಮತ್ತು ದಲಿತರು ಮಾತ್ರ. ಇಂಥಾ ಸ್ಥಿತಿಯಲ್ಲಿ ಮಾಜಿ ಮಂತ್ರಿ ಎಚ್.ಸಿ. ಮಹದೇವಪ್ಪ ದಲಿತರ ಪ್ರತಿಹಳ್ಳಿಗೂ ಹೋಗಿ "ಬೇಡ್ರಪ್ಪಾ ದಯವಿಟ್ಟು ನಿಮ್ಮನ್ನು ಮಾರ್ಕೋಬೇಡಿ" ಎಂದು ಕಣ್ಣೀರುಡುತ್ತಿದ್ದದ್ದು ಎಂಥವರಲ್ಲೂ ಮರುಕ ಹುಟ್ಟಿಸುತ್ತಿತ್ತು, ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಥರದವರನ್ನೇ ಕುಮಾರಸ್ವಾಮಿ ಖರೀದಿಸಿಬಿಟ್ಟರೆಂದರೆ ಏನರ್ಥ?

ಅರ್ಧಕ್ಕರ್ಧ ನಾಯಕರ ಓಟುಗಳನ್ನು ಖರೀದಿಸಿ, ಜಾತಿಯ ವಿರುದ್ಧ ಜಾತಿ ಎತ್ತಿಕಟ್ಟಿ, ಒಂದೇ ದಿನದಲ್ಲಿ ನಲವತ್ತು ಕೋಟಿ ಹಂಚಿ ಇಡೀ ಸರ್ಕಾರವೇ ಅಖಾಡಕ್ಕಿಳಿದಾಗಲೂ ಒಂದು ಲಕ್ಷದ ಹದಿನೈದು ಸಾವಿರದ ಐನೂರ ಹನ್ನೆರಡು ಮಂದಿ ಮತದಾರರು ಮಾತ್ರ ನ್ಯಾಯದ ಪರವಾಗಿಯೇ ನಿಂತಿದ್ದಾರೆಂದರೆ- ಸರಿಸುಮಾರು ನಾಲ್ಕುಸಾವಿರದಷ್ಟು ಮತದಾರರು ಯಾಮಾರಿಸಿ ಶಿವಬಸಪ್ಪನ ಬದಲಿಗೆ ಅನಾಮಿಕ ಸರ್ವೋತ್ತಮನಿಗೆ ಓಟು ಒತ್ತುತ್ತಾರೆಂದರೆ-

ಒಬ್ಬ ಮುಖ್ಯಮಂತ್ರಿ ಲಜ್ಜೆಗೆಟ್ಟು ಮತದಾರರಿಗೆ ಹಂಚಲು ತಂದಿದ್ದ ಲೋಡುಗಟ್ಟಲೇ ಸರಂಜಾಮನ್ನು ಚುನಾವಣಾಧಿಕಾರಿಗಳು ಮುಖ್ಯಮಂತ್ರಿಯ ಎದುರೇ ಜಪ್ತಿ ಮಾಡುತ್ತಾರೆಂದರೆ- ಯಕಶ್ಚಿತ್ ಕಿಡಿಗೇಡಿಯನ್ನು ಹೊರದಬ್ಬಿದಂತೆ ಮುಖ್ಯಮಂತ್ರಿಯನ್ನು ಹೊರದಬ್ಬಲಾಗುತ್ತದೆಯೆಂದರೆ-

ದೇವೇಗೌಡರ ಲೆಕ್ಕಕ್ಕೆ ಚಾಮುಂಡಿಯೋ, ರಣಚಂಡಿಯೋ ಅಥವಾ ಮಣ್ಣಂಗಟ್ಟಿಯೋ? ಆದರೆ ಆವತ್ತು ಚಾಮುಂಡಿಯಿಂದ ಮಹಿಷಾಸುರ ಮರ್ದನವಾದರೆ ಇವತ್ತು ಚಾಮುಂಡಿ ಮತದಾರನಿಂದ ಗೌಡಾಸುರ ಸಂಹಾರ ನಡೆದಿದೆ!

ಪ್ರಜಾಪ್ರಭುತ್ವದಲ್ಲಿ ಮತದಾರನೇ ಅಗ್ರದೇವತೆ.

ಕಾಂಗ್ರೆಸ್ ಪರೋಡಿ ರೇಣುಕನ ದೋಖಾ

ಬಿಟ್ಟಿ ದುಡ್ಡೆಂದರೆ ಯಾರಿಗೆ ಬೇಡ? ಕೇವಲ ಮತದಾರರಷ್ಟೇ ಅಲ್ಲ; ಕೊನೆಕೊನೆಗೆ ಕಾಂಗ್ರೆಸ್ಸಿನಲ್ಲಿದ್ದ ಒಕ್ಕಲಿಗ ಮತ್ತು ಲಿಂಗಾಯತ ಪುಡಿ ಲೀಡರ್‌ಗಳು ಜೆಡಿಎಸ್ ಗಾಳಕ್ಕೆ ಬಿದ್ದರು. ಚಾಮುಂಡಿ ಬೆಟ್ಟದ ತಪ್ಪಲಿನ ಆಲೀವ್ ಗಾರ್ಡನ್ ರೆಸಾರ್ಟಿನಲ್ಲಿ ಠಿಕಾಣಿ ಹೂಡಿದ್ದ ಮಂತ್ರಿ ರೇವಣ್ಣ ಈ ಕೆಲಸಕ್ಕೆಂದೇ ಛೂಬಿಟ್ಟಿದ್ದು ಸಕಲಕಲಾ ವಲ್ಲಭ ಚಕ್ರಪಾಣಿಯನ್ನು.

ದುಡ್ಡಿನ ಕಂತೆ ಹಿಡಿದೇ ಕಾಂಗ್ರೆಸ್ ಕೋಟೆಗೆ ಲಗ್ಗೆಯಿಟ್ಟ ಚಕ್ರಪಾಣಿಯ ಬುಟ್ಟಿಗೆ ಸಲೀಸಾಗಿ ಬಿದ್ದವನು ರಾಜ್ಯ ಯೂತ್ ಕಾಂಗ್ರೆಸ್ ಪುಢಾರಿ ರೇಣುಕಾ ಪ್ರಸಾದ್. ಕೆಲದಿನಗಳ ಮಟ್ಟಿಗೆ ಈತ ಯೂತ್ ಕಾಂಗ್ರೆಸ್ ಕಾರ್ಯಾಧ್ಯಕ್ಷನಾಗಿದ್ದು ಚಿಲ್ಲರೆ ವಸೂಲಿ ಮಾಡಿದ್ದು ಬಿಟ್ಟರೆ ಯಾವತ್ತೂ ಜೆಡಿಎಸ್ ದುರಾಡಳಿತದ ವಿರುದ್ಧ ಪ್ರತಿಭಟಿಸಿದವನಲ್ಲ. ಹುಟ್ಟಾ ವಂಚಕ. ಸರ್ಕಾರಿ ಕೆಲಸ ಕೊಡಿಸ್ತೀನಿ ಎಂದೇ ಅನೇಕರಿಗೆ ಟೋಪಿ ಹಾಕಿದ್ದಾನೆ. ಈ ಹಿಂದೆ ವೀರಶೈವ ಮಹಾಸಭಾದಲ್ಲಿದ್ದು ಅದರ ಹೆಸರಲ್ಲೂ ರೋಲ್‌ಕಾಲ್ ಮಾಡಿದ್ದ, ಲಿಂಗಾಯತ ನಾಯಕರೆಲ್ಲ ಸೇರಿ ಈತನನ್ನು ಕತ್ತು ಹಿಡಿದು ದಬ್ಬಿದ್ದು, ಅನಂತರ ಯೂತ್ ಕಾಂಗ್ರೆಸ್ ಹೆಸರಲ್ಲಿ ದುಡ್ಡು ಕಿತ್ತಿದ್ದು ಗೊತ್ತಾಗಿ ದಿನೇಶ್ ಗೂಂಡೂರಾವ್ ಈತನನ್ನು ಹೊರಗಟ್ಟಿದ್ದು, ಈತನ ನಟೋರಿಟಿಯ ಸ್ಯಾಂಪಲ್ಲುಗಳಷ್ಟೇ.



ಇಂಥಾ ಪುಣ್ಯಾತ್ಮನಿಗೆ ಚಾಮುಂಡೇಶ್ವರಿ ಎಲೆಕ್ಷನ್ ಬಂದಿದ್ದೇ ಮತ್ತೊಂದು ಇನ್ನಿಂಗ್ಸ್ ವಸೂಲಿಗೆ ದಾರಿಯಾಯಿತು. ಸಿದ್ಧರಾಮಯ್ಯಂಗೆ ನಾನೇ ನಿಂತು ಲಿಂಗಾಯತರ ಓಟು ಹಾಕಿಸ್ತೀನಿ ಎಂದು ಬೆಂಗಳೂರಿನಲ್ಲಿ ಒಂದು ರೌಂಡ್ ವಸೂಲಿ ಮಾಡಿ ಆನಂತರ ನೇರವಾಗಿ ಮೈಸೂರಿನಲ್ಲಿ ಪ್ರತ್ಯಕ್ಷನಾದ. ಎಷ್ಟೆಂದರೂ ಯೂತ್ ಕಾಂಗ್ರೆಸ್ ನಾಯಕನಲ್ಲವೆ? ಬನ್ನಿಪೇಟೆ ಸೋಮಣ್ಣ, ವಿಶ್ವನಾಥ್, ರೇವಣ್ಣ, ಬಿ.ಎಲ್. ಶಂಕರ್ ಎಲ್ಲರೂ ಈತನನ್ನು ನಂಬಿ ಹತ್ತಿರಕ್ಕೆ ಬಿಟ್ಟುಕೊಂಡರೆ, ಘಟವ ರೇಣುಕ ಕಾಂಗ್ರೆಸ್ ಕಾರ್ಯತಂತ್ರಗಳನ್ನೆಲ್ಲ ಜೆಡಿಎಸ್ ನಾಯಕ ಚಕ್ರಪಾಣಿಗೆ ಮುಟ್ಟಿಸುತ್ತಿದ್ದ!



[illegible]

ಆಲೀವ್ ಗಾರ್ಡನ್ ರೆಸಾರ್ಟಿಗೆ ಹೋಗಿ ಮಂತ್ರಿ ರೇವಣ್ಣನವರ ಕಾಲಿಗೆ ಬಿದ್ದು ದೊಡ್ಡ ಮೊತ್ತದ ಗಂಟು ಹೊತ್ತೇ ಹೊರಬಿದ್ದಿದ್ದ ರೇಣುಕಾ ಕಾಂಗ್ರೆಸ್ಸಿನ ಒಬ್ಬೊಬ್ಬರೇ ಪುಡಿ ಲೀಡರ್‌ಗಳಿಗೆ ಬಲೆ ಬೀಸತೊಡಗಿದ. ಆ ಕಾಲದಿಂದಲೂ ತನಗೆ ಆತ್ಮೀಯನಾಗಿದ್ದ [illegible] ಗ್ರಾಮಾಂತರ ಯೂತ್ ಕಾಂಗ್ರೆಸ್ ಅಧ್ಯಕ್ಷ [illegible] ಚಕ್ರಪಾಣಿಯ ಕಾಲಿಗೆ ಕೆಡವಿದ. [illegible]


[illegible]

ಗೌಡ ಫ್ಯಾಮಿಲಿಯ ವೈಟ್‌ಫೀಲ್ಡ್ ಆಸ್ತಿ ಹಗರಣ

ಪೆರಿವಾಲ್‌ಗೆ ಪೊಲೀಸ್ ಟ್ರೀಟ್‌ಮೆಂಟ್

ದೊಡ್ಡವರು ಏನಾದರು ಹಾಕಿಕೊಂಡರೆ ಏನೇನಾ [illegible] ಗೊತ್ತು! [illegible] ಕೇಸ್ ಬುಕ್, ವಾಕ್... [illegible] ಅವರನ್ನು [illegible] ರೈಡ್ [illegible] ಆದಿರು' ಜಪ್ತಿ... ಟ್ರಾನ್ಸ್‌ಪೋರ್ಟ್ [illegible] ನಡೆಸ್ತಾ ಇದೆ. ಆರ್‌ಟಿಓಗಳಿಂದ ಬಸ್ಸುಗಳ ಮುಟ್ಟುಗೋಲು... ರಿಯಲ್ ಎಸ್ಟೇಟ್ ಜಮೀನು, ಪಾರ್ಟ್ನರ್ ಮಾರಲು ನಿರಾಕರಿಸಿದ್ರೆ ಬಿಡಿಎ, ಕೆಐಎಡಿಬಿಗಳಿಂದ ನೆಲಸಮಗೊಳಿಸುವ ಕಾರ್ಯಾಚರಣೆ......

ಇವೆಲ್ಲದಕ್ಕಿಂತಲೂ ಭಿನ್ನವಾಗಿ ಈಗಾಗಲೇ ಅಧಿಕಾರಸ್ಥರು ಖರೀದಿಸಿರೋ ಆಸ್ತಿಯ ವಹಿವಾಟಿಗೇನಾದರೂ ಕೋರ್ಟು, ಟ್ರಿಬ್ಯುನಲ್‌ಗಳ ಮೆಟ್ಟಿಲು ಹತ್ತಿ ಅಡ್ಡಗಾಲು ಹಾಕುವ ದುಸ್ಸಾಹಸ ಮಾಡಿದರೋ ಅಲ್ಲಿಗೆ ಮುಗಿದೇ ಹೋಯ್ತು.... ನಿಮ್ಮ ವಿರುದ್ಧ ಇಲ್ಲಸಲ್ಲದ ಕ್ರಿಮಿನಲ್ ಆರೋಪಪಟ್ಟಿ ಸಮೇತ ದಾಳಿಯಿಡುತ್ತಾರೆ ನಿಮ್ಮ ಗತಕಾಲದ ಶತ್ರುಗಳು... ಅವರೊಂದಿಗೆ ಶಾಮೀಲಾಗುವ ಪೊಲೀಸು, ಪ್ರಾಸಿಕ್ಯೂಶನ್ ವ್ಯವಸ್ಥೆಗಳು ನಿಮ್ಮನ್ನು ನೇರವಾಗಿ ಲಾಕಪ್ಪಿನ ದಿಗ್ಬಂಧನಕ್ಕೆ ರವಾನಿಸಿಬಿಡುತ್ತವೆ.



ಅನಿತಾ ಕುಮಾರಸ್ವಾಮಿ

ಇದು ಇವತ್ತಿನ ಸುವರ್ಣ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಮುಕ್ತ ಪ್ರಜಾತಂತ್ರ ವ್ಯವಸ್ಥೆ..... ಮೇಲ್ಪಾಣಿಸಿದ ಅಪಾಯಗಳನ್ನು ಮೈಮೇಲೆ ಎಳೆದುಕೊಂಡು ಕಿರುಕುಳ ಅನುಭವಿಸಬೇಕಾಗಿ ಬಂದ ಲೇಟೆಸ್ಟ್ ದೃಷ್ಟಾಂತ (ದುರದೃಷ್ಟಾಂತ?) ಪಿಯೂಶ್ ಪೆರಿವಾಲ್ ಎಂಬ ಕೈಗಾರಿಕೋದ್ಯಮಿಯದ್ದು.

ಈ ಪಿಯೂಶ್ ಎಂಬ ನತದೃಷ್ಟ ಮಾಡಿದ ಪ್ರಮಾದವೇನು ಗೊತ್ತೆ? ಕಳೆದ ಫೆಬ್ರವರಿ ತಿಂಗಳಲ್ಲಿ ಮಾಜಿ ಪ್ರಧಾನಿ ದೇವೇಗೌಡ್ರ ವಂಶದ ಹೆಣ್ಣುಮಕ್ಕಳು ಮತ್ತು ಸೊಸೆಯಂದಿರು ಸೇರಿ ವೈಟ್‌ಫೀಲ್ಡ್‌ನ ಹೈಟೆಕ್ ಪ್ರದೇಶದಲ್ಲಿ ಖರೀದಿಸಿದ 36 ಕೋಟಿ ರೂ. ಆಸ್ತಿ ಖರೀದಿ ವಹಿವಾಟನ್ನು ಪ್ರಶ್ನಿಸಿ ಚೆನ್ನೈನ ಕೇಂದ್ರೀಯ ಕಾನೂನು ಮಂಡಲಿಯಲ್ಲಿ ಕೇಸು ದಾಖಲಿಸಿರುವುದು.....

ಪಾಪ, ಈತ ಕೇಸು ಹಾಕಿದ್ದೂ ನ್ಯಾಯಯುತವಾಗೇ ಇತ್ತು. ಯಾಕೆಂದರೆ ಗೌಡ್ರ ಪರಿವಾರ ಖರೀದಿಸಿದ ಬಹುಕೋಟಿ ಮೌಲ್ಯದ ಆಸ್ತಿಯ ಅಸಲಿ ವಾರಸುದಾರರೇ ಈ ಪಿಯೂಶನ ಪೆರಿವಾಲ್ ಕುಟುಂಬ ಎಂಬುದೀಗ ಜಗಜ್ಜಾಹೀರಾದ ಸಂಗತಿಯೇ....


ತನ್ನ ಪೆರಿವಾಲ್ ಗ್ರೂಪ್ ಆಫ್ ಇಂಡಸ್ಟ್ರೀಸ್‌ಗೆ ಸೇರಿದ ಆಸ್ತಿಯನ್ನು ಪ್ರೀತಮ್ ಸೇನ್ ಎಂಬ ಘಟಿಂಗನೊಬ್ಬ ವಂಚನೆಯ ಮೂಲಕ ಲಪಟಾಯಿಸಿ ಅದನ್ನು ಕರ್ನಾಟಕದ ಹಾಲಿ ರಾಜವಂಶಕ್ಕೆ ಮಾರಿದ್ದನ್ನು ಕಂಡು ಆಘಾತವನ್ನನುಭವಿಸಿದ್ದ ಪಿಯೂಶ್ ಸಹಜವಾಗಿಯೇ ನ್ಯಾಯಾಲಯದಲ್ಲಿ ಹೋರಾಡತೊಡಗಿದ್ದ.

ಡಿಸೆಂಬರ್ 5ರಂದು ಮಂಗಳವಾರ ಚೆನ್ನೈನ ಕೇಂದ್ರೀಯ ಕಾನೂನುಮಂಡಲಿಯ ಮುಂದೆ ಈ ಕೇಸಿನ ವಿಚಾರಣೆ ಮುಂದುವರಿಯಬೇಕಿತ್ತು. ಆದರೆ ಎರಡು ದಿನ ಮುಂಚೆಯೇ ಅಂದರೆ ಡಿ. 3ರ ಭಾನುವಾರ ಬೆಳಿಗ್ಗೆಯೆ ಬೆಂಗಳೂರಿನಲ್ಲಿ ತಂಗಿದ್ದ ಪಿಯೂಶ್‌ಗೆ ಅಶೋಕನಗರ ಪೊಲೀಸ್ ಠಾಣೆಯಿಂದ ಬುಲಾವ್ ಬಂತು....

"ಸುಮ್ಮನೆ ಮಾತಾಡಿಕೊಂಡು ಬರಲಿಕ್ಕೆ ಕರೆದಿದ್ದಾರೆ ಸಾಹೇಬ್ರು" ಎಂದು ಅಮಾಯಕನಂತೆ ಆಮಂತ್ರಣ ನೀಡಿಹೋದ ಠಾಣೆಯ ಕಾನ್ಸ್‌ಟೇಬಲ್... ಅದರ ಉದ್ದೇಶವೇನೆಂದು ಕೊಂಚವೂ ಆತಂಕ ಪಡದ ಪಿಯೂಶ್ ಬೆಳಗ್ಗೆ 11.30 ರಷ್ಟೊತ್ತಿಗೆ ಠಾಣೆಯಲ್ಲಿ ಪ್ರತ್ಯಕ್ಷರಾದರು....

ಸುಮಾರು 2-3 ಗಂಟೆಗಳ ತಾಸು ವೃಥಾ ಕಾಯಿಸಿಯಾದ ಮೇಲೆ ಅಶೋಕನಗರ ಠಾಣೆಯ ಇನ್ಸ್‌ಪೆಕ್ಟರ್ ಸಾಹೇಬ್ರು ಪಿಯೂಶ್‌ಗೆ ಅವರನ್ನು ಕಳಿಸಿದ ಉದ್ದೇಶವನ್ನು ಬಹಿರಂಗಪಡಿಸಿದರು. "ನಿಮ್ಮ ಫ್ಯಾಮಿಲಿಗೆ ಸೇರಿದ ನ್ಯಾಷನಲ್ ಪ್ಲೈವುಡ್ ಕಂಪನಿಗೆ ಯಾರೋ ವೆಂಕಟ್ ಬಜಾಜ್ (ಏಂಟೂ ಬಜಾಜ್!) ಎಂಬುವವರು 40 ಲಕ್ಷ ರೂ. ಸಾಲ ಕೊಟ್ಟಿದ್ರಂತೆ. ನೀವು ಅದನ್ನ ತೀರಿಸದೆ ಡಿಫಾಲ್ಟ್ ಮಾಡಿದ್ರಿ... ಅದನ್ನು ವಾಪಸು ಕೊಡಿ ಅಂತ ಕೇಳಿದ್ದಕ್ಕೆ ನೀವು ಆವತ್ತು (ದಿನಾಂಕ ಸ್ಪಷ್ಟವಾಗಿಲ್ಲ) ಬೆಳಗಿನ ಜಾವ 6 ಗಂಟೆಗೇ ಗೂಂಡಾಗಳ ಸಮೇತ ಧಾವಿಸಿಬಂದು ವೆಂಕಟ್ ಬಜಾಜ್‌ರವರ ಆಫೀಸಿನ ಮೇಲೆ ದಾಳಿ ನಡೆಸಿದ್ರಿ... ಅವರ ಮೇಲೆ ಹಲ್ಲೆ ಯತ್ನ ನಡೆಸಿದ್ರಿ... ಅಂತ ನಿಮ್ಮ ಮೇಲೆ ಕ್ರಿಮಿನಲ್ ಕಂಪ್ಲೇಟು ರಿಜಿಸ್ಟರಾಗಿದೆ... ಏನಂತೀರಾ....." ಎಂದು ಪ್ರಶ್ನಿಸಿದ.

ಇನ್ಸ್‌ಪೆಕ್ಟರ್‌ರ ನಿರೂಪಣೆ ಕೇಳಿ ದಿಗ್ಭ್ರಾಂತಗೊಂಡ ಪಿಯೂಶ್ ಪೆರಿವಾಲ್ ನಿಧಾನವಾಗಿ ಸಾವರಿಸಿಕೊಂಡು ತಮ್ಮ ಪ್ರತಿಕ್ರಿಯೆ ನೀಡಿದರು.



Piyush Periwal

Industry House
45 Race Course Road
Bangalore-560001
Ph: +91 (80) 22299627
Fax: +91 (80) 22251520
Email: [illegible]
13-Sep-06


The Circle Inspector
Seshadripuram P.S.
Seshadripuram
Bangalore.

Respected Sir,

Sub: Complaint against Mr. Pritam Sen, having his office situated at 'Chandrika Complex', 57/1 Mission Road, 1st floor, Bangalore -560027, and residing at 'Prabhu Kripa' 17 RMV Layout, 1st Block 2nd Stage Bangalore, for cheating, fraud and threat. His mobile No: is 98455 44100.

ಪ್ರೀತಮ್ ಸೇನ್ ವಿರುದ್ಧ ಪೆರಿವಾಲ್ ಸಲ್ಲಿಸಿದ್ದ ದೂರು

"ಸರ್, ನೀವು ಉಲ್ಲೇಖಿಸಿದ ದಿನಾಂಕದಂದು ಬೆ 6 ಗಂಟೆಗಾಗಲೇ ನಾನು ಕೊಲ್ಕತ್ತಾಗೆ ಹೊರಟ ವಿಮಾನದಲ್ಲಿ ಪ್ರಯಾಣಿಸ್ತಾ ಇದ್ದೆ... ಬೇಕಾದ್ರೆ ಅದಾ ನನ್ನ ಏರ್‌ಟಿಕೆಟ್ಟು ಮತ್ತು ಬೋರ್ಡಿಂಗ್ ಪಾಸ್ ಈ ತಮ್ಮೆದುರು ಸಾದರಪಡಿಸಬಲ್ಲೆ... ಜತೆಗೆ ಈ ಬಜಾ ಎಂಬುವವರು 40 ಲಕ್ಷ ರೂ. ಶೇರು ಹಣ ನಮ್ಮ ನ್ಯಾಷನಲ್ ಪ್ಲೈವುಡ್ ಕಂಪನಿಯ ಹೆಸ ತೊಡಗಿಸಿದ್ದರೇ ವಿನಹ ಯಾರಿಗೂ ವ್ಯಕ್ತಿಗತವಾಗಿ ನೀಡಿರಲಿಲ್ಲ... ಆ ಕಂಪನಿ ನಷ್ಟವನ್ನನುಭವಿಸಿ ಮುಚ್ಚಬೇಕಾಗಿ ಬಂದ ಇದೀಗ BIFR ಮುಂದೆ ಸೆಟ್ಲ್‌ಮೆಂಟ್ ವಿಚಾರಣೆ ನಡೀತಾ ಇದೆ... ಹಾಗಾಗಿ ಇ ಯಾರೊ ಯಾರಿಗೂ ವಂಚನೆ ಮಾಡುವ ಪ್ರಶ್ನೆಯೆ ಏಳದು..." ಎಂದು ನಿರ್ದಿಷ್ಟ ದಾಖಲೆಗಳನ್ನುಲ್ಲೇಖಿ ತಮ್ಮ ಸಮಜಾಯಿಷಿ ನೀಡಿದರು.....



ಆಗ ಅವರ ವಿವರಣೆಯಿಂದ ಮನವರಿಕೆಯ ಮೇಲೆ ಇನ್ಸ್‌ಪೆಕ್ಟರು ತಮ್ಮ ಮೇಲಧಿಕಾರಿ ಎಸಿಪಿ ಸಾಹೇ ಅರುಹಿದರು. ಆದರೆ ಎಸಿಪಿ ಸಾಹೇಬ್ರು ಬಡಪೆಟ್ಟಿ ಜಗ್ಗುವವರಲ್ಲ... "ಆತನಿಗೆ ಒಂದು 40 ಲಕ್ಷ ರು ಪೋಸ್ಟ್‌ಡೇಟೆಡ್ ಚೆಕ್ ಕೊಟ್ರೆ ಮಾತ್ರ ಬಿಡ್ತೀವಿ ಇ ವಾರನ್ ಮಾಡ್ರಿ" ಎಂದು ಹುಕುಮು ಕೊಟ್ಟರ

ಅಲ್ಲಿಂದಾಚೆ ಪಿಯೂಶ್ ಪರ ಅವರ ಯ ಬಂಧು-ಮಿತ್ರ-ಹಿತೈಷಿಗಳು ಬಂದು ಸಮಜ ಕೊಂಡರೂ ಪೊಲೀಸ್ ಅಧಿಕಾರಿಗಳು ತಮ್ಮ ಪ ಸಡಿಲಿಸಲಿಲ್ಲ... ಸಂಜೆ 7.30 ರಷ್ಟೊತ್ತಿಗೆ ತಮ "ಮೇಲಿನಿಂದ" ಆದೇಶ ಬಂತೆಂದು ಹೇಳಿ ಪಿಯೂ ನನ್ನು ಅರೆಸ್ಟ್ ಎಂದು ಘೋಷಿಸಿದರು.... ನಿರಾಯು ನಾದ ಒಬ್ಬ ಸುಶಿಕ್ಷಿತ ಉದ್ಯಮಿ ಪಿಯೂಶ್‌ನ ಬೇಡಿಯನ್ನು ತೊಡಿಸಿ ಅಲ್ಲಿದ್ದ ಕುರ್ಚಿಗೆ ಹಾಕಿದರು.... ಆತನೊಬ್ಬ ಡಕಾಯಿತನೋ ಅಥ ಟೆರರಿಸ್ಟೋ ಎಂಬಂತೆ ಬಿಂಬಿಸಲೆತ್ನಿಸಿದರು....

ಪಿಯೂಶ್ ಪೆರಿವಾಲರ ಬಂಧನದ ಸು ಪಡೆದ ಪ್ರಜಾವಾಣಿ ಮತ್ತಿತರ ಪತ್ರಿಕೆಗಳ ಕ್ರೈ ವರದಿಗಾರರು ಅಶೋಕನಗರ ಠಾಣೆಯತ್ತ ಧಾವಿಸು ದಿಢೀರನೆ ಆತನ ಕೈಗೆ ತೊಡಿಸಲಾದ ಹ್ಯಾಂಡ್- ತೆಗೆದು ಹಾಕಿ "ನೋಡಿ ಸಾರ್, ನಾವು ಅವರನ್ ಜಂಟಲ್‌ಮನ್ ತರ ನೋಡಿಕೊಂಡಿದ್ದೇವೆ" ಎ ಪೋಜು ಕೊಟ್ಟರು ಪೊಲೀಸ್ ಅಧಿಕಾರಿಗಳು

ಮಾರನೆಯ ದಿನ ಅಂದರೆ ಸೋಮವಾರ 4 ರ ಮಧ್ಯಾಹ್ನ ತಡವಾಗಿ ನ್ಯಾಯಾಲಯ ಹಾಜರುಪಡಿಸಿದ ಪಿಯೂಶ್‌ಗೆ ನ್ಯಾಯಾಂಗ ಕಸ್ಟಡಿ "ಸೌಭಾಗ್ಯ" ಲಭ್ಯವಾಯಿತು... ಸೆಕ್ಷನ್ 506 (ದೊ ಯತ್ನ) ಹಾಗು ಸೆ. 402 (ವಂಚನೆ)ಗಳ ಆಧಾ ಮೇಲೆ ಎಫ್‌ಐಆರ್ ದಾಖಲಿಸಿ 4 ರಾತ್ರಿಗಳ ಬಂಧನದಲ್ಲಿಡಲಾದ ಪಿಯೂಶ್ ಪೆರಿವಾಲ್‌ಗೆ ಕ ನಿಟ್ಟಾದ ಷರತ್ತು ಸಮೇತ ಜಾಮೀನು ಬಿಡು ದೊರೆತಾಗ ಗುರುವಾರ (ಡಿ. 8) ರಾತ್ರಿಯಾಗಿತ್ತು

ಈ ಮಧ್ಯೆ ಡಿ. 5ರಂದು ಚೆನ್ನೈ ನ್ಯಾಯಮಂಡ ಮುಂದೆ ಜರುಗಿದ ವಿಚಾರಣೆ (ವೈಟ್‌ಫೀಲ್ಡ್ ಖರೀದಿ ವಿಚಾರ) ಡಿ. 14ಕ್ಕೆ ಮುಂದೂಡಲ್ಪಟ್ಟಿ

– ರವೀಂದ್ರ ರೇ

ನಾಗರಾಜಶೆಟ್ಟಿಯನ್ನು ವಜಾಗೊಳಿಸಬೇಕು

ಒಂದು ಪತ್ರ

ಮಂಗಳೂರಿನ ಸಮೀಪ ಕುಳಾಯಿಯಲ್ಲಿ ಇತ್ತೀಚೆಗೆ ನಡೆದ ಸುಖಾನಂದಶೆಟ್ಟಿ ಕೊಲೆ ಮತ್ತು ನಂತರ ಮೂಲ್ಕಿಯಲ್ಲಿ ಸಂಭವಿಸಿದ ಹಿಂಸಾಚಾರದ ಬಗ್ಗೆ ಪತ್ರಿಕೆಯ ಡಿಸೆಂಬರ್ 13ರ ಸಂಚಿಕೆಯಲ್ಲಿ ಪ್ರಕಟವಾದ ವರದಿ ವಸ್ತುನಿಷ್ಠವಾಗಿದೆ. ಹಿಂಜಾವೇ ಮುಖಂಡ ಮತ್ತು ಅನೇಕಾನೇಕ ಕಪ್ಪು ವ್ಯವಹಾರಗಳ ಆರೋಪಿ ಸುಖಾನಂದ ಶೆಟ್ಟಿಯನ್ನು ಕೊಂದವರು ಯಾರು ಎಂದು ಪೊಲೀಸ್ ತನಿಖೆಯಿಂದ ಮಾತ್ರ ಪತ್ತೆಯಾಗಲು ಸಾಧ್ಯ. ಆದರೆ ಕರಾವಳಿಯ ಬಹುತೇಕ ಪತ್ರಿಕೆಗಳು ಅದು ಮುಸ್ಲಿಮರದ್ದೇ ಕೃತ್ಯ ಎಂಬಂತೆ ವರದಿ ಮಾಡಿವೆ. ಅದೂ ಕೂಡ ಯಾರೋ ಒಬ್ಬಿಬ್ಬರು ಮುಸ್ಲಿಂ ಕಿಡಿಗೇಡಿಗಳಲ್ಲ, ಮುಸ್ಲಿಮರ ಇಡೀ ಸಮುದಾಯವೇ ಯಥಾಪ್ರಕಾರ ಈ ಆರೋಪವನ್ನು ಹೊರಬೇಕಾಗಿಬಂದಿದೆ. ಹಾಗಾಗಿ ಸುಖಾನಂದಶೆಟ್ಟಿಯ ಶವಯಾತ್ರೆಯ ಮೆರವಣಿಗೆಯಲ್ಲಿದ್ದವರು, ಮೂಲ್ಕಿ ಬಸ್ ಸ್ಟ್ಯಾಂಡಿನಲ್ಲಿದ್ದ ಒಂದು ಹೂವಿನ ಅಂಗಡಿಯೂ ಸೇರಿದಂತೆ ಹಲವು ಮುಸ್ಲಿಮರ ಅಂಗಡಿಗಳನ್ನು ಧ್ವಂಸ ಮಾಡಿದ್ದು, ಓರ್ವ ಮುಸ್ಲಿಂ ಬಡಪಾಯಿ ತನ್ನ ಧಾಬಾ ತನ್ನ ಕಣ್ಣೆದುರೇ ಪುಡಿಪುಡಿಯಾಗುತ್ತಿರುವುದನ್ನು ನೋಡಿ ಹೃದಯಾಘಾತವಾಗಿ ತೀರಿಕೊಂಡದ್ದು ಇಲ್ಲಿ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯೇ ಆಗಲಿಲ್ಲ.

ದ.ಕ. ಜಿಲ್ಲೆ ಉಸ್ತುವಾರಿ ಸಚಿವ ನಾಗರಾಜಶೆಟ್ಟಿಯೇ ಈ ಮೆರವಣಿಗೆ ಮತ್ತು ಇದರಿಂದ ಆದ ಅನಾಹುತಕ್ಕೆಲ್ಲ ಕಾರಣಪುರುಷ. ಪೊಲೀಸ್ ಅಧಿಕಾರಿಗಳು ಈ ಮೆರವಣಿಗೆಗೆ ಅನುಮತಿ ನಿರಾಕರಿಸಿದ್ದರು. ಒಂದು ವರ್ಷದ ಕೆಳಗೆ ಪೊಳಲಿ ಅನಂತು ಕೊಲೆಯ ನಂತರ ನಡೆದ ಮೆರವಣಿಗೆ ಮತ್ತು ಉಡುಪಿಯಲ್ಲಿ ಆದಿ ಉಡುಪಿ ಬೆತ್ತಲೆ ಪ್ರಕರಣವನ್ನು ಸಮರ್ಥಿಸಿ ನಡೆದ ಮೆರವಣಿಗೆ-ಎರಡು ಸಂದರ್ಭಗಳಲ್ಲಿಯೂ ನಡೆದ ಹಿಂಸಾಚಾರದ ಹಿನ್ನೆಲೆಯಲ್ಲಿ ಈ ಮೆರವಣಿಗೆಗೆ ಅನುಮತಿ ನಿರಾಕರಿಸಿದ ಪೊಲೀಸರ ನಿಲುವು ಸಮರ್ಥನೀಯವಾಗಿತ್ತು, ಆದರೆ ಹಠ ಹಿಡಿದು ಮೆರವಣಿಗೆ ನಡೆಸಿದ್ದು, ಮಾರ್ಗಮಧ್ಯದಲ್ಲಿ ಪೊಲೀಸರಿಗೆ ಕೊಟ್ಟ ಆಶ್ವಾಸನೆ ಮುರಿದದ್ದು ತೆರೆದ ವಾಹನದಲ್ಲಿ ಶವವನ್ನು ಒಯ್ದದ್ದು, ಮೂಲ್ಕಿಯಲ್ಲಿ ಮುಸ್ಲಿಮರು [illegible] ಸಂಖ್ಯೆಯಲ್ಲಿರುವ ಕಾರ್ನಾಡು ಮುಖಾಂತರವೇ ಮೆರವಣಿಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಪೊಲೀಸರ ಜೊತೆ ಜಗಳಕ್ಕೆ ನಿಂತದ್ದು- ಇವೆಲ್ಲದಕ್ಕೂ ನಾಗರಾಜಶೆಟ್ಟಿಯೇ ಉತ್ತರದಾಯಿಯಾಗಬೇಕಾಗಿದೆ. ಮೂಲ್ಕಿಯ ಪೊಲೀಸ್ ಫೈರಿಂಗ್‌ನಲ್ಲಿ ಇಬ್ಬರು ತರುಣರು ಬಲಿಯಾದದ್ದಕ್ಕೂ ಪೊಲೀಸರಿಗಿಂತ ಹೆಚ್ಚಾಗಿ ನಾಗರಾಜಶೆಟ್ಟಿ ಕಾರಣರಾಗಿದ್ದಾರೆ. ಆದರೆ ಕರಾವಳಿಯ ಪ್ರತಿಷ್ಠಿತ ಪತ್ರಿಕೆಗಳು ಈ ದುರಂತದಲ್ಲಿ ನಾಗರಾಜಶೆಟ್ಟಿ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಕಡೆಗಣಿಸಿವೆ.



ಸದರಿ ನಾಗರಾಜಶೆಟ್ಟಿಗೆ ಮಂತ್ರಿಯೊಬ್ಬನಿಗೆ ಇರಬೇಕಾದ ಯೋಗ್ಯತೆ ಹಾಗಿರಲಿ, ಕನಿಷ್ಠ ಮಾನವೀಯತೆ ಕೂಡ ಇಲ್ಲ, ಜಿಲ್ಲಾ ಉಸ್ತುವಾರಿಮಂತ್ರಿಯಾಗಿ ಈತ ಮೂಲ್ಕಿಯಲ್ಲಿ ಪೊಲೀಸ್ ಫೈರಿಂಗ್‌ಗೆ ಬಲಿಯಾದ ತರುಣರ ಮನೆಗಳಿಗೆ ಹೋಗಿ, ಅವರ ಕುಟುಂಬದವರಿಗೆ ಸಾಂತ್ವನ ಹೇಳಿದ್ದು ಸರಿಯಾದ ಕ್ರಮ. ಆದರೆ ಕಳೆದ ತಿಂಗಳು ಮಂಗಳೂರಿನ ಕೋಮು ಹಿಂಸೆಯಲ್ಲಿ ಪ್ರಾಣ ಕಳೆದುಕೊಂಡ ಬಜ್ಪೆ ಮಸೀದಿಯ ಇಮಾಮ್ ಅಬ್ದುಲ್ ಗಫೂರ್ ಮದನಿ ಮತ್ತು ಬೊಳಿಯಾರು ಇಬ್ರಾಹಿಂ ಅವರ ಕುಟುಂಬದವರಿಗೆ ನಾಗರಾಜಶೆಟ್ಟಿ ಸಾಂತ್ವನದ ಮಾತು ಹೇಳುವುದು ಬಿಡಿ, ಆ ಕೊಲೆಗಳನ್ನು ಖಂಡಿಸಬೇಕು ಎಂದು ಸಹ ಅವರಿಗೆ ಅನ್ನಿಸಲಿಲ್ಲ. ಬದಲಾಗಿ ಅವರು ಬಳ್ಳಾರಿ ಜೈಲಿಗೆ ಹೋಗಿ ಆ ಕೊಲೆಗಳ ಆರೋಪಿಗಳನ್ನು ಭೇಟಿ ಮಾಡಿ ಅವರಿಗೆ ತಮ್ಮ ಸಹಾನುಭೂತಿ ಸೂಚಿಸಿದರು! ತನ್ನ ಈ ವರ್ತನೆಯ ಮುಖಾಂತರ, ನಾಗರಾಜಶೆಟ್ಟಿ ಮುಸ್ಲಿಮರು ಈ ದೇಶದ ಪ್ರಜೆಗಳೂ ಅಲ್ಲ; ಮನುಷ್ಯಮಾತ್ರರೂ ಅಲ್ಲ; ಹಾಗೂ ತನ್ನ ಮಟ್ಟಿಗೆ ಅವರು ಅಸ್ತಿತ್ವದಲ್ಲೇ ಇಲ್ಲ ಎಂದು ಸಾರಿದಂತಾಗಿದೆ. ಒಂದು ವೇಳೆ ಇದು ಅವರ ವೈಯಕ್ತಿಕ ನಿಲುವಾಗಿದ್ದರೆ ಆಗಲೂ ಅದು ಖಂಡನಾರ್ಹವೇ ಸರಿ. ಆದರೆ ನಾಗರಾಜಶೆಟ್ಟಿ ಈ ಘನ ಸರ್ಕಾರದಿಂದ ದ.ಕ. ಜಿಲ್ಲೆಗೆ ನಿಯುಕ್ತಗೊಂಡ ಉಸ್ತುವಾರಿ ಸಚಿವರು!

ನಾಗರಾಜಶೆಟ್ಟಿಯವರ ಈ ವರ್ತನೆ ಸರಕಾರದ ಧೋರಣೆಯನ್ನೇ ಪ್ರತಿಬಿಂಬಿಸುವುದಾದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಹಾಗೆಂದು ಅಧಿಕೃತವಾಗಿ ಘೋಷಿಸಲಿ. ಅದಲ್ಲವಾದರೆ ಅವರು ತಕ್ಷಣ ಮಂತ್ರಿಮಂಡಲದಿಂದ ನಾಗರಾಜಶೆಟ್ಟಿಯವರನ್ನು ವಜಾಗೊಳಿಸಬೇಕು.

– ಜೆ.. ರಾಜಶೇಖರ

ಪೇಜಾವರರ ಸ್ಪಷ್ಟೀಕರಣ


ಕಳೆದ ಸಂಚಿಕೆಯಲ್ಲಿ ಮತ್ತದೆ ಪ್ರಶ್ನೆ ಭಾರತೀಯರ್ಯಾರು? ಎಂಬ ಲೇಖನಕ್ಕೆ ಸಂಬಂಧಿ ದಂತೆ ಜೆ.ರಾಜಶೇಖರ್‌ರವರಿಗೆ ಪೇಜಾವ ಮಠಾಧೀಶರಾದ ಶ್ರೀ ವಿಶ್ವೇಶ ತೀರ್ಥ ಸ್ವಾಮೀ ಯವರು ಈ ಕೆಳಕಂಡ ಸ್ಪಷ್ಟೀಕರಣ ನೀಡಿದ್ದಾ

"ಮಂಗಳೂರಿನ ಸಭೆಯಲ್ಲಿ ನಾನು ಶ್ರೀರಾ ನಲ್ಲಿ ನಂಬಿಕೆ ಇಲ್ಲದವರು ಭಾರತೀಯ ಪ್ರಜೆಗ ಗಲು ಅರ್ಹರಲ್ಲ ಎಂಬ ಅರ್ಥದ ಯಾ ಮಾತನ್ನೂ ಹೇಳಿಲ್ಲ. ಪತ್ರಿಕೆಗಳಲ್ಲಿ ಆ ರೀತಿ ವರ ಆಗಿದ್ದರೆ ಅದು ತಪ್ಪು. ಶ್ರೀರಾಮನು ಭಾರತ ರಾಷ್ಟ್ರ ಪುರುಷ. ಭಾರತೀಯರೆಲ್ಲರೂ ಅವನ ಗೌರವಿಸಬೇಕು ಎಂದಷ್ಟೇ ನಾನು ಹೇಳಿದ ಗಾಂಧೀಜಿಯವರೂ ಶ್ರೀರಾಮನನ್ನು ಆ ದೃ ಯಿಂದಲೇ ಗೌರವಿಸುತ್ತಿದ್ದರು."

–ಸ

ಹೂ ಇಸ್ ದಿಸ್ ಲೀಡರ್? ಆಯೋಗ ಏನು ಕತ್ತೆ ಕಾಯ್ತಾ ಇತ್ತೇನ್ರಿ? -ದೇವೇಗೌಡ


ಒಂದೇ ತಿಂಗಳಲ್ಲಿ ಹದಿನೆಂಟು ಹೆಂಗಸರ ಬಾಳು ಹಾಳು


ಸೈತಾನ್ ಅಲ್ಲೈಮಣಿ

ಅಲ್ಲೈಮಣಿ ತಾನು ಜೈಲಿಂದ ಬಿಡುಗಡೆಯಾಗಿ ಬಂದ ನಂತರ ನಡೆಸಿದ ನಲವತ್ತು ಡಕಾಯಿತಿ ಮತ್ತು ಇಪ್ಪತ್ತೆಂಟು ಹೆಂಗಸರ ಪೈಶಾಚಿಕ ರೇಪ್ ವೃತ್ತಾಂತವನ್ನು ಬಾಯಿಬಿಟ್ಟ! ಈ ಪೈಕಿ ಒಂದೇ ತಿಂಗಳಲ್ಲಿ ಆತ ಹದಿನೆಂಟು ಹೆಂಗಸರನ್ನು ಮುಕ್ಕಿ ಹಾಕಿದ್ದ. ಅದರಲ್ಲೂ ಬಿಟಿಎಂ ಲೇಔಟಿನಲ್ಲಿ ಗಂಡ ಮತ್ತು ಮಕ್ಕಳ ಎದುರಿಗೇ ಗೃಹಿಣಿಯೊಬ್ಬಳನ್ನು ಆತ ಪೀಡಿಸಿದ್ದು ಅತ್ಯಂತ ದಾರುಣ ಪ್ರಸಂಗವಾಗಿತ್ತು. ಇದರಷ್ಟೇ ಬರ್ಭರವಾಗಿ ಮೈಕೋ ಲೇಔಟ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಅಲ್ಲೈಮಣಿ ಮತ್ತೊಂದು ಅಮಾನುಷ ಕೃತ್ಯವೆಸಗಿದ್ದ.

ಪೊಲೀಸರ ಸಣ್ಣದೊಂದು ಅಚಾತುರ್ಯ ಬೆಂಗಳೂರಿನ ಇಪ್ಪತ್ತೆಂಟಕ್ಕೂ ಹೆಚ್ಚು ಮನೆದೀಪಗಳನ್ನು ಶಾಶ್ವತವಾಗಿ ನಂದಿಸಿತ್ತು. ಆ ಹೊತ್ತಿಗಾಗಲೇ ಕೋರ್ಟು ರೇಪಿಸ್ಟ್ ಅಲ್ಲೈಮಣಿಗೆ ಹತ್ತು ವರ್ಷಗಳ ಕಠಿಣ ಸಜೆ ವಿಧಿಸಿತ್ತು. ಪೆಂಚನ್ ಮೊಹಲ್ಲಾದ ಮುಬಾರಕ್‌ನ ಇಬ್ಬರು ತಂಗಿಯರ ಮೇಲೆ ನಡುರಸ್ತೆಯಲ್ಲೇ ಅತ್ಯಾಚಾರವೆಸಗಿದ್ದ ಅಲ್ಲೈಮಣಿಯನ್ನು ಆವತ್ತು ಕಾಟನ್‌ಪೇಟೆಯ ಎಸ್.ಐ. ಅಬ್ದುಲ್ ಅಜೀಮ್ ಹಿಡಿದು ತಂದ ಕತೆಯೇ ರೋಚಕವಾಗಿತ್ತು.

ಪೆಂಚನ್ ಮೊಹಲ್ಲಾದಲ್ಲಿ ಇದ್ದ ನೂರಾರು ಜನರ ಮುಂದೆ ಜೋಡಿ ರೇಪ್ ಮಾಡಿದ್ದ ಅಲ್ಲೈಮಣಿ ನೇರವಾಗಿ ತಮಿಳುನಾಡಿನ ವೆಲ್ಲೂರಿಗೆ ಎಸ್ಕೇಪಾಗಿದ್ದ. ಅಲ್ಲಿ ತನ್ನ ತಾಯಿ, ಹೆಂಡತಿ ಮತ್ತು ತಮ್ಮಂದಿರನ್ನಿಟ್ಟು ರಾತ್ರಿಯಾದರೆ ಬೆಂಗಳೂರಿಗೆ ಬರುತ್ತಿದ್ದ. ಆವತ್ತು ಒಂದಲ್ಲಾ ಒಂದು ಡಕಾಯಿತಿ ಮಾಡಿ ಕೈಗೆ ಸಿಕ್ಕ ಹೆಂಗಸರನ್ನು ಮುಕ್ಕಿ ಬೆಳಿಗ್ಗೆಯ ಹೊತ್ತಿಗೆ ಮತ್ತೆ ವೆಲ್ಲೂರು ಸೇರಿಕೊಳ್ಳುತ್ತಿದ್ದ. ನಡುನಡುವೆಯೇ ಆಂಜನಪ್ಪ ಗಾರ್ಡನ್ನಿಗೆ ನುಗ್ಗಿ ಹಾವಳಿಯಿಡುತ್ತಿದ್ದ.


ಕೃಷ್ಣಪ್ಪ


ಇಷ್ಟೆಲ್ಲದರ ಮಧ್ಯೆ ಅಲ್ಲೈಮಣಿ ಮೂಡಲಪಾಳ್ಯದ ವೃಷಭಾವತಿ ಮೋರಿಯ ಸಂದಿಯಲ್ಲೊಂದು ತಾತ್ಕಾಲಿಕ ರೂಮ್ ಹಿಡಿದಿದ್ದಾನೆಂಬ ಸುದ್ದಿ ಅಜೀಮ್‌ಗೆ ಬಂದು ಸರಿಸುಮಾರು ಇಪ್ಪತ್ತು ಮಂದಿ ಪೊಲೀಸರನ್ನು ಸತತ ಒಂದು ವಾರಗಳ ಕಾಲ ಹೊಂಚುಹಾಕಿಸಿದ್ದರು. ಆತನ ರೂಮಿನ ಬೀಗ ಒಡೆದು ಅದರೊಳಗೂ ಐದು ಮಂದಿ ಪೊಲೀಸರನ್ನು ಬಿಟ್ಟಿದ್ದರು. ಅದೊಂದು ದಿನ ರೂಮಿಗೆಂದು ಬಂದ ಅಲ್ಲೈಮಣಿ ದೂರದಲ್ಲಿಲ್ಲೋ ಪೊಲೀಸ್ ಜೀಪ್ ನಿಂತಿದ್ದನ್ನು ನೋಡಿ ಓಡತೊಡಗಿದ. ಸರಿಸುಮಾರು ಇಪ್ಪತ್ತು ಪೊಲೀಸರು ಆತನನ್ನು ಅಟ್ಟಿಸಿಕೊಂಡು ಹೋಗುತ್ತಿದ್ದರೆ, ಅಲ್ಲೈಮಣಿಯ ಬಳಿ ಡಕಾಯಿತಿ ಮಾಡಿದ್ದ ಕಂತೆಕಂತೆ ನೋಟುಗಳಿತ್ತಲ್ಲ; ಅದನ್ನು ರಸ್ತೆಗುಂಟ ಎರಚುತ್ತಾ ಹೋಗಿ, ಜನ ಅದನ್ನು ಮುಗಿಬಿದ್ದು ಆಯ್ದುಕೊಳ್ಳುವಂತೆ ಮಾಡಿ ಪರಾರಿಯಾಗಿಬಿಟ್ಟ.

ಅಂತಿಮವಾಗಿ ವೆಲ್ಲೂರಿನ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಒಬ್ಬರ ಮನೆಯಲ್ಲಿ ಅಲ್ಲೈಮಣಿ ಅಜೀಮ್ ಕೈಗೆ ಸಿಕ್ಕಿಬಿದ್ದದ್ದು 1994ರ ಜೂನ್ ತಿಂಗಳಲ್ಲಿ. ನಾಲ್ಕು ವರ್ಷ ಜೈಲಿನಲ್ಲಿ ಕಳೆದ. ಮುಬಾರಕ್ ತಂಗಿಯರನ್ನು ಪೀಡಿಸಿದ ನಂತರ ಒಂದೂವರೆ ತಿಂಗಳುಗಳ ಕಾಲ ಇಡೀ ಕಾಟನ್‌ಪೇಟೆ ಪೊಲೀಸರು ಬೇರೆ ಯಾವುದೇ ಕೆಲಸ ಮಾಡಲಿಕ್ಕಾಗಲೇ ಇಲ್ಲ. ಇನ್ನೂ ದುರಂತವೆಂದರೆ ಅಲ್ಲೈಮಣಿಗೆ ಹೆದರಿಕೊಂಡು ಮುಬಾರಕ್‌ನ ಇಬ್ಬರು ತಂಗಿಯರು ರೇಪ್ ನಡೆದು ಮೂರು ದಿನಗಳಾದರೂ ದೂರನ್ನೇ ಕೊಟ್ಟಿರಲಿಲ್ಲ. ಕೇಸು ನಡೆಯುತ್ತಿರುವಾಗಲೇ ಅಲ್ಲೈಮಣಿ ಮ್ಯಾಜಿಸ್ಟ್ರೇಟರ ಎದುರಿಗೆ ಮಹಿಳಾ ಪಬ್ಲಿಕ್ ಪ್ರಾಸಿಕ್ಯೂಟರ್ ಒಬ್ಬರಿಗೆ ಧಮಕಿ ಹಾಕಿದ್ದ. ತನ್ನ ವಿರುದ್ಧ ಸಾಕ್ಷಿ ಹೇಳಿದ ಮುಬಾರಕ್‌ನ ತಂಗಿಯರನ್ನು ಹುಡುಗರನ್ನು ಬಿಟ್ಟು ಅಪಹರಿಸುವುದಕ್ಕೂ ಪ್ರಯತ್ನಿಸಿದ್ದ. ಇದು ಗೊತ್ತಾಗಿಯೇ ಇನ್ಸ್‌ಪೆಕ್ಟರ್ ಅಜೀಮ್ ಆ ಇಬ್ಬರು ಯುವತಿಯರನ್ನು ಮದುವೆಯಾಗುವವರೆಗೆ ತಮ್ಮ ಮನೆಯಲ್ಲಿಟ್ಟುಕೊಂಡು ಪೋಷಿಸಿದ್ದರು.

ಇಷ್ಟೆಲ್ಲ ಬಾಧೆ ಬಿದ್ದು ಅಲ್ಲೈಮಣಿಗೆ ಸಜೆಯಾಗುವಂತೆ ಇನ್ಸ್‌ಪೆಕ್ಟರ್ ಅಜೀಮ್ ನೋಡಿಕೊಂಡರೆ ಆತನನ್ನು ಕೋರ್ಟಿಗೆ ಕರೆತಂದ ಬೀಗಲು ಪೊಲೀಸರು ಎಸ್ಕೇಪಾಗಲು [illegible]. ಹಾಗೇ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ [illegible] ಈ ಬಾರಿ [illegible]

ಪೈಶಾಚಿಕತೆಗಿಳಿದುಬಿಟ್ಟ. ಮತ್ತೆ ವೆಲ್ಲೂರಿಗೆ ಹೋಗಿ ಸಂಜೆಯಾಗುತ್ತಿದ್ದಂತೆ ಬೆಂಗಳೂರಿಗೆ ಬಂದು ಪ್ರತಿನಿತ್ಯ ಒಂದಲ್ಲಾ ಒಂದು ದುಷ್ಕೃತ್ಯವೆಸಗುತ್ತಿದ್ದ. 1998ರ ಜನವರಿಯಲ್ಲಿ ಅದೊಂದು ರಾತ್ರಿ ಆಂಜನಪ್ಪ ಗಾರ್ಡನ್ನಿಗೆ ನುಗ್ಗಿದವನೆ ಕನಕಾಂಬರಿ ಎಂಬ ತಮಿಳು ಯುವತಿಯನ್ನು ಮನೆಯಿಂದ ಹೊರಕ್ಕೆಳೆದು ತಂದು ನಡುಗಲ್ಲಿಯಲ್ಲಿ ನಿಲ್ಲಿಸಿ ಆಕೆಯ ಕೈಗೆ ಬಾಂಬ್ ಕೊಟ್ಟ. ಇದನ್ನು ಬಿಟ್ಟರೆ ನೀನು ಭಸ್ಮವಾಗ್ತೀಯ ಎಂದು ಹೆದರಿಸಿ ಆಕೆಯ ಕೈಯಲ್ಲಿ ಬಾಂಬ್ ಇರುವಂತೆಯೇ ಅತ್ಯಾಚಾರವೆಸಗಿದ್ದ.

ಈ ಬಾರಿ ಸಿಸಿಬಿಯ ಬಿ.ಕೆ. ಶಿವರಾಮ್, ರೇವಣ್ಣ ಮತ್ತು ಎಸ್.ಕೆ. ಉಮೇಶ್ ಹುಡುಕಾಡಿ ಆತನನ್ನು ವೆಲ್ಲೂರಿನಿಂದ ಹಿಡಿದು ತಂದರು. ಆದರೆ ಕೆಲವೇ ತಿಂಗಳಲ್ಲಿ ತನ್ನ ಪರವಾಗಿ ತಾನೇ ಕೋರ್ಟಿನಲ್ಲಿ ವಾದ ಮಾಡಿ ತನ್ನದು ಸನ್ನಡತೆ ಎಂದು ಸಾಬೀತುಮಾಡಿ ಬಿಡುಗಡೆಯಾಗಿಬಿಟ್ಟ. ಬಿಡುಗಡೆಯಾದವನೇ ಇನ್ಸ್‌ಪೆಕ್ಟರ್ ಅಬ್ದುಲ್ ಅಜೀಮ್‌ರನ್ನು ಕೊಲ್ತೀನಿ ಎಂದು ಓಡಾಡಿಕೊಂಡಿದ್ದು ಯಶವಂತಪುರದ ವರ್ತಕ ಸತ್ಯನಾರಾಯಣರನ್ನು ರಿವಾಲ್ವರ್ ತೋರಿಸಿ ಅಪಹರಿಸಿ ಐದು ಲಕ್ಷ ಸುಲಿದಿದ್ದ.


ಅಬ್ದುಲ್ ಅಜೀಂ

ಆ ಹೊತ್ತಿಗೆ ಡೇನಿಯಲ್, ದೊರೈ, ಆರೋಗ್ಯರಾಜ್, ಆಟೋಬಾಬು, ರಮೇಶ, ಸುರೇಶ, ಶಂಕ್ರ ಮುಂತಾದ ಅನಾಹುತಕಾರಿಗಳ ಹಿಂಡೇ ಅಲ್ಲೈಮಣಿಯ ಜೊತೆಗಿತ್ತು. ವಿಶೇಷವಾಗಿ ಹೊಸೂರು ರಸ್ತೆಯ ಬೊಮ್ಮಸಂದ್ರ, ಬಿಟಿಎಂ ಲೇಔಟ್, ಎಚ್‌ಎಸ್‌ಆರ್ ಲೇಔಟ್, ಕೋನೇನ ಅಗ್ರಹಾರ, ಮಡಿವಾಳ, ಮಂಗಮ್ಮನಪಾಳ್ಯ ಇತ್ಯಾದಿ ಏರಿಯಾಗಳಲ್ಲಿ ಸಂಜೆಯಾದರೆ ಅಲ್ಲೈಮಣಿಯ ಹಾವಳಿ ಶುರುವಾಗುತ್ತಿತ್ತು.

1998ರ ಡಿಸೆಂಬರ್ ಎರಡರಂದು ಬಿಟಿಎಂ ಲೇಔಟಿನ ಬ್ಯಾಂಕ್ ಅಧಿಕಾರಿಯೊಬ್ಬರ ಮನೆ ಬಾಗಿಲು ಬಡಿದ ಅಲ್ಲೈಮಣಿ ಕುಡಿಯಲು ನೀರು ಕೇಳಿದ. ಅವರ ಪತ್ನಿ ಬಾಗಿಲು ತೆಗೆದದ್ದೇ ತಡ, ತನ್ನ ಐದು ಮಂದಿ ಶಿಷ್ಯರ ಜೊತೆ ಮನೆಯೊಳಕ್ಕೆ ನುಗ್ಗಿಬಿಟ್ಟ. ಅದು ಸಂಜೆಯ ಹೊತ್ತು. ಆಕೆಯ ಪತಿ, ಪಿಯುಸಿ ಓದುತ್ತಿದ್ದ ಓರ್ವ ಗಂಡು ಮಗ ಮತ್ತು ಎಸ್ಸೆಲ್ಸಿ ಓದುತ್ತಿದ್ದ ಓರ್ವ ಮಗಳು ಆವತ್ತು ಮನೆಯಲ್ಲೇ ಇದ್ದರು. ಒಳಕ್ಕೆ ನುಗ್ಗಿದ್ದೇ ಅಲ್ಲೈಮಣಿ ಗಂಡ ಬ್ಯಾಂಕ್ ಅಧಿಕಾರಿಯ ಕೈಕಾಲುಗಳನ್ನು ಖುರ್ಚಿಗೆ ಕಟ್ಟಿಹಾಕಿದ. ಇಬ್ಬರು ಮಕ್ಕಳ ಕೈಕಾಲು ಕಟ್ಟಿಹಾಕಿದ್ದ. ಆದರೆ ಹೆಂಗಸರನ್ನು ಮಾತ್ರ ಅರೆವಸ್ತ್ರಗೊಳಿಸಿ ಮಾಡಿಟ್ಟಿದ್ದ. ಅಡುಗೆಯನ್ನೆಲ್ಲ ಆಕೆಯ ಕೈಯಿಂದಲೇ ತರಿಸಿ ಇಡೀ ಗ್ಯಾಂಗ್ ಊಟ ಮಾಡಿತು. ಊಟ ಮುಗಿದದ್ದೇ ತಡ ಅಲ್ಲೈಮಣಿ ಸೈತಾನನಾಗಿಬಿಟ್ಟ. ಗಂಡ ಮತ್ತು ಮಕ್ಕಳ ಎದುರಿಗೇ ಆ ಹೆಂಗಸನ್ನು ಒಬ್ಬರಾದ ಮೇಲೊಬ್ಬರಂತೆ ಅಲ್ಲೈಮಣಿಯ ಇಡೀ ಗ್ಯಾಂಗ್ ಮುಕ್ಕಿ ಹಾಕಿತು. Of course ಆವತ್ತು ಅಲ್ಲೈಮಣಿಯ [illegible] ಇದ್ದ ಶಂಕ್ರ ಅದನ್ನು ಪ್ರತಿಭಟಿಸಿದ್ದ. ಸುಮ್ಮನೆ [illegible]

ಬಿಡೋಣ, ಹೆಂಗಸನ್ನು ಮುಟ್ಟಬೇಡ ಎಂದು ಶಂಕ್ರ ಪರಿಪರಿಯಾಗಿ ಕೇಳಿಕೊಂಡಿದ್ದ. ಆದರೆ ಅಲ್ಲೈಮಣಿ ಶಂಕ್ರನಿಗೇ ಎರಡು ಬಾರಿಸಿ ಬಾಯಿ ಮುಚ್ಚಿಸಿದ್ದ.

ಇಡೀ ಮನೆಯನ್ನು ದೋಚಿದ್ದಷ್ಟೇ ಅಲ್ಲ, ಮನೆ ಒಡತಿಯನ್ನು ಸೈತಾನನ ಗ್ಯಾಂಗ್ ಮುಕ್ಕಿ ಹಾಕಿತ್ತು. ದುರಂತವೆಂದರೆ ಇಷ್ಟಾಗ್ಯೂ ಆ ಬ್ಯಾಂಕ್ ಅಧಿಕಾರಿಯ ಕುಟುಂಬ ಈ ಬಗ್ಗೆ ಪೊಲೀಸರಿಗೆ ದೂರನ್ನೇ ಕೊಟ್ಟಿರಲಿಲ್ಲ. ಇದಾಗಿ ಎಷ್ಟೋ ದಿನಗಳ ನಂತರ ಮಡಿವಾಳದ ಇನ್ಸ್‌ಪೆಕ್ಟರ್ ಕೃಷ್ಣಪ್ಪನವರ ಕೈಗೆ ಅಲ್ಲೈಮಣಿ ಗ್ಯಾಂಗ್ ಸಿಕ್ಕಿಬಿದ್ದ ನಂತರವೂ, ಸ್ವತಃ ಅಲ್ಲೈಮಣಿಯೇ ಇಂತಿಂತಹ ಮನೆಯಲ್ಲಿ ತಾನು ಹೀಗೆ ಮಾಡಿದ್ದೆ ಎಂದು ಹೇಳಿಕೆ ಕೊಟ್ಟಮೇಲೂ, ಆತನ ಹೇಳಿಕೆಯ ಮೇರೆಗೆ ಪೊಲೀಸರು ದೂರು ಕೊಡುವಂತೆ ಆ ಬ್ಯಾಂಕ್ ಅಧಿಕಾರಿಯನ್ನು ಒತ್ತಾಯಿಸಿದಾಗಲೂ ಅತ್ಯಾಚಾರಕ್ಕೀಡಾಗಿದ್ದ ಹೆಂಗಸು ಹೇಳಿದ್ದು ಒಂದೇ ಮಾತು.

"ನೋಡಿ ನೀವು ಇನ್ನೂ ನಮ್ಮನ್ನು ಒತ್ತಾಯ ಮಾಡಿದ್ರೆ ಆದ್ರೆ ನಾವು ಇಡೀ ಕುಟುಂಬ ವಿಷ ಕುಡಿದು ಆತ್ಮಹತ್ಯೆ ಮಾಡ್ಕೋತೀವಿ....!"


ಉಮೇಶ್

ಆವತ್ತು ಮಡಿವಾಳದ ಇನ್ಸ್‌ಪೆಕ್ಟರ್ ಕೃಷ್ಣಪ್ಪನವರ ಕೈಗೆ ಅಲ್ಲೈಮಣಿ ಹಾಗೇ ಸಿಕ್ಕಿಬೀಳುತ್ತಿರಲಿಲ್ಲ. ಮಡಿವಾಳದ ಸ್ಲಂಗೆ ರಾತ್ರಿ ಹತ್ತರ ಹೊತ್ತಿಗೆ ಅಲ್ಲೈಮಣಿ ಗ್ಯಾಂಗ್ ನುಗ್ಗಿತ್ತು. ಒಂದು ಡಕಾಯಿತಿ ಮುಗಿಯಿತೆಂದರೆ ಒಬ್ಬರಲ್ಲ ಒಬ್ಬ ಹೆಂಗಸನ್ನು ಅಲ್ಲೈಮಣಿ ಮುಕ್ಕಿಯೇ ತೀರುತ್ತಿದ್ದ. ಅದು ಆತನ ಪೈಶಾಚಿಕತೆ. ಕೆಲವೊಮ್ಮೆ ಡಕಾಯಿತಿಗೆ ಹೊರಡುವ ಮೊದಲೇ ಯಾವುದಾದರೂ ಮನೆಗೆ ನುಗ್ಗಿ ಕೈಗೆ ಸಿಕ್ಕ ಹೆಂಗಸರನ್ನು ಅಲ್ಲೈಮಣಿ ಪೀಡಿಸುತ್ತಿದ್ದ. ತನ್ನ ಪಶುವಾಂಛೆ ತೀರಿಸಿಕೊಂಡ ನಂತರವೇ ಡಕಾಯಿತಿಗಿಳಿಯುತ್ತಿದ್ದ.

ಹಾಗೇ ಮಡಿವಾಳ ಸ್ಲಮ್ಮಿಗೆ ನುಗ್ಗಿದ ಅಲ್ಲೈಮಣಿ ಗ್ಯಾಂಗ್ 1998ರ ಡಿಸೆಂಬರ್ ಇಪ್ಪತ್ತರ ರಾತ್ರಿ ಮನೆಯೊಂದರಲ್ಲಿ ಒಂಟಿಯಾಗಿದ್ದ ಗುಲ್ಬರ್ಗಾ ಕಡೆಯ ಕೂಲಿ ಹೆಂಗಸೊಬ್ಬಳ ಮೇಲೆ ಅತ್ಯಾಚಾರಕ್ಕೆ ಯತ್ನಿಸಿತು. ಆಕೆ ಕಿರುಚಿದ್ದನ್ನು ಕೇಳಿ ಇಡೀ ಸ್ಲಮ್ಮಿನ ಜನರೆಲ್ಲ ಧಾವಿಸಿ ಬಂದು ಮುತ್ತಿಗೆ ಹಾಕಿದ್ದರು. ಪೊಲೀಸರಿಗೆ ಸುದ್ದಿಯನ್ನೂ ಕೊಟ್ಟರು. ಆದರೆ ಪೊಲೀಸರು ಬರುತ್ತಿದ್ದಂತೆ ತನ್ನನ್ನು ಮುತ್ತಿದ್ದ ಜನರ ಕಣ್ಣಿಗೆ ಖಾರದ ಪುಡಿ ಎರಚಿ ಅಲ್ಲೈಮಣಿ ಪರಾರಿಯಾಗಲು ಯತ್ನಿಸಿದ್ದ. ಆವತ್ತು ಮಡಿವಾಳದ ಇನ್ಸ್‌ಪೆಕ್ಟರ್ ಕೃಷ್ಣಪ್ಪ ಆತನನ್ನು ಅರ್ಧ ಕಿ.ಮಿ. ತನಕ ಬೆನ್ನಟ್ಟಿ ಹೋಗಿ ಹಿಡಿದರು. [illegible] ವಿದ್ಯೆ ಪ್ರಯೋಗಿಸಿದ ನಂತರವೇ ಅಲ್ಲೈಮಣಿ ತಾನು ಜೈಲಿಂದ ಬಿಡುಗಡೆಯಾಗಿ ಬಂದ ನಂತರ ನಡೆಸಿದ ನಲವತ್ತು ಡಕಾಯಿತಿ ಮತ್ತು ಇಪ್ಪತ್ತೆಂಟು ಹೆಂಗಸರ ಪೈಶಾಚಿಕ ರೇಪ್ ವೃತ್ತಾಂತವನ್ನು ಬಾಯಿಬಿಟ್ಟ!

ಈ ಪೈಕಿ ಒಂದೇ ತಿಂಗಳಲ್ಲಿ ಆತ ಹದಿನೆಂಟು ಹೆಂಗಸರನ್ನು ಮುಕ್ಕಿ ಹಾಕಿದ್ದ. ಅದರಲ್ಲೂ ಬಿಟಿಎಂ ಲೇಔಟಿನಲ್ಲಿ ಗಂಡ ಮತ್ತು ಮಕ್ಕಳ ಎದುರಿಗೇ ಗೃಹಿಣಿಯೊಬ್ಬಳನ್ನು ಆತ ಪೀಡಿಸಿದ್ದು ಅತ್ಯಂತ ದಾರುಣ ಪ್ರಸಂಗವಾಗಿತ್ತು. ಇದರಷ್ಟೇ ಬರ್ಭರವಾಗಿ ಮೈಕೋ ಲೇಔಟ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಅಲ್ಲೈಮಣಿ ಮತ್ತೊಂದು ಅಮಾನುಷ ಕೃತ್ಯವೆಸಗಿದ್ದ. ಅದು ತಾಯಿಯ [illegible] ಆಕೆಯ ಮಗಳನ್ನು ಪೀಡಿಸಿದ ಘಟನೆ. [illegible] ಪಿಸಿತನದ ಆ ಯುವತಿ ಸಾಫ್ಟ್‌ವೇರ್ [illegible]. ಮುಂದಿನ ತಿಂಗಳಷ್ಟೇ ಆಕೆಯ ಮದುವೆ ನಿಶ್ಚಯವಾಗಿತ್ತು. ಆವತ್ತು ಸಂಜೆಯ ಹೊತ್ತು ತಾಯಿ ಟೀವಿ ನೋಡುತ್ತಿದ್ದಳು. ಕೆಲಸ ಮುಗಿಸಿ ಆಗಷ್ಟೇ ಮನೆ ಸೇರಿಕೊಂಡಿದ್ದ ಮಗಳು ಯಾರೋ ಕಾಲಿಂಗ್ ಬೆಲ್ ಒತ್ತಿದ್ದನ್ನು ಕೇಳಿಸಿಕೊಂಡು ಬಾಗಿಲು ತೆರೆದಿದ್ದಾಳೆ.

ಅಷ್ಟೇ, ಐದು ಮಂದಿ ದಾಂಢಿಗರ ಸಮೇತ ಒಳಕ್ಕೆ ನುಗ್ಗಿದ ಅಲ್ಲೈಮಣಿ ತಾಯಿಯ ಕೈಕಾಲು ಕಟ್ಟಿಹಾಕಿ ಇಡೀ ಮನೆಯನ್ನು ದೋಚಿ ಸೂಟ್‌ಕೇಸ್ ಒಂದಕ್ಕೆ ತುರುಕಿದ್ದಾನೆ. ಹೋಗುವ ಮುನ್ನ ತಾಯಿಯ ಎದುರಿಗೆ ಆಕೆಯ ಮಗಳನ್ನು ಪೀಡಿಸಿದ್ದಾನೆ. ಈ ಪ್ರಕರಣದಲ್ಲೂ ಅಷ್ಟೇ, ಆ ತಾಯಿ ಮಗಳನ್ನು ದೂರು ಕೊಡುವಂತೆ ಪೊಲೀಸರೇ ಒತ್ತಾಯಿಸಿದಾಗಲೂ ಪ್ರಯೋಜನವಾಗಲಿಲ್ಲ. ಯಾವುದೋ ನೆಪವೊಡ್ಡಿ ಮದುವೆಯನ್ನು ಮುಂದೂಡಿ ಸುಮ್ಮನಾಗಿಬಿಟ್ಟರು.

ಮಂಗಮ್ಮನಪಾಳ್ಯದ ಮತ್ತೊಂದು ಗುಲ್ಬರ್ಗಾ ಮೂಲದ ಕೂಲಿಯ ಮನೆಗೆ ನುಗ್ಗಿದ ಅಲ್ಲೈಮಣಿ ಮನೆಯಲ್ಲಿದ್ದ ಒಂಟಿ ಯುವತಿಯನ್ನು ಅರೆಜೀವವಾಗುವಂತೆ ಪೀಡಿಸಿದ್ದ. ವಿಪರೀತ ರಕ್ತಸ್ರಾವವಾಗಿ ಮೈತುಂಬಾ ಕಚ್ಚಿದ ಗಾಯಗಳಾಗಿದ್ದ ಆಕೆಯನ್ನು ನೆರೆಹೊರೆಯವರೆಲ್ಲ ಸೇರಿ ಪಕ್ಕದ ಆಸ್ಪತ್ರೆಯೊಂದಕ್ಕೆ ಸೇರಿಸಿದರು. ಅಲ್ಲಿ ಸರಿಸುಮಾರು ಒಂದು ತಿಂಗಳು ಚಿಕಿತ್ಸೆ ಪಡೆದ ನಂತವೇ ಆಕೆ ಸರಿಹೋಗಿದ್ದು. ಈ ಪ್ರಕರಣದಲ್ಲೂ ಅಷ್ಟೇ, ಆಕೆಯಾಗಲಿ ಆಕೆಯ ಮನೆಯವರಾಗಲಿ ದೂರನ್ನೇ ಕೊಟ್ಟಿರಲಿಲ್ಲ.

ಬೊಮ್ಮನಹಳ್ಳಿಯ ನಲವತ್ತರ ಓರ್ವ ವಿಧವೆ, ಕೋನೇನ ಅಗ್ರಹಾರದ ಕಟ್ಟಡ ಕಾರ್ಮಿಕನೊಬ್ಬ ಪತ್ನಿ, ಎಚ್‌ಎಸ್‌ಆರ್ ಲೇಔಟನಲ್ಲಿ ರೇಷ್ಮೆ ವ್ಯಾಪಾರಿ ಮಾರ್ವಾಡಿಯೊಬ್ಬನ ಮಡದಿ, ಬೊಮ್ಮಸಂದ್ರದಲ್ಲಿ ಗಾರ್ಮೆಂಟ್ ಕೆಲಸ ಮುಗಿಸಿ ಬರುತ್ತಿದ್ದ ಯುವತಿ, ನಾಗನಾಥಪುರದಲ್ಲಿ ಫ್ಯಾಕ್ಟರಿ ಕಾರ್ಮಿಕನೊಬ್ಬನ ವೃದ್ಧ ತಾಯಿ- ಹೀಗೆ ಒಂದೇ ತಿಂಗಳಲ್ಲಿ ಹದಿನೆಂಟು ಪೈಶಾಚಿಕ ರೇಪ್‌ಗಳನ್ನು ಅಲ್ಲೈಮಣಿ ಎಸಗಿದ್ದ. ಮಡಿವಾಳದ ಸೋಮೇಶ್ವರ ಸ್ಲಮ್ಮಿನಲ್ಲಿ ಸತತ ಮೂರುದಿನಗಳ ಕಾಲ ಮೂರು ಜೋಪಡಿಗಳಿಗೆ ನುಗ್ಗಿ ಮೂವರು ಅಸಹಾಯಕ ಮಹಿಳೆಯರನ್ನು ಚಿತ್ರಹಿಂಸೆಗೀಡು ಮಾಡಿದ್ದ. ಅಲ್ಲೈಮಣಿ ಪೊಲೀಸರಿಗೆ ಇಷ್ಟೆಲ್ಲ ಸ್ತ್ರೀಪೀಡಕ ವೃತ್ತಾಂತವನ್ನು ಬಾಯಿಬಿಟ್ಟದ್ದರೂ ಈ ಪೈಕಿ ಒಂದೇ ಒಂದು ದೂರು ಪೊಲೀಸ್ ಠಾಣೆಗೆ ಮುಟ್ಟಿರಲಿಲ್ಲ. ಇನ್ಸ್‌ಪೆಕ್ಟರ್ ಕೃಷ್ಣಪ್ಪ ಮೈಕೈ ಪರಚಿಕೊಂಡರು. ಒಬ್ಬ ಯಕಶ್ಚಿತ್ ಕ್ರಿಮಿನಲ್ ಬೆಂಗಳೂರಿನ ಇಪ್ಪತ್ತೆಂಟಕ್ಕೂ ಹೆಚ್ಚು ನಿರಪರಾಧಿ ಹೆಂಗಸರ ಮಾನದೋಚಿದ್ದರೂ ಒಬ್ಬೇ ಒಬ್ಬಾಕೆ ದೂರು ಕೊಡಲು ಮುಂದೆ ಬರದೇ ಹೋಗಿದ್ದಕ್ಕೆ ತಲೆ ತಲೆ ಚಚ್ಚಿಕೊಂಡರು. ಪ್ರತಿಯೊಬ್ಬರೂ ಪೊಲೀಸರಿಗೆ ಶಾಪ ಹಾಕುತ್ತಿದ್ದರು.

ಅದು 1998ರ ಡಿಸೆಂಬರ್ 28ರ ರಾತ್ರಿ. ಅಲ್ಲೈಮಣಿಯನ್ನು ಕೋರಮಂಗಲದ ಜಡ್ಜಸ್ ಕಾಲೋನಿಯ ಮ್ಯಾಜಿಸ್ಟ್ರೇಟ್ ಒಬ್ಬರ ಮುಂದೆ ಹಾಜರುಪಡಿಸಿ ವಾಪಸ್ಸು ಕರೆತರುವಾಗ ಹಿಂದೆ ಜೀಪಿನಲ್ಲಿ ಕೂತಿದ್ದ ಅಲ್ಲೈಮಣಿ ಪೇದೆಯೊಬ್ಬರ ಗನ್ ಕಿತ್ತುಕೊಂಡು ಹೊರಕ್ಕೆ ನೆಗೆದುಬಿಟ್ಟ. ಹಿಡಿಯಲು ಹೋದ ಪೊಲೀಸರನ್ನೇ ಬಂದೂಕಿನಿಂದ ತಿವಿಯಲು ಯತ್ನಿಸಿದ. ಆದರೆ ಮುಂದೆ ಕೂತಿದ್ದ ಇನ್ಸ್‌ಪೆಕ್ಟರ್ ಕೃಷ್ಣಪ್ಪನವರ ರಿವಾಲ್ವರ್ ಲೋಡಾಗಿತ್ತು. ಜೀಪಿನಿಂದ ಜಿಗಿದವರೇ ಒಂದರ ಮೇಲೊಂದರಂತೆ ನಾಲ್ಕು ಬಾರಿ ಟ್ರಿಗರ್ ಒತ್ತಿದ್ದಾರೆ. ಅಲ್ಲಿಗೆ ಅಲ್ಲೈಮಣಿಯ ಕೊನೆಯ ಅಧ್ಯಾಯವೇ ಮುಗಿದುಹೋಗಿತ್ತು.

ಮಡಿವಾಳದ ಇನ್ಸ್‌ಪೆಕ್ಟರ್ ಕೃಷ್ಣಪ್ಪನವರನ್ನು ಇಡೀ ಬೆಂಗಳೂರು ಅಭಿನಂದಿಸಿತ್ತು. ಇನ್ಸ್‌ಪೆಕ್ಟರ್‌ಗಳಾದ ಸುಬ್ಬಣ್ಣ, ಸಂಗ್ರಾಮ್‌ಸಿಂಗ್, ಸುರೇಶ್ ನಾಯ್ಡು ಮುಂತಾದವರ ಜೊತೆ ಸೇರಿ ಇನ್ಸ್‌ಪೆಕ್ಟರ್ ಕೃಷ್ಣಪ್ಪ ಅಲ್ಲೈಮಣಿಯನ್ನು ಕೊಲ್ಲದೇ ಹೋಗಿದ್ದರೆ ಅವನು ಯಾವತ್ತಿಗೂ ಸಮಾಜಕ್ಕೊಂದು ಪೀಡೆಯೇ ಆಗಿರುತ್ತಿದ್ದ. [illegible] ಸತ್ತ ನಂತರ ಒಂದಷ್ಟು ದಿನಗಳ ಕಾಲ ಆಂಜನಪ್ಪ ಗಾರ್ಡನ್ [illegible] ತಣ್ಣಗಿತ್ತು. ಆ ಹೊತ್ತಿಗಾಗಲೇ ಗಾರ್ಡನ್ ಮನೆಯಲ್ಲಿ [illegible] ಮಾಲಾ [illegible]. ಆದರೆ ಗಾರ್ಡನ್ [illegible]

ರಿವೇಂಜ್ ಕಿಲ್ಲಿಂಗ್ಸ್ 8

ಡಾ. ಸೋಮನಾಥ್

ಭಜರಂಗಿಗಳ ಕೈವಾಡ

ವರ್ಷದಲ್ಲಿ 9 ಸಲ ಅಂಬೇಡ್ಕರ್‌ಗೆ ಅವಮಾನ!



ಬೀದರ್

ಆಕೆ ಜಾತಿವಾದಿ ಎಸ್.ಪಿ. ಆತ ಅಹಂಕಾರಿ ಡಿ.ಸಿ. ಇವರಿಬ್ಬರೂ ದಂಪತಿಗಳು ಬೇರೆ! ಸುಮ್ಮ ಸುಮ್ಮನೇ ಗೋಲಿಬಾರ್ ಆಗಲು ಇಂತಹ ಡಿ.ಸಿ, ಎಸ್‌ಪಿಗಳು ಸಾಕಲ್ಲವೆ? ಎಸ್.ಪಿ. ರೂಪಾ ಮತ್ತು ಡಿ.ಸಿ. ಮನಿಷ್ ಮುದಗಿಲ್ ಎಂಬ ಈ ದಂಪತಿ ಮಹಾಶಯರ ಜಿಲ್ಲಾಡಳಿತದಲ್ಲಿ ಒಂದೂವರೆ ವರ್ಷದಲ್ಲಿ ಅಂಬೇಡ್ಕರ್ ಪ್ರತಿಮೆಗಳಿಗೆ ಒಂಭತ್ತು ಸಾರಿ ಚಪ್ಪಲಿ ಹಾರ ಹಾಕಿ ಅವಮಾನಿಸಲಾಗಿದೆ. ಯಾವ ಪ್ರಕರಣದಲ್ಲೂ ಒಬ್ಬನೇ ಒಬ್ಬನ ಬಂಧನವಾಗಿಲ್ಲ. ತನಿಖೆ ಮಾಡಿದರೆ ತಾನೇ ಆರೋಪಿಗಳು ಸಿಗುವುದು? ಎಸ್.ಪಿ, ಡಿ.ಸಿ.ಗಳು ಒಂದೇ ಒಂದು ಪ್ರಕರಣದಲ್ಲಾದರೂ ಆರೋಪಿಗಳಿಗೆ ಶಿಕ್ಷೆ ಆಗುವಂತೆ ಮಾಡಿದ್ದರೆ ಮೊನ್ನೆಯ ಅಂಬೇಡ್ಕರ್ ಪ್ರತಿಮೆಗೆ ಅವಮಾನದ ಘಟನೆಯೂ ನಡೆಯುತ್ತಿರಲಿಲ್ಲ, ನಂತರದ ಹುಚ್ಚು ಗೋಲಿಬಾರ್‌ಗಳೂ ನಡೆಯುತ್ತಿರಲಿಲ್ಲ. ಅಂದಂತೆ ಎಲ್ಲ ಪ್ರಕರಣಗಳಲ್ಲಿ ಭಜರಂಗಿಗಳ ಕೈವಾಡ ಇರುವುದು ಬೀದರ್ ಜಿಲ್ಲೆಗೇ ಗೊತ್ತಿದ್ದರೂ, ಒಬ್ಬನ ಅರೆಸ್ಟೂ ಆಗಿಲ್ಲ.



ಭಜರಂಗಿಗೆ ಸೆಲ್ಯೂಟು-ಕಾಶೆಂಪುರ ಗಿಲೀಟು

ಸ್ಲೋ ಪೊಲೀಸ್... ಸ್ಲೋ ಪಾಯಿಸನ್

ಡಿಸೆಂಬರ್ 6 ರಂದು ಅಂಬೇಡ್ಕರ್ ದಿನಾಚರಣೆಯಂದೇ ಹುಮ್ನಾಬಾದ್ ತಾಲೂಕಿನ ಮನ್ನಾಏಖೆಳ್ಳಿಯಲ್ಲಿ ಮುಂಜಾನೆ 8.30 ಗಂಟೆಗೆ ಅಂಬೇಡ್ಕರ್ ಪ್ರತಿಮೆಯ ಕುತ್ತ ಚಪ್ಪಲಿ ಹಾರ ಹಾಕಿದ್ದು ಪತ್ತೆಯಾಗಿದೆ. ಪಕ್ಕದಲ್ಲೇ ಇರುವ ಪೊಲೀಸ್ ಠಾಣೆ ಇದ್ದೂ ಇಲ್ಲದಂತಿದೆ. ಅವತ್ತು ಅಂಬೇಡ್ಕರ್ ದಿನಾಚರಣೆಗೆಂದು ಸೇರಿದ್ದ ದಲಿತ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆಗಿಳಿದು ರಾಸ್ತಾರೋಖೊ ಆರಂಭಿಸಿದರು. ಬೀದರ್‌ನಿಂದ ಪೊಲೀಸಪ್ಪಗಳು ಬರಲೇ ಇಲ್ಲ, ಡಿ.ಸಿ, ಎಸ್.ಪಿ. ಯಾರೂ ಬರದಿದ್ದಾಗ ಪ್ರತಿಭಟನಾಕಾರರ ಕೋಪ ನೆತ್ತಿಗೇರತೊಡಗಿತ್ತು, ಹೈವೆಯ ಮೇಲೆ ಒಂದು ಬಸ್ಸಿಗೆ ಬೆಂಕಿಯೂ ಬತ್ತು, 11 ಗಂಟೆಗೆ ಬೀದರ್‌ನಿಂದ ಬಂದ ಪೊಲೀಸ್ ಪಡೆಗಳು ಏಕಾಏಕಿ ಟಿಯರ್ ಗ್ಯಾಸ್ ಸಿಡಿಸಿ, ಗಾಳಿಯಲ್ಲಿ ಗುಂಡು ಹಾರಿಸಿ ಬಿಡುವ ಹುಚ್ಚಾಟ ನಡೆಸಿಬಿಟ್ಟವು... ರಾಹುಲ್ ಕಾಮರಾಜ್ ಎಂಬ 14 ವರ್ಷದ ಬಾಲಕ ಮತ್ತು ವಿಶ್ವಂತ ಸಿದ್ಧರಾಮ ಎಂಬ ಇನ್ನೊಬ್ಬ ವ್ಯಕ್ತಿಗೆ ಗುಂಡು ತಗುಲಿ ಆಸ್ಪತ್ರೆಗೆ ದಾಖಲಾಗಬೇಕಾಯ್ತು. ಆದರೆ ಹೆಣ ದಂತಿರುವ ಜಿಲ್ಲಾಡಳಿತ ಐ.ಜಿ.ಗೆ ತಪ್ಪು ಮಾಹಿತಿ ನೀಡಿ ಗೋಲಿಬಾರೇ ನಡೆದಿಲ್ಲ ಎಂದು ಬಿಟ್ಟಿತು. ಈ ಘಟನೆಯಲ್ಲಿ ಐವತ್ತು ಜನ ಗಾಯಗೊಂಡಿದ್ದರೂ ಡಿಸಿ, ಎಸ್ಪಿ ಮನ್ನಾಏಖೆಳ್ಳಿಗೆ ಬರಲೇಇಲ್ಲ.

ಇತ್ತ ಬೀದರ್‌ನ ನೌಬಾದ್ ಏರಿಯಾದಲ್ಲಿ ದಲಿತ ಸಂಘಟನೆಗಳು ಬಂದ್‌ಗೆ ಒತ್ತಾಯಿಸಿದಾಗ, ಲಿಂಗಾಯತ, ವೈಶ್ಯ ವರ್ತಕರು ವಿರೋಧ ಮಾಡಿದರು. ಪರಿಸ್ಥಿತಿಯ ಗಂಭೀರತೆ ಗೊತ್ತಿದ್ದರೂ ಪೊಲೀಸರು ತಡವಾಗಿ ಬಂದರು. ಅಷ್ಟೊತ್ತಿಗೆ ದಲಿತ ಸಂಘಟನೆಗಳ ಕಾರ್ಯಕರ್ತರು ಮತ್ತು ವರ್ತಕರ ಮಧ್ಯೆ ಜಗಳ ಶುರುವಾಗಿತ್ತು, ಮಾನಗೇಡಿ ಪೊಲೀಸರು ಇಲ್ಲೂ ಟಿಯರ್‌ಗ್ಯಾಸ್ ಹೊಡೆದು ಬಿಟ್ಟರು. ಇನ್ನೊಂದು ಕಡೆ ಅಂಬೇಡ್ಕರ್ ವೃತ್ತದ ಬಳಿ ಸೇರಿದ ದಲಿತರು ಮಾನವ ಸರಪಳಿ ನಿರ್ಮಿಸಿ ರಸ್ತೆ ಬಂದ್ ಮಾಡಿ ಪ್ರತಿಭಟಿಸತೊಡಗಿದರು. ಬುದ್ಧಿಗೇಡಿ ಎಸ್.ಪಿ. ರೂಪಾ ಮತ್ತೆ ಲಾಠಿಚಾರ್ಜ್ ಮಾಡಿಸಿ ಗಾಳಿಯಲ್ಲಿ ಗುಂಡು ಹಾರಿಸಿ ಬಿಟ್ಟಳು. ಲಾಠಿ ಚಾರ್ಜ್ ಹೊಡೆತಕ್ಕೆ ನೂರಾರು ಜನ ಗಾಯಗೊಂಡರು. ದಲಿತರೇ ಅಧಿಕವಾಗಿರುವ ಶಹಾಗಂಜ್ ಏರಿಯಾಕ್ಕೆ ನುಗ್ಗಿದ ರಾಕ್ಷಸ ಪೊಲೀಸರು ಸಿಕ್ಕಸಿಕ್ಕವರಿಗೆಲ್ಲ ಹೊಡೆದರು.



• ಡಿಸಿ-ಎಸ್ಪಿ ಬೇಜವಾಬ್ದಾರಿ ಜೋಡಿ

ಭಜರಂಗಿಗಳ ಚಿತಾವಣೆಯಿಂದ ವೀರಶೈವ ಮಹಾಸಭಾದ ಅಮರ್ ಯರೋಳಕರ್‌ನ ನೇತೃತ್ವದಲ್ಲಿ ವ್ಯಾಪಾರಿಗಳೆಲ್ಲ ಸೇರಿ, ತಮ್ಮ ವ್ಯಾಪಾರಕ್ಕೆ ಧಕ್ಕೆ ಮಾಡಿದರೆಂದು 400 ಜನ ದಲಿತರ ಮೇಲೆ 40 ಕೇಸು ಹಾಕಿದ್ದಾರೆ. ಇವೆಲ್ಲವೂ ಸುಳ್ಳು ಕೇಸ್‌ಗಳೇ. ದಲಿತ ನಾಯಕರಾದ ಜಗನ್ನಾಥ್ ಪೂಜಾರಿ, ಮಾನವಹಕ್ಕು ವೇದಿಕೆಯ ಲಕ್ಷ್ಮಿಸಾಗರ್, ರಘುನಾಥ್ ಗಾಯಕವಾಡ್, ಸುಬ್ಬಣ್ಣ, ಸುಧಾಕರ ನಾವರಗೇರಿ, ಜಗನ್ನಾಥ್ ಮುಂತಾದವರನ್ನು ಹುಡುಕಿ ಹುಡುಕಿ ತಂದು ಹೊಡೆದಿದ್ದಾರೆ ಪೊಲೀಸರು.

ಈ ಕೋ-ಜಾ ಸರ್ಕಾರದ ಆಡಳಿತದಲ್ಲಿ ಸಾಬ... ದಲಿತರು, ಬದುಕುವುದೇ ಕಷ್ಟವಾಗಿದೆ. ಬುದ್ಧಿಗೇ... ಎಸ್.ಪಿ, ಡಿ.ಸಿಗಳನ್ನು ಮೊದಲು ಬೀದರ್‌ನಿಂದ ದ... ಓಡಿಸ ಬೇಕಿದೆ. ಜಿಲ್ಲಾ ಉಸ್ತುವಾರಿ ಸಚಿವ ಬಂ... ಕಾಶೆಂಪೂರ ಇದ್ದೂ ಸತ್ತಂತೆ. ಬು... ಬುದ್ಧ ಎಂದು ತಿರುಗುವ ಪ... ಖರ್ಗೆಗೆ ಸೋನಿಯಾ ರಿಗೆ ಬರ್ತ್... ವಿಶ್ ಮಾಡಲು ದೆಹ... ಹೋಗುವುದೇ ಒಂದು ಸೀರಿಯ... ಕಾರ್ಯಕ್ರಮವಾಗಿದೆ.

ಈ ಒಂದೂವರೆ ವರ್ಷದ... ಭಾಲ್ಕಿ ತಾಲ್ಲೂಕಿನ ಕಾಕನಾಳ, ಬಂ... ಹುಮ್ನಾಬಾದ್ ತಾಲ್ಲೂಕಿನ ಹುಮ... ಬಾದ್ ಸಿಟಿ, ಭಾತಂಬ್ರಾ ಮದರಗಾಂವ, ಭೀಮರಖೇ... ಹುಡಗಿ, ಮಂಗಲಗಿಗಳಲ್ಲಿ ಅಂಬೇಡ್ಕರ್ ಪ್ರತಿಮೆಗ... ಅವಮಾನ ಮಾಡಲಾಗಿದೆ. ಈಗ ಮನ್ನಾಏಖೆಳ್ಳಿಯ... ಅಂಬೇಡ್ಕರ್‌ಗೆ ಅವಮಾನ ಮಾಡಿದ್ದಲ್ಲದೆ, ಪೊಲೀ... ಕ್ರೌರ್ಯ ನಡೆದಿದೆ. ಎಸ್.ಪಿ.ಯ ಕೊಂಕುತನದಿಂದ ಈ... ಮೇಲ್ಜಾತಿಗಳು, ದಲಿತರ ನಡುವೆ ವೈಮನಸ್ಯ ಮೂ... ವಂತಾಗಿದೆ. ಭಜರಂಗಿಗಳು ದಲಿತರ ಮೇಲೆ ನಡೆಸುತ್ತಿರು... ದೌರ್ಜನ್ಯಗಳಿಗೆ ಪೊಲೀಸರ ಬೆಂಬಲವಿದೆ.

ಬೀದರ್‌ನ ಭಜರಂಗಿಗಳ ವಿರುದ್ಧ ಮತ್ತು ಪೊಲೀ... ಕ್ರೌರ್ಯದ ವಿರುದ್ಧ ರಾಜ್ಯದ ಎಲ್ಲ ದಲಿತ ಸಂಘಟನೆಗ... ಮತ್ತು ಪ್ರಗತಿಪರ ಸಂಘಟನೆಗಳು ಸಿಡಿದು ನಿಲ್ಲಬೇಕಿ... ಅದೊಂದೇ ಉಳಿದಿರುವ ದಾರಿ....

-ಮಲ್ಲನಗೌಡ...

ದರ್ಶನಾಪುರ ಹಿಂಬಾಲಕ ಸಂಜೀವರೆಡ್ಡಿಯ ಬರ್ಬರ ಹತ್ಯೆ



ಹಾಡುಹಗಲೇ ಭೀಕರವಾಗಿ ಕೊಲೆಯಾದ ದರ್ಶನಾಪುರನ ಬೆಂಬಲಿಗ ಸಂಜೀವರೆಡ್ಡಿ

ಗುಲ್ಬರ್ಗಾ

ಸುರಪುರವೇ ತಲ್ಲಣಗೊಳ್ಳುವಂತೆ ಸಚಿವ ದರ್ಶನಾಪುರನ ಹಿಂಬಾಲಕ ಸಂಜೀವರೆಡ್ಡಿ ಎಂಬ ಯುವಕನ ಕೊಲೆ ಹಾಡುಹಗಲೇ ನಡೆದುಹೋಗಿದೆ. ನವೆಂಬರ್ 30 ರಂದು ನ್ಯಾಯಾಲಯದ ಪ್ರಕರಣವೊಂದರ ವಿಚಾರಣೆಗೆಂದು ಯಾಳಗಿಯಿಂದ ಸುರಪುರಕ್ಕೆ ಬಂದಿದ್ದ ಜೆಡಿಎಸ್ ಧುರೀಣ ಶರಣಪ್ಪಗೌಡನ ಪುತ್ರ ಸಂಜೀವರೆಡ್ಡಿಯ ಮೇಲೆ ಮಚ್ಚು, ಕೊಡಲಿಗಳನ್ನು ಹಿಡಿದಿದ್ದ 50-60 ಜನರ ಗುಂಪು ಹಠಾತ್ ದಾಳಿ ನಡೆಸಿತು. ಸಮಾಜ ಕಲ್ಯಾಣ ಇಲಾಖೆಯ ಬಳಿ ಅಟ್ಟಿಸಿಕೊಂಡು ಬಂದ ಗುಂಪು ಮಾರಕಾಸ್ತ್ರಗಳಿಂದ ನಡೆಸಿದ ಭೀಕರ ಹಲ್ಲೆಗೆ ಸಂಜೀವರೆಡ್ಡಿ ಸ್ಥಳದಲ್ಲೇ ಹೆಣವಾಗಿ ಹೋದ.

ಕಾಂಗ್ರೆಸ್ ಧುರೀಣ ಶೇಖರಗೌಡನ ಉಪಪತ್ನಿಯ ಮಗ ರಾಜುಗೌಡ, ಹಿಂಬಾಲಕರಾದ ಹನುಮಂತರಾಯ, ಅಮೀನರೆಡ್ಡಿ, ಬಾಪೂಗೌಡ, ರಶೀದ್, ಮಲ್ಲಣ್ಣ ಮುಂತಾದ ಕೊಲೆಗಾರರ ಬಂಧನವಂತೂ ಆಗಿದೆ.

ಯಾಳಗಿ ಗ್ರಾಮಕ್ಕೆ ಮಂಜೂರಾದ ಎಪ್ಪತ್ತು ಆಶ್ರಯ ಮನೆಗಳನ್ನು ಹಂಚಿಕೊಳ್ಳುವಾಗಿನ ಕಿತ್ತಾಟ ಕೊಲೆಯ ಕಾರಣಗಳಲ್ಲೊಂದು. ಇಪ್ಪತ್ತು ಮನೆಗಳನ್ನು ಕೇಳಿದ ಕಾಂಗ್ರೆಸ್‌ನವರಿಗೆ ಜೆಡಿಎಸ್‌ನವರು ಒಂದನ್ನೂ ಕೊಡಲಿಲ್ಲ, ಇದೇ ನೆಪವಾಗಿ ಹಳೆಯ ದ್ವೇಷ ಮತ್ತೆ ಭುಗಿಲೆದ್ದು ಸಂಜೀವರೆಡ್ಡಿಯ ಹತ್ಯೆಯಾಗಿದೆ.


ಗ್ರಾಮ, ತಾಲೂಕು ಮಟ್ಟಗಳ ಒಣಪ್ರತಿಷ್ಠೆಯ ರಾಜಕಾರಣಕ್ಕೆ ಬಲಿಯಾದವರ ಪಟ್ಟಿಗೆ ಸಂಜೀವರೆಡ್ಡಿ ಸೇರಿಹೋದ. ಅಲ್ಲಿಗೆ ಸಂಜೀವರೆಡ್ಡಿಯ ತಂದೆ ಶರಣಪ್ಪಗೌಡ, ಕೊಲೆಯ ಹಿಂದಿನ ರೂವಾರಿ ಶೇಖರಗೌಡರ ಮನೆತನಗಳ ಮಧ್ಯದ ದ್ವೇಷ ದುಪ್ಪಟ್ಟಾಗಿದೆ. ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಚುನಾವಣೆಗಳ ವೇಳೆ ತಾರಕಕ್ಕೇರಿದ ದ್ವೇಷ ಸಂಜೀವರೆಡ್ಡಿಯ ಬರ್ಬರ ಹತ್ಯೆಯವರೆಗೆ ಬಂದು ನಿಂತಿದೆ. ನಿಂತಿಲ್ಲ, ಆ ದ್ವೇಷ ಇನ್ನಷ್ಟು ಬಲಿ ತೆಗೆದುಕೊಳ್ಳುವ ಎಲ್ಲ ಲಕ್ಷಣಗಳೂ ಇವೆ. ಹಿರಿಯ ರಾಜಕೀಯ ನಾಯಕರು, ಪೊಲೀಸರು ತಮ್ಮ ಪಾಡಿಗೆ ತಾವು ಹಾಯಾಗಿದ್ದಾಗ ಇನ್ನೇನಾಗುತ್ತೆ?

ಸುರಪುರ ತಾಲ್ಲೂಕಿನ ಯಾಳಗಿ ಎಂಬ ಗ್ರಾಮ ದ್ವೇಷದಲ್ಲೇ ಬದುಕುತ್ತದಷ್ಟೇ.

ಊರಲ್ಲಿ ಖಾಯಂ ಪೊಲೀಸ್ ವ್ಯಾನ್

ಯಾಳಗಿ ಎಂಬೀ ಈ ಊರಲ್ಲಿ ಕಳೆದೊಂದು ವರ್ಷದಿಂದ ಖಾಯಂ ಆಗಿ ಪೊಲೀಸ್ ವ್ಯಾನ್ ನಿಂತಿರುತ್ತಿತ್ತು, ಈಗ್ಗೆ 2 ತಿಂಗಳ ಹಿಂದಷ್ಟೇ ಆ ವ್ಯಾನ್ ಊರುಬಿಟ್ಟಿತ್ತು, ಶೇಖರ್‌ಗೌಡ, ಶರಣಪ್ಪಗೌಡರ ಗುಂಪುಗಳ ಮಧ್ಯದ ಜಿದ್ದಾಜಿದ್ದಿಯೇ ಅಂತಹದ್ದು. ಕಳೆದ ಅಸೆಂಬ್ಲಿ ಎಲೆಕ್ಷನ್ನಿನಲ್ಲಿ ಈಗಿನ ಕೃಷಿ ಮಾರುಕಟ್ಟೆ ಸಚಿವ ಶರಣಪ್ಪ ದರ್ಶನಾಪುರ ಜೆಡಿಎಸ್‌ನಿಂದ ಶಹಾಪುರ ಕ್ಷೇತ್ರದಿಂದ (ಯಾಳಗಿ ಸುರಪುರ ತಾಲೂಕಿನಲ್ಲಿದ್ದು, ಶಹಾಪುರ ಅಸೆಂಬ್ಲಿ ಕ್ಷೇತ್ರದಲ್ಲಿ ಬರುತ್ತದೆ) ಗೆಲ್ಲುವಂತೆ ದುಡಿದ ಪ್ರಮುಖ ಕಾರ್ಯಕರ್ತರಲ್ಲಿ ಮೃತ ಸಂಜೀವರೆಡ್ಡಿಯೂ ಒಬ್ಬ. ಯೌವ್ವನವಿತ್ತು, ಜನರಿಗೆ ಒಂದಿಷ್ಟು ಸಹಾಯ ಮಾಡುವ ಗುಣವಿತ್ತು ಯುವಕರ ಬೆಂಬಲವೂ ಇತ್ತು, ಇದು ಕಾಂಗ್ರೆಸ ಬ್ಲಾಕ್ ಅಧ್ಯಕ್ಷ ಶೇಖರಗೌಡನ ಮಗ ರಾಜೂಗೌಡನಿಗೆ ಇರಿಸುಮುರಿಸಾಗಿತ್ತು.

ಬೆಂಗಳೂರಿಗೆ ಓದುವುದಕ್ಕೆಂದು ಹೋಗಿದ್ದ ಸಂಜೀವರೆಡ್ಡಿ ಮರಳಿ ಯಾಳಗಿಗೆ ಬಂದಾಗ ಪಾಲಿಟಿಕ್ಸ್ ರುಚಿ ಹತ್ತಿಸಿಕೊಂಡುಬಿಟ್ಟ. 1993 ರಲ್ಲಿ ಜೆಡಿಎಸ್‌ನ ಶಂಕ್ರಣ್ಣ ಒಣಕಿಹಾಳ ವಿರುದ್ಧ ಜಿಲ್ಲಾ ಪಂಚಾಯತಿ. ಎಲೆಕ್ಷನ್ನಿನಲ್ಲಿ ಸೋತಿದ್ದ ಕಾಂಗ್ರೆಸ ಶೇಖರಗೌಡನಿಗೆ ಜೆಡಿಎಸ್‌ನ ಸಂಜೀವರೆಡ್ಡಿ ಕುಟುಂಬ ಅಡ್ಡಗಾಲು ಹಾಕುತ್ತಲೇ ಬಂದಿತ್ತು. 1993 ರ ಆ ಚುನಾವಣೆಯಲ್ಲೇ ಶೇಖರಗೌಡನ ಮಗ ರಾಜೂಗಾಡನಿಗೂ, ಸಂಜೀವರೆಡ್ಡಿಗೂ ಜಗಳವಾಗಿ, ಆ ಕೇಸ್ ಇನ್ನೂ ನಡೆಯುತ್ತಲೇ ಇದೆ.



ಸಚಿವ ದರ್ಶನಾಪುರ

10 ವರ್ಷ ತಲೆ ಮರೆಸಿಕೊಂಡಿದ್ದವರು...

ಈ ಕೊಲೆಯ ಮೂಲ ಕಿಡಿ ಹತ್ತಿಕೊಂಡಿದ್ದು 40 ವರ್ಷಗಳ ಹಿಂದೆಯೇ. ಶೇಖರಗೌಡನ ತಂದೆ ಸಂಗನಗೌಡನನ್ನು ಭೀಮನಗೌಡ ದವಳಗಿ ಮತ್ತು ಅವನ ಹಿಂಬಾಲಕರು ಹಾಡುಹಗಲೇ ಕೊಚ್ಚಿ ಹಾಕಿದ್ದರು. ಜೈಲಿಗೆ ಹೋಗಿ ಬಂದ ಕೊಲೆಗಾರರು ಪ್ರಾಣಭೀತಿಯಿಂದ ಹತ್ತು ವರ್ಷ ತಲೆಮರೆಸಿಕೊಂಡುಬಿಟ್ಟರು. ಬಿಜಾಪುರದಲ್ಲಿ ಬಟ್ಟೆ ಅಂಗಡಿ ಇಟ್ಟುಕೊಂಡಿದ್ದ ಕೊಲೆಗಾರರು 10 ವರ್ಷಗ... ನಂತರ ಧುತ್ತನೆ ಯಾಳಗಿಯಲ್ಲಿ ಪ್ರತ್ಯಕ್ಷರಾದರು... ರೈಫಲ್ಲುಗಳೊಂದಿಗೆ.. ದ್ವೇಷದೊಂದಿಗೆ... ಕ್ರೌರ್ಯದೊಂದಿಗೆ...

ಅಷ್ಟೊತ್ತಿಗೆ ಕಾಂಗ್ರೆಸ ಶೇಖರಗೌಡನಿಗೂ, ಜೆಡಿಎಸ... ಶರಣಪ್ಪಗೌಡನಿಗೂ ಜಿದ್ದಾಜಿದ್ದಿ ಶುರುವಾಗಿತ್ತು. ... ಶರಣಪ್ಪಗೌಡ ಕೊಲೆಗಡುಕರ ಪರ ನಿಂತ. ಊ... ವ್ಯವಹಾರಗಳೆಲ್ಲ ಈ ಗುಂಪಿನ ಅಣತಿಯಂ... ನಡೆಯತೊಡಗಿದವು.


ಎಲೆಕ್ಷನ್ ಕಿಡಿ

2004 ರ ವಿಧಾನಸಭೆ ಚುನಾವಣೆಯ ವೇಳೆಯ... ಕಾಂಗ್ರೆಸ ಶೇಖರಗೌಡನ ಉರವಣಿ... ಹೆಚ್ಚಾಯ್ತು, ಜೆಡಿಎಸ್‌ನ ಶರಣಪ್ಪಗೌಡ ಇದ... ಅಡ್ಡಗಾಲು ಹಾಕತೊಡಗಿದ. ಆವಾಗ... ಶೇಖರಗೌಡನ ಉಪಪತ್ನಿಯ ಮಗ ರಾಜು... ಸಾಬ್ ಅಲಿಯಾಸ್ ರಾಜೂಗೌಡ ಶರಣ... ಗೌಡನ ಹತ್ಯೆ ಮಾಡಲು ಅಟ್ಯಾಕ್ ಮಾಡಿ... ಭೀಮನಗೌಡನ ಗೊಬ್ಬರದ ಅಂಗಡಿ ಹೊ... ಶರಣಪ್ಪಗೌಡ ತಲೆ ಉಳಿಸಿಕೊಂ... ಆದರೆ ಭೀಮನಗೌಡನ ತಲೆ ಒಡೆ... ಹೋಯ್ತು.

ಈಗ್ಗೆ ವರ್ಷದ ಹಿಂದೆ ರಾಜೂಗ... ತನ್ನ ಎರಡನೇ ಹೆಂಡತಿ ಮನೆಗೆ ಹೊರಟ... ಶರಣಪ್ಪಗೌಡನ ಮಗ ಸಂಜೀವರೆಡ್ಡಿ ರಾಜೂಗೌಡ... ಕಣ್ಣಿಗೆ ಖಾರದ ಪುಡಿ ಉಗ್ಗಿ, ರಾಡ್‌ನಿಂದ ಹ... ಮಾಡಿದ. ಶರಣಪ್ಪಗೌಡನೇ ಬಂದು ರಾಜೂಗೌಡ... ಪ್ರಾಣ ಉಳಿಸಿದ. ನಂತರ ಆಗಾಗ ಈ ಎರಡ... ಮನೆತನಗಳ ಮಧ್ಯೆ ಜಗಳಗಳು ಶುರುವಾದವು. ಜಿ.ಪ... ತಾ.ಪಂ. ಚುನಾವಣೆಗಳಲ್ಲಿ ಹೆಚ್ಚಿದ ದ್ವೇಷ ಈ... ಶರಣಪ್ಪಗೌಡನ ಮಗ ಸಂಜೀವರೆಡ್ಡಿಯ ಬ... ತೆಗೆದುಕೊಂಡಿದೆ.

-ವರದಿಗಾ...

ಪೊಲೀಸರಿಗೆ ಸಿಕ್ಕ ವಾಹನ, ಹಣ ನನ್ನದಲ್ಲ. ನನ್ ಗೆ... ಕೈಗಾರಿಕೋದ್ಯಮಿ ವೆಂಕಟೇಶರದ್ದು-ಖರ್ಗೆ



ಅಳ್ಳಿಗೆ ಅಲೆಯುವಂತೆ ಮಾಡುತ್ತಿದ್ದಾನೆ. ಹೀಗೆ ಹಳೆ ಚೆಕ್ ವಾಪಸ್ ಮಾಡದೇ ಪಡಬಟ್ಟ ದುಡ್ಡಿಗೆ ನಾಲಿಗೆ ಚಾಚುತ್ತಲೇ ಇದೆ ಬಡ್ಡಿ ಶೇಖಿಯ ಕುಟುಂಬ.

ಫಾರೆಸ್ಟ್ ಡಿಪಾರ್ಟಮೆಂಟಿನ ದುುತ್ತೇಗೌಡ ಎನ್ನುವವರು ಬಡ್ಡಿಶೇಖಿಯ ಕಿರುಕುಳ ತಡೆಯಲಾಗದೇ, ಕೊರಗಿ ಕೊರಗಿ ಕೊನೆಯುಸಿರೆಳೆದರು. ದಾವೂದ್ ಸಾಮಿಲ್‌ನ ನಾಸೀರ್, ಒಬ್ಬ ಕಾಲೇಜು ಉಪನ್ಯಾಸಕಿ, ಕೃಷ್ಣ ಗಣೇಶಾಚಾರಿ, ವಾಸೀಮ್, ಇಮ್ರಾನ್, ಕಲೀಮ್ ಪಾಷಾ, ಹೊನ್ನೇಗೌಡ, ನೀಲಕಂಠಪ್ಪ, ಡಿ. ಮೋಹನ್, ಸಿದ್ಧಲಿಂಗ ಪ್ರಸಾದ್, ಎಂಎಲ್‌ಎ ಪ್ರಕಾಶ್ ಭಂಟ, ಮಾಜಿ ನಗರಸಭಾ ಸದಸ್ಯ ಎಚ್.ಎಚ್. ದೇವರಾಜು.... ಹೀಗೆ ಬಡ್ಡಿಶೇಖಿಯಿಂದ ನೋವುಂಡವರ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

2002 ರಲ್ಲಿ ಡಿ. ಮೋಹನ್ ಜೊತೆ ಸ್ಪೈಸ್ ಟೆಲಿಕಾಂನ ಡೀಲರ್ ವ್ಯವಹಾರಕ್ಕೆ ಪಾಲುದಾರನಾದ ಶೇಖಿ ಸಮಾ 11 ಲಕ್ಷ ಮುಂಡಾಮೋಚಿ ಬಿಟ್ಟ. ಆಗ ಜೊತೆಗಿದ್ದಾಗ ಎರಡು ಚೆಕ್ ಹಾರಿಸಿಕೊಂಡು, ಈಗ ಅವುಗಳನ್ನು ಆರು ಲಕ್ಷಕ್ಕೆ ಹಾಕಿಕೊಂಡಿದ್ದಾನೆ.

ಹಾಸನ: ಬಡ್ಡಿ ಬದ್ಮಾಷ್‌ಗಳಿಬ್ಬರು...


ಅಪ್ಪ ರಾಮೇಗೌಡ, ಮಗ ಬಡ್ಡಿಶೇಖಿ

ಹಾಸನದ ಈ ಬಡ್ಡಿಕುಳದ ಮೇಲೆ ಬರೋಬ್ಬರಿ 28 ಕೇಸುಗಳಿವೆ. ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಇವನೇ ನಂಬರ್ ಒನ್ ರೌಡಿ.

ಈ ಬಡ್ಡಿ ಕ್ರಿಮಿಯ ಹೆಸರು ಚಂದ್ರಶೇಖರ್.... ಬಡ್ಡಿ ಶೇಖಿಯೆಂದೇ ಕುಖ್ಯಾತನಾಗಿರುವ ಈತ 'ವೃತ್ತಿಧರ್ಮ'ವನ್ನು ತನ್ನ ಅಪ್ಪನಿಂದ ಬಳುವಳಿಯಾಗಿ ಪಡೆದಿದ್ದಾನೆ. ಹಾಸನದಲ್ಲಿ ಬಡ್ಡಿ ರಾಮೇಗೌಡನೆಂದೇ ಕರೆಯಲ್ಪಡುತ್ತಾನೆ ಈ ಬಡ್ಡಿಶೇಖಿಯ ಅಪ್ಪ, ಅಪ್ಪ-ಮಗನ ಬಡ್ಡಿಯ ಹೊಡೆತ, ಬಡ್ಡಿಯ ಹೆಸರಲ್ಲಿನ ಕುತಂತ್ರಗಳಿಗೆ ಹಾಸನದ ಬಡವರು, ಮಧ್ಯಮವರ್ಗದವರು ತತ್ತರಿಸಿ ಹೋಗುತ್ತಿದ್ದಾರೆ.

ಈ ಬಡ್ಡಿಶೇಖಿಯ ಕುತಂತ್ರಗಳು ಸಾಲ ಪಡೆದವರನ್ನು ದಿವಾಳಿ ಎಬ್ಬಿಸಿಬಿಡುತ್ತವೆ. ಸೆಟಲ್‌ಮೆಂಟ್ ಆದ ಚೆಕ್‌ಗಳನ್ನು ಹಿಂದಿರುಗಿಸದೇ, ಐದಾರು ವರ್ಷಗಳ ನಂತರ ಅವುಗಳ ಮೇಲೆ ಕೇಸ್ ಹಾಕತೊಡಗುತ್ತಾನೆ ಬಡ್ಡಿಶೇಖಿ. ಏಳು ವರ್ಷದ ಹಿಂದೆ ಕಲೀಮ್ ಪಾಷಾ ಎನ್ನುವವರಿಗೆ ಹತ್ತು ಸಾವಿರ ಸಾಲ ನೀಡಿ, ಅಡ್ವಾನ್ಸ್ ಚೆಕ್ ಪಡೆದಿದ್ದರು ತಂದೆ-ಮಗ. ನಂತರ ಕಲೀವ್ ಪಾಷಾ ಸಾಲ ತೀರಿಸಿದ ನಂತರವೂ ಚೆಕ್ ವಾಪಸ್ ಮಾಡಲೇ ಇಲ್ಲ ಈ ಬಡ್ಡಿ ಖದೀಮರು. 'ಇಲ್ಲ ಬಿಡು, ನಮ್ಮ ಹತ್ರಾನೇ ಇರುತ್ತೆ' ಎಂದು ಸಾಗಹಾಕುತ್ತಾ ಬಂದರು. ಕಲೀಮ್ ಪಾಷಾ ತಂಗಿಯ ಮದುವೆ ಹತ್ತಿರ ಬಂದಾಗ, ಚೆಕ್ ಹಿಡಿದು ದಾಳಿ ಇಟ್ಟುಬಿಟ್ಟಿತು ಅಪ್ಪ-ಮಗನ ಖದೀಮ ಜೋಡಿ. 'ಅಯ್ಯಯ್ಯೋ, ಏಕ್ ಕಲೀಮ್ ಪಾಷಾ ಸಾಲ ವಾಪಸ್ಸೇ ಮಾಡಲಿಲ್ಲ' ಎಂದು ಶುರುಹಚ್ಚಿಗೊಂಡು ಕಾಟ ಕೊಡಲಾರಂಭಿಸಿದವು. ಮೊದಲೇ ರೌಡಿ ನನ್ಮಕ್ಳು, ಇವರತ್ರ ಸಾಲ ಪಡೆದಿದ್ದೇ ತಪ್ಪಾಯ್ತು ಎಂದುಕೊಂಡ ಕಲೀಮ್ ಪಾಷಾ ಮತ್ತೆ 10 ಸಾವಿರ ರೂಪಾಯಿ ಕೊಟ್ಟು ಖೂಳರನ್ನು ಸಾಗಹಾಕಬೇಕಾಯ್ತು, ಅವತ್ತು ಸುಮ್ಮನೇ ಹೋದ ರಾಮೇಗೌಡ, ಮಗ ಬಡ್ಡಿಶೇಖಿ ಈಗ ಮತ್ತೆ ಹೊಸ ವರಾತ ಆರಂಭಿಸಿದ್ದಾರೆ. ಕಲೀಮ್ ಪಾಷಾ ಇನ್ನೂ 70 ಸಾವಿರ ರೂ. ಕೊಡಬೇಕಂತೆ! ಸದ್ಯಕ್ಕಿದು ಆಲೂರಿನ ಕೋರ್ಟ್‌ನ್ನಿಗೆ ಮುಟ್ಟಬಿಟ್ಟಿದೆ.

ಬಡ್ಡಿಶೇಖಿ ಮತ್ತವರಪ್ಪನಷ್ಟೇ ಅಲ್ಲದೇ, ಶೇಖಿಯ [illegible] ಗಿಡ್ಡಮ್ಮಳ ಹೆಸರಲ್ಲೂ ವ್ಯವಹಾರ ನಡೆಯುತ್ತದೆ. [illegible] ಸಾಲ ಪಡೆದೂ ದುಡ್ಡು ದುರಳಿಸಿದ ಮೇಲೂ [illegible] ಇಲಾಖೆಯ ದೌಲತ್ ಹುಸೇನ್‌ಗೆ ಇನ್ನೂ [illegible] ಕೊಡಬೇಕೆಂದು ಬೆದರಿಸತೊಡಗಿದರು. ಬಡ್ಡಿ [illegible] ಬೆದರಿಕೆಗಳಿಗೆ ಬೆಚ್ಚಿದ ದೌಲತ್ ಹುಸೇನ್ [illegible] ಗೆ ವರ್ಗಾ ಮಾಡಿಸಿಕೊಳ್ಳಬೇಕಾಯಿತು. ಆದರೆ [illegible] ಈ ಕುತ್ತಿ, ಶೇಖಿ ಅಲ್ಲಿಗೂ ಸುಮ್ಮನಾಗಲಿಲ್ಲ, [illegible] ಗೆರೆಯ ತಸ್ಲ ಮಾದ ಲಕ್ಷ್ಮಣಗೌಡನಿಂದ [illegible] ಗೆಯಲ್ಲಿ ಕೇಸ್ ಹಾಕಿಸಿ ದೌಲತ್ ಹುಸೇನ್



ಮಾಜಿ ಶಾಸಕ ಹನುಮೇಗೌಡ

ಎಸ್‌ಪಿ.ಗೆ ಆವಾಜ್!

ಬಡ್ಡಿಶೇಖಿಯ ತಂದೆ ಬಡ್ಡಿ ರಾಮೇಗೌಡ ಪ್ರತಿ ತಿಂಗಳ ಮೊದಲ ವಾರದಲ್ಲಿ ಸರ್ಕಾರಿ ಕಚೇರಿಗಳಿಗೆ ಭೇಟಿ ಹಾಕಿದ್ದೇ ಹಾಕಿದ್ದು. ಆ ಪರಿ ಸರ್ಕಾರಿ ನೌಕರರಿಗೆ ಸಾಲ ನೀಡಿವೆ ಈ ಬಡ್ಡಿ ಬದ್ಮಾಷ್‌ಗಳು. ಈ ಬಡ್ಡಿ ರಾಮೇಗೌಡ ಮೊದಲು ಪೊಲೀಸ್ ಇಲಾಖೆಯಲ್ಲಿ ಕಾನ್ಸಟೇಬಲ್ ಆಗಿದ್ದವನು, ನಿವೃತ್ತಿಯ ವೇಳೆಗೆ ಎಎಸ್‌ಐ ಆಗಿದ್ದ. ಆಗ ಎಸ್‌ಪಿಗೆ ಧಮಕಿ ಹಾಕಿ ಹಲ್ಲೆ ನಡೆಸಲು ಹೋಗಿ ಸುದ್ದಿ ಮಾಡಿದ್ದ. 1999 ರಲ್ಲಿ ವಜೀರ್ ಅಹ್ಮದ್ ಎಸ್.ಪಿ. ಆಗಿದ್ದಾಗ ಬಡ್ಡಿ ರಾಮೇಗೌಡನ ವಿರುದ್ಧ ಬಂದ ದೂರುಗಳಿಗೆ ಲೆಕ್ಕವಿಲ್ಲ, ಜನರ ಎನ್.ಎಸ್.ಸಿ. ಸರ್ಟಿಫಿಕೇಟ್‌ಗಳನ್ನು ಕಡಿಮೆ ಬೆಲೆಗೆ ಪಡೆದು ಅಂಚೆ ಇಲಾಖೆಯಲ್ಲಿ ಡ್ರಾ ಮಾಡಿಕೊಳ್ಳುತ್ತಿದ್ದ ರಾಮೇಗೌಡ, ಒಮ್ಮೆ ಸಿಕ್ಕುಬಿದ್ದಾಗ ಅಂಚೆಯವರ ಮೇಲೂ ಹಲ್ಲೆ ಮಾಡಿದ್ದ. ಧರ್ಮಯ್ಯ ಮತ್ತು ಲಾರಿ ಡ್ರೈವರ್ ಅಣ್ಣಾಜಿಗಳ ಮೇಲೆ ಹಲ್ಲೆ ಮಾಡಿದ್ದನ್ನು ಎಸ್.ಪಿ. ವಜೀರ್ ಅಹ್ಮದ್ ಪ್ರಶ್ನಿಸಿದ್ದೇ ತಡ, ಎಸ್.ಪಿ. ಮೇಲೆಯೇ ಎರಗಿತ್ತು ಈ ಕ್ರಿಮಿ. ಅವತ್ತೇ ಈ ಕ್ರಿಮಿ ಮತ್ತು ಅವನ ಮಗ ಇಬ್ಬರೂ ಕೇಸ್‌ನಲ್ಲಿ ಫಿಟ್ ಆಗಿದ್ದರು.

ಮುಂದೆ ಎಸ್.ಪಿ.ಗೆ. ಅವಾಜ್ ಹಾಕಿದ್ದನ್ನೇ ಅಸ್ತ್ರ ಮಾಡಿಕೊಂಡು ಬಡ್ಡಿದಂಧೆಯನ್ನು ರಾಜಾರೋಷವಾಗಿ ಮುಂದುವರೆಸಿದರು. 1992 ರಲ್ಲಿ ಗಲಾಟೆಯೊಂದರಲ್ಲಿ ಬಡ್ಡಿ ಶೇಖಿಯ ಮೇಲೆ ಕೇಸ್ (ನಂ. 439/92) ಹಾಕಲಾಗಿತ್ತು. ಸದ್ಯ ಶೇಖಿಯ ಮೇಲೆ ಸಿಒಡಿ ತನಿಖೆ ಆಗಬೇಕೆಂದು ಆದೇಶವಾಗಿದ್ದರೂ, ರಾಮೇಗೌಡನ ಪೊಲೀಸ್ ಲಿಂಕುಗಳಿಂದ ಅದು ಸಾಧ್ಯವಾಗಿಲ್ಲ.

ಅಪ್ಪ, ಮಗ ಇಷ್ಟು ಬೆಳೆಯಲು ಹಾಸನದ ಮಾಜಿ ಎಂಎಲ್‌ಎ ಹನುಮೇಗೌಡರೂ ಕಾರಣರಾಗಿದ್ದಾರೆ. ಹನುಮೇಗೌಡರು ಎಂಎಲ್‌ಎ ಆಗಿದ್ದಾಗ ಟ್ರಾನ್ಸ್‌ಫರ್ ದಂಧೆಯಲ್ಲಿ ಅಪ್ಪ, ಮಗ ತಿಂದು ತೇಗಿದರು. ವಿಜಯ ಮಲ್ಯನ ಪಾರ್ಟಿಗೆ ಹನುಮೇಗೌಡರು ಹಾರಿದಾಗ, ಬಳುವಳಿಯಾಗಿ ಬಂದ ಉಡುಗೊರೆಯಲ್ಲಿ ಹನುಮೇಗೌಡರಿಗೆ ಕಾರು ಮಾತ್ರ ಸಿಕ್ಕಿ, 50 ಲಕ್ಷ ಬಡ್ಡಿಶೇಖಿಯ ಪಾಲಾಗಿಬಿಟ್ಟಿತು.

ಹಾಸನದಲ್ಲಿ ಬಡ್ಡಿಗೆ ದುಡ್ಡು ಕೊಟ್ಟು ಜನರಿಗೆ ಕಿರುಕುಳ ನೀಡುತ್ತಿದ್ದ ಗ್ಯಾರಳ್ಳಿ ತಮ್ಮಯ್ಯ ಬರ್ಬರವಾಗಿ ಕೊಲೆಯಾಗಿ ಹೋದ. ಯಾವ ಭಯವಿಲ್ಲದೇ ಜನರನ್ನು ಪೀಡಿಸುತ್ತಿರುವ ರಾಮೇಗೌಡ, ಬಡ್ಡಿಶೇಖಿಗಳಿಗೆ ಕಡಿವಾಣ ಹಾಕಲಾರರೇ ಪೊಲೀಸಪ್ಪಗಳು?


-ವರದಿಗಾರ

ಬಾದಾಮಿ: ಸರ್ಕಾರಿ ಹೈಸ್ಕೂಲ್ ಕ್ಯಾನ್ಸಲ್

ಸದ್ದಿಲ್ಲದೆ ನುಂಗುವ ಪಟ್ಟಣಶೆಟ್ಟಿ

ಬಾದಾಮಿಗೆ ಮಂಜೂರಾಗಿದ್ದ ಒಂದು ಸರ್ಕಾರಿ ಹೈಸ್ಕೂಲನ್ನೇ ಕ್ಯಾನ್ಸಲ್ ಮಾಡಿ, 27 ವಿದ್ಯಾರ್ಥಿಗಳನ್ನು ಅತಂತ್ರ ಸ್ಥಿತಿಗೆ ದೂಡಿದ್ದಾನೆ ಗುಮ್ಮನಗುಸುಗ ಶೆಟ್ಟಿಯೊಬ್ಬ. ಈತ ಬಾದಾಮಿಯ ಶಾಸಕ ಎಂ.ಕೆ. ಪಟ್ಟಣಶೆಟ್ಟಿ. ಕಳೆದ ಬಾರಿಯ ಎಲೆಕ್ಷನ್ನಿನಲ್ಲಿ ಬರಬರನೇ ಚಡ್ಡಿ ತೊಟ್ಟು, ಸಂಬಂಧಿಕ ಜಗದೀಶ ಶೆಟ್ಟರ್‌ನನ್ನು ಪಟ್ಟಂತಾ ತಬ್ಬಿಕೊಂಡು ಬಾದಾಮಿಗೆ ಶಾಸಕನಾಗಿ ವಕ್ಕರಿಸಿಬಿಟ್ಟ ಈ ಮಹಾಶಯ ಮಹಾಗುಂಡಪ್ಪ ಪಟ್ಟಣಶೆಟ್ಟಿ.


ಬಿ.ಬಿ. ಚಿಮ್ಮನಕಟ್ಟಿ ಸಚಿವನಾಗಿದ್ದಾಗ ಬಾದಾಮಿಗೆ ಒಂದು ಹೈಸ್ಕೂಲ್ ಮತ್ತು ಜ್ಯೂನಿಯರ್ ಕಾಲೇಜು ಆರಂಭಿಸಬೇಕೆಂದು ವರದಿ ಬಂದಿತ್ತು. ತನ್ನ ಶಿಕ್ಷಣ ಸಂಸ್ಥೆಗಳಿಗೆಲ್ಲಿ ಪೆಟ್ಟು ಬೀಳುತ್ತೋ ಎಂದು ವರದಿಯನ್ನು ಮೂಲೆಗುಂಪು ಮಾಡಿದ್ದ ಚಿಮ್ಮನಕಟ್ಟಿ.



ಆದರೆ ಶಿಕ್ಷಣ ಇಲಾಖೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು ಈ ಅಕಾಡೆಮಿಕ್ ವರ್ಷದಿಂದ ಪ್ರೌಢಶಾಲೆ ಆರಂಭಿಸಿಯೇ ಬಿಟ್ಟಿತು. ಎಂ.ಎಲ್.ಎ. ಪಟ್ಟಣಶೆಟ್ಟಿಗೆ ಇದು ಕಿರಿಕಿರಿ! ಏಕೆಂದರೆ ಆತನವೂ ಶಿಕ್ಷಣ ಸಂಸ್ಥೆಗಳಿವೆ, ಆತನ ಶೆಟ್ಟಿ ಲಿಂಗಾಯತರವೂ ಶಿಕ್ಷಣ ಸಂಸ್ಥೆಗಳಿವೆ. ಆಗ ಶುರುಮಾಡಿದ ನೋಡಿ ಚಡ್ಡಿ ಪಟ್ಟಣಶೆಟ್ಟಿ ತನ್ನ ಕರಾಮತ್ತನ್ನು.... ತನ್ನ ಸಂಸ್ಥೆಯಲ್ಲೇ ಕೆಲಸಮಾಡುವ, ಅರೆಬರೆ ಚಡ್ಡಿ ಪತ್ರಕರ್ತರಿಂದ ಈ ಹೈಸ್ಕೂಲ್‌ನ್ನು ಹಳ್ಳಿಗೆ ಸ್ಥಳಾಂತರಿಸಿ ಎಂದು ಬರೆಯಿಸಿ, ಬಾದಾಮಿ ಪಕ್ಕದ ಅಡಗಲ್‌ಗೆ ಸ್ಥಳಾಂತರಿಸುವಲ್ಲಿ ಸಫಲನಾದ.

ಹಾಗೆ ಸ್ಥಳಾಂತರಿಸಿದ ನಂತರವೂ ಬಾದಾಮಿಯ ತನ್ನ ಶಾಲೆಗಳಿಗೆ ಹಳ್ಳಿ ಮಕ್ಕಳು ಬರುವುದು ಕಡಿಮೆಯಾಗಲಿದೆ ಎಂದುಕೊಂಡ ಪಟ್ಟಣಶೆಟ್ಟಿ, ಕೊನೆಯಲ್ಲಿ ಹೈಸ್ಕೂಲನ್ನೇ ರದ್ದು ಮಾಡಿಬಿಟ್ಟ. ಈಗ ಬಾದಾಮಿಯವರೇ ಆದ ವಿಧಾನ ಪರಿಷತ್ ಸದಸ್ಯ ಕಟ್ಟಿಮನಿ ಪಟ್ಟಣಶೆಟ್ಟಿಯ ಕ್ರಮ ವಿರೋಧಿಸಿ ಉಚ್ಚ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ತನ್ನದೇ ಬಸವೇಶ್ವರ ವಿದ್ಯಾವರ್ಧಕ ಸಂಘದ ಹೆಸರಿನಲ್ಲಿ ಜ್ಯೂನಿಯರ್ ಸೈನ್ಸ್ ಕಾಲೇಜು ಮಂಜೂರು ಮಾಡಿಸಿಕೊಂಡಿರುವ ಪಟ್ಟಣಶೆಟ್ಟಿ ಕಾಲೇಜು ಎಬ್ಬಿಸಲೇ ಇಲ್ಲ. ಸರಕಾರದ ಸೌಲಭ್ಯ ಪಡೆಯುವುದನ್ನು ಮಾತ್ರ ನಿಲ್ಲಿಸಲೇ ಇಲ್ಲ, ಸರ್ಕಾರಿ ಶಾಲೆ ಬೇಡವೆ ಬೇಡ ಎಂದು ಪಟ್ಟಣಶೆಟ್ಟಿ ತನ್ನ ಚೇಲಾಗಳಾದ ಬಿ.ಎಫ್. ಹುಲ್ಯಾಳ, ಸಂಗಪ್ಪ ಉಳ್ಳಾಗಡ್ಡಿ ಎಂಬುವವರ ಮೂಲಕ ಕೋರ್ಟಿಗೆ ಅಫಿಡವಿಟ್ ಹಾಕಿಸಿದ್ದಾನೆ.



ಚಿಮ್ಮನಕಟ್ಟಿ

ಶೆಟ್ಟಿಯ ಅಧ್ವಾನ ಶಾಲೆಗಳು

ತನ್ನ ರಾಜಕೀಯ ಎದುರಾಳಿ ಚಿಮ್ಮನಕಟ್ಟಿ ಶಿಕ್ಷಣ ಸಂಸ್ಥೆಗಳ ಮೂಲಕವೇ ವ್ಯಾಪಾರ ನಡೆಸುವುದನ್ನು ನೋಡಿ ಅದನ್ನು ಅನುಕರಿಸತೊಡಗಿದ ಶೆಟ್ಟಿ. 1982ರಲ್ಲಿ ಪ್ರಾರಂಭವಾದ ಮಧ್ಯ ವೀರಶೈವ ಶಿವಯೋಗ ಮಂದಿರ ಕೃಪಾ ಸಂಘದೊಳಗೆ ತೂರಿಕೊಂಡ ಪಟ್ಟಣಶೆಟ್ಟಿ, ಸಂಸ್ಥೆ ಸ್ಥಾಪಿಸಿದ ಮಾಳವಾಡರನ್ನು ಸೈಡಿಗೆ ತಳ್ಳಿ, ಚೇರ್ಮನ್ ಆಗಿ ದುಡ್ಡು ಎಣಿಸತೊಡಗಿದವನು ಇವತ್ತಿಗೂ ಎಣಿಸುತ್ತಲೇ ಇದ್ದಾನೆ. ಶೆಟ್ಟಿಯ ಪಾಲಿಗೆ ಶಿಕ್ಷಣವೂ ವ್ಯಾಪಾರವೇ. ಬಸವೇಶ್ವರ ವಿದ್ಯಾವರ್ಧಕ ಸಂಘ ತೆರೆದು ಸಿಕ್ಕಸಿಕ್ಕವರಿಂದ ಬೇಕು ಬೇಕಾದಷ್ಟು ದೇಣಿಗೆ ಎಬ್ಬಿಸುತ್ತಲೇ ಬಂದ. ರಾಮಕೃಷ್ಣ ಹೆಗಡೆಯ ಅವಧಿಯಲ್ಲಿ ಸಂಸ್ಥೆಗೆ ಸಿಕ್ಕಾಪಟ್ಟೆ ಅನುದಾನ ತಂದು ತಿಂದು ಹಾಕಿದ.

ಶೆಟ್ಟಿಯ ಶಾಲೆಯ ಫೀಸುಗಳೋ ಅಬ್ಬಬ್ಬಾ! ಬಾದಾಮಿಯ ಬಡವರು ಕನಸಲ್ಲೂ ಬೆಚ್ಚಿ ಬೀಳುತ್ತಾರೆ. LKGಯಿಂದ ಹಿಡಿದು SSLC ವರೆಗೆ ಭಯಂಕರ ಫೀಸುಗಳು. ಪ್ರತಿ ವರ್ಷ ಫೀಸು ಹೆಸರಲ್ಲೇ ಇವನ ಶಾಲೆಗೆ 6 ಲಕ್ಷ ರೂ. ಬಂದು ಬೀಳುತ್ತದೆ. ಮತ್ತೆ ಕಂಪ್ಯೂಟರ್ ಟ್ರೇನಿಂಗ್ ಹೆಸರಲ್ಲಿ ಪ್ರತಿ ತಿಂಗಳು ಒಂದೂವರೆ ಲಕ್ಷ ಕಲೆಕ್ಷನ್! ಕಂಪ್ಯೂಟರ್ ಟ್ರೈನಿಂಗ್ ಹೆಸರಲ್ಲಿ 2 ಲಕ್ಷ ಅನುದಾನ ಬೇರೆ ಎತ್ತಿದ್ದಾನೆ ಈ ಸೈಲೆಂಟ್ ನುಂಗಣ್ಣ. ಸಂಸ್ಥೆಯ ಆಡಿಟಿಂಗ್ ನಡೆದೇ ಇಲ್ಲ, ಎಲ್ಲ ಅಪರಾತಪರಾ ಲೆಕ್ಕಗಳೇ.

ಇವನ ಹ್ಯಾಂಡು ಕ್ಲೀನಂತೆ!

ಇದು ಬರೀ ಅಕ್ಷರ ಸೇವೆಯಲ್ಲಿ ನುಂಗಿದ ಹಣವಾಯ್ತು. ಅಭಿವೃದ್ಧಿ ಕಾರ್ಯಗಳ ಹೆಸರಲ್ಲಿ ಗೋಲ್‌ಮಾಲ್ ಮಾಡಿದ್ದು ಹೇಳಲು ಇನ್ನೊಂದು ವರದಿಯನ್ನೇ ಬರೆಯಬೇಕು.

ಇಷ್ಟೆಲ್ಲಾ ಆದರೂ ಈ ಶೆಟ್ಟಿ ತನ್ನದು ಕ್ಲೀನ್‌ಹ್ಯಾಂಡ್ ಎಂದೇ ಬೊಗಳುತ್ತಾನೆ. ಬಾಯಿಗೆಲ್ಲ ಸಗಣಿ ಮೆತ್ತಿದ್ದರೂ ಸಹ! ಕೆಲ ಚಡ್ಡಿ ಪತ್ರಕರ್ತರನ್ನು ಮುಂದೆ ಬಿಟ್ಟು ತಾಲ್ಲೂಕು ಕಚೇರಿಗಳ ಕಲೆಕ್ಷನ್ ಮಾಡಿಸುತ್ತಲೇ ಇದ್ದಾನೆ.

ಬಾದಾಮಿಗೆ ಮಂಜೂರಾದ ಸರ್ಕಾರಿ ಶಾಲೆಯನ್ನೇ ರದ್ದು ಮಾಡಿಸುವ ಈ ಚಡ್ಡಿ ಶಾಸಕ ಪಟ್ಟಣಶೆಟ್ಟಿಗೆ ಬುದ್ಧಿ ಬರುವಂತೆ ಕಾಣುತ್ತಿಲ್ಲ.

-ಮೇಘರಾಜ್

ಸಂಜೆ ಪೇಪರನವ್ನ ಹಗಲು ದರೋಡೆ

ಸಂಜೆ ಪೇಪರಿನವನೊಬ್ಬ ಯಾವ ಇಲಾಖೇಲಿ [illegible] ಸಿಗುತ್ತೆ ಎಂದು [illegible] ಇಂತಹವನ ಈ 'ಕೌಶಲ್ಯ'ವನ್ನು ಬಳಸಿಕೊಳ್ಳುತ್ತಿರುವವರು ಪಟ್ಟಣಶೆಟ್ಟಿಯ ಪತ್ನಿ [illegible] ಶಾಸಕರ ಮಾದರಿ ಶಾಲೆಯ SDMCಗೆ ಪತ್ರಕರ್ತನೇ ಅಧ್ಯಕ್ಷ... ಅಲ್ಲಿಗೆ ಮಕ್ಕಳ [illegible]


[illegible]

...ಯುವು ನಮ್ಮ ದೇಶದಲ್ಲಿ ಕಳೆದ ...ಗಳಿಂದ ತೀವ್ರ ಭಾವೋದ್ವೇಗವನ್ನು ...ಗಳನ್ನು ಸೃಷ್ಟಿಸಿರುವ ವಿಧ್ವಮೂಸ. ಇದೇ ...ಯವು ಇತ್ತೀಚಿನ ದಿನಗಳಲ್ಲಿ ನಮ್ಮ ಕರಾವಳಿ ...ದಾ ಒಂದು ಸ್ಫೋಟಕ ಸಂಗತಿಯಾಗಿ ...ವುದನ್ನು ನಾವಿಂದು ಕಾಣುತ್ತಿದ್ದೇವೆ. ...ದು ಇಷ್ಟೆಲ್ಲ ಭಾವೋದ್ವೇಗಕಾರಿ ಹಾಗೂ ...ಗತಿಯಾಗಿ ಪರಿಣಮಿಸಲು ಕಾರಣಗಳೇನು ...ು ನಾವೆಲ್ಲ ತಿಳಿದುಕೊಳ್ಳಬೇಕಾದ ಜರೂರಾದ ...

ಮಾಂಸಾಹಾರಿಗಳಾದ ಇಲ್ಲಿನ ದಲಿತರೂ ಆದಿವಾಸಿಗಳೂ ಪ್ರಾಚೀನಕಾಲದಿಂದ ಇಂದಿಗೂ ಗೋಮಾಂಸವನ್ನು ತಿನ್ನುವವರು ಎಂಬ ಐತಿಹಾಸಿಕ ಸತ್ಯವನ್ನು ಮರೆಮಾಚಿ, ಇಲ್ಲಿ ಗೋಮಾಂಸ ತಿನ್ನುವವರು ಬರೀ ಮುಸ್ಲಿಮರು ಮತ್ತು ಕ್ರೈಸ್ತರು ಮಾತ್ರ ಎಂಬಂತೆ ಬಿಂಬಿಸಿ, ಜನಸಾಮಾನ್ಯರನ್ನು ತಪ್ಪು ತಿಳಿವಳಿಕೆಗೆ ಒಳಪಡಿಸಲಾಗಿದೆ. ಗೋವಿನ ರಾಜಕೀಯವು ಇಲ್ಲಿ ಎಷ್ಟರಮಟ್ಟಿಗೆ ತೀವ್ರವಾಗಿದೆಯೆಂದರೆ ಮುಸ್ಲಿಮರು ಮತ್ತು ಕ್ರೈಸ್ತರು "ಹಿಂದೂ" ಗಳಿಗೆ ಪವಿತ್ರವೆನ್ನಲಾದ (ಆದರೆ ಅಸಲಿ ವಿಷಯ ಬೇರೆಯೇ ಇದ್ದು ಅದರ ಬಗ್ಗೆ ಮುಂದೆ ಪ್ರಸ್ತಾಪಿಸಲಾಗಿದೆ) ಗೋವನ್ನು ಕಡಿದು, ಕೊಂದು ಅದರ ಮಾಂಸ ತಿನ್ನುವವರು, ಹಾಗಾಗಿ ಅವರು ದುಷ್ಟರು ಮತ್ತು "ಹಿಂದೂ"ವಿರೋಧಿಗಳು ಎಂದು ಬಿಂಬಿಸಲಾಗಿದೆ. ಆ ಮೂಲಕ ಕೆಲವು ಅಮಾಯಕ ಜನರನ್ನು ಉದ್ರೇಕಗೊಳಿಸಿ, ಅವರನ್ನು ನೂರಾರು ವರ್ಷಗಳಿಂದ ಗೋವಿನ ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವ ಮುಸ್ಲಿಮರ ಮೇಲೆ ಮತ್ತು ಗೋಮಾಂಸವನ್ನು ತಯಾರಿಸುವ ಹೋಟೇಲುಗಳ ಮೇಲೆ ದಾಳಿ ನಡೆಸಲು ಛೂ ಬಿಡಲಾಗುತ್ತಿದೆ. ಈ ಒಳಸಂಚಿಗೆ ಕೆಲವು ಅಮಾಯಕರು ಬಲಿಯಾಗಿದ್ದಾರೆ. ಈ ಸುಳ್ಳುಗಳನ್ನು ನಂಬಿ ಅವರೆಲ್ಲ ತಮ್ಮ ಮನುಷ್ಯತ್ವವನ್ನೇ ಮರೆತು ಇತರ ಮನುಷ್ಯರನ್ನು ಹೊಡೆಯುವ, ಬಡಿಯುವ, ಬೆತ್ತಲು ಮಾಡುವ, ದೋಚುವ, ಸುಟ್ಟು ಕೊಲ್ಲಲೂ ಪ್ರಯತ್ನಿಸುವ ಅಮಾನವೀಯ ಕೃತ್ಯಗಳಲ್ಲಿ ತೊಡಗಿದ್ದಾರೆ.

ದುರದೃಷ್ಟವಶಾತ್ ಇಂದು ಏನಾಗಿದೆಯೆಂದರೆ ಕೆಲವು ದೇಶದ್ರೋಹಿ, ದುಷ್ಟ ಶಕ್ತಿಗಳು ನಮ್ಮ ಪುರಾತನ ಗ್ರಂಥಗಳಲ್ಲಿ ಉಲ್ಲೇಖವಾಗಿರುವ ಸತ್ಯವನ್ನು ಮರೆಮಾಚಿ, ಗೋವು ಒಂದು ಪವಿತ್ರ ಪ್ರಾಣಿ, ಅದನ್ನು "ಹಿಂದೂ"ಗಳು ಮಾತ್ರವಲ್ಲ ಇನ್ನಿತರರೂ ಪೂಜಿಸಬೇಕು, ಯಾರೂ ಗೋಮಾಂಸ ತಿನ್ನಕೂಡದು, ಗೋವಧೆಯನ್ನು ಎಲ್ಲರೂ ವಿರೋಧಿಸಬೇಕು ಹಾಗೂ ದೇಶಾದ್ಯಂತ ನಿಷೇಧಿಸಬೇಕು

ಈ ದೇಶದ ಮೂಲಗ್ರಂಥಗಳಾದ ವೇದ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು, ಸ್ಮೃತಿಗಳು, ಗೃಹ್ಯಸೂತ್ರಗಳನ್ನು ಪೂರ್ವಾಗ್ರಹಪೀಡಿತರಾಗದೇ ವಸ್ತುನಿಷ್ಠವಾಗಿ ಅವಲೋಕಿಸಿದರೆ ಗೋವುಗಳ ಮತ್ತು ಇತರ ಪ್ರಾಣಿಗಳ ಬಗ್ಗೆ ಅವುಗಳಲ್ಲಿ ಉಲ್ಲೇಖವಾಗಿರುವ ಸತ್ಯವನ್ನು ಕಂಡುಕೊಳ್ಳಬಹುದು.



'ಪವಿತ್ರ' ಗೋವು ಎಷ್ಟು ಸತ್ಯ ಮತ್ತು ಎಷ್ಟು ಮಿಥ್ಯ

ಎಂದು ವಿನಾಕಾರಣ ಗುಲ್ಲೆಬ್ಬಿಸಿ, "ಹಿಂದೂ"ಗಳನ್ನು "ಹಿಂದೂ"ಗಳಲ್ಲದ, ನಿಜವಾಗಿ ಇಲ್ಲಿನ ಮೂಲ... ಗಳಾದ, ಮೊಗವೀರರು, ಬಿಲ್ಲವರು, ಮುಗೇರರು ಇ... ಜನಗಳನ್ನು 'ಬ್ರೈನ್ ವಾಶ್' ಮಾಡಿ ಜನಪರವಾಗಿ... ಈ ಮನುಷ್ಯರನ್ನು 'ದನ'ಪರವಾಗಿ ಪರಿವರ್ತಿಸಿ... ಇದು ಈ ನಮ್ಮ ಕರಾವಳಿ ಜಿಲ್ಲೆಗಳ ದುರಂತ ...

ಇಲ್ಲಿಯ ಕೆಲವು ಮಠಾಧೀಶರುಗಳೂ ಗೋ... ಪಾವಿತ್ರ್ಯ ಮತ್ತು ಮಹಿಮೆಗಳನ್ನು ಕೊಂಡಾಡುತ್ತಾ ಇ... ಪವಿತ್ರವಾದ ಗೋವನ್ನು ಕಡಿದು ಅದರ ಮಾ... ತಿನ್ನುವವರಿಗೆ ಕರುಣೆಯೇ ಇಲ್ಲ, ಅವರುಗಳು ಮನು... ಅಲ್ಲ ಎಂಬಂತೆ ಬಿಂಬಿಸುತ್ತಾ ದುಷ್ಟ ಶಕ್ತಿಗಳಿಗೆ ಕು... ನೀಡುತ್ತಿದ್ದಾರೆ. ಇದರಿಂದಾಗಿ ಆ ದುಷ್ಟ ಶಕ್ತಿಗಳ ನಿಯ... ದಲ್ಲಿರುವ ಪುಂಡುಪೋಕರಿಗಳಿಗೆ ಇನ್ನಷ್ಟು ಉತ್ತೇ... ದೊರೆತಂತಾಗಿ, ಇನ್ನೂ ಹೆಚ್ಚು ಉತ್ಸಾಹದಿಂದ ... ಸಾಗಾಟ, ಗೋವಧೆ ತಡೆಗಳನ್ನು ಎಗ್ಗಿಲ್ಲದೇ ಮುಂದು... ಸುತ್ತಿದ್ದಾರೆ.

"ಭಾರತದಲ್ಲಿ ಚರಿತ್ರೆಯನ್ನು ಮಧ್ಯಮವ... ಜನಸಾಮಾನ್ಯರಿಗೋಸ್ಕರ ಜೀವಂತವಾಗಿ ಒಳ್ಳೆಯ ... ಭಾಷೆ ಹಾಗೂ ಸ್ಪಷ್ಟ ಶೈಲಿಯಲ್ಲಿ ಬರೆದವರೇ ... ಹೀಗೆ ಶ್ರದ್ಧಾಯುಕ್ತ ಹಾಗೂ ಸುಲಭ ಲಭ್ಯವಾದ ಇತಿ... ಮತ್ತು ಆತ್ಮಚರಿತ್ರೆಗಳು ಯಾವುದೇ ಪುಸ್ತಕದಂಗಡಿಗ... ಇಲ್ಲದಿರುವುದೇ ಈ ದೇಶದಲ್ಲಿ ಇಷ್ಟೊಂದು ಚಾ... ಕಟ್ಟುಕಥೆಗಳ ಹುಟ್ಟಿಗೆ ಮೂಲಕಾರಣ" ಎನ್ನುತ್ತಾರೆ ಇತಿಹಾಸ ತಜ್ಞ ವಿಲಿಯಂ ಡಾಲ್ರಿಂಪ್ಲ್. ಇನ್ನೊ... ಮುಖ್ಯವಾದ ವಿಷಯ ಏನೆಂದರೆ ನಮ್ಮ ದೇ... ಮೂಲಗ್ರಂಥಗಳಾದ ವೇದ, ಬ್ರಾಹ್ಮಣ, ಆರ... ಉಪನಿಷತ್ತು ಇತ್ಯಾದಿಗಳು ಮುಖ್ಯವಾಗಿ 'ಸಂ... ಭಾಷೆಯಲ್ಲಿ ಇರುವುದರಿಂದ ಹಾಗೂ ವಸ... ಅನುವಾದಗಳು ಅತ್ಯಲ್ಪವಾಗಿರುವುದರಿಂದ ... ಸಾಮಾನ್ಯರಿಗೆ ಅವುಗಳಲ್ಲಿರುವ ವಿಷಯಗಳ ಬಗ್ಗೆ ಸರಿ... ಮಾಹಿತಿ ಮತ್ತು ತಿಳಿವಳಿಕೆ ಸಾಧ್ಯವಾಗಿಲ್ಲ.

ಇದರಿಂದಾಗಿ ಆಗಿರುವ ಮುಖ್ಯ ದುರಂತವೆ... ಕೆಲವು ಮತಾಂಧ ಫ್ಯಾಸಿಸ್ಟ್ ಶಕ್ತಿಗಳು ಇದರ ದುರ್ಲಾಭ... ಪಡೆದು, ತಮ್ಮ ರಾಜಕೀಯ ದುರುದ್ದೇಶಕ್ಕಾಗಿ ಜನ... ದ್ವೇಷವನ್ನು ಹುಟ್ಟುಹಾಕಲು ಗೋವು ಎಂಬ ... ಪ್ರಾಣಿಯ ಬಗ್ಗೆ ಇಲ್ಲಸಲ್ಲದ ಸುಳ್ಳುಗಳನ್ನು ಹೇ... ಇದಕ್ಕೆ ಶಾಸ್ತ್ರಗ್ರಂಥಗಳ ಉದಾಹರಣೆಗಳನ್ನು ಕೊ... ಗೋವನ್ನು ಅನಗತ್ಯವಾಗಿ ದೈವೀಕರಿಸುತ್ತ ಇ... ಅಮಾಯಕ ಜನರನ್ನು ತಪ್ಪು ದಾರಿಗೆ ಎಳೆಯುತ್ತಿ...

ಈ ಫ್ಯಾಸಿಸ್ಟ್ ಶಕ್ತಿಗಳು ಇದಕ್ಕಾಗಿ ಯೋಜ...


ಕುಟುಂಬ ರಾಜಕೀಯಕ್ಕೆ ತಕ್ಕ ಉತ್ತರ!

ಈ ವಾರದ ಸಂಚಿಕೆಯಲ್ಲಿ 'ಗೂಂಡಾಗಿರಿ!' ಎಂಬ ಮುಖಪುಟದ ವರದಿ ಓದಿದೆ. ದೇವೇಗೌಡನ ಕಪಟ ನಾಟಕ, ಮಗ ಕುಮಾರನ ಕರಾಮತ್ತು, ದೇವೇಗೌಡನ ಮನೆ ಕೆಲಸದ ಆಳು ಚೆನ್ನಿಗಪ್ಪನ ಐನಾತಿ ಕೆಲಸಗಳು, ಇವೆಲ್ಲವನ್ನೂ ಕುರಿತು ಓದುತ್ತಿದ್ದರೆ, ಗೌಡರ ಕುಟುಂಬಕ್ಕೆ ಯಾವ ರೀತಿ ಉಗುಳಬೇಕೋ? ಗೊತ್ತಾಗಲಿಲ್ಲ, ಕುಟುಂಬ ರಾಜಕಾರಣ ಮಾಡುತ್ತಾ ಮೊಸಳೇ ಕಣ್ಣೀರು ಹಾಕುವ ದೇವೇಗೌಡನಿಗೆ ಧಿಕ್ಕಾರ!

-ರಮಜಾನ ಕೆ. ಕೊರ್ತಿ, ಬಾದಾಮಿ

ಈಗ ನಡೆದ ಉಪಚುನಾವಣೆ ಯಕಶ್ಚಿತ್ ಉಪಚುನಾವಣೆಯಾಗಿರಲಿಲ್ಲ, ಭೀಕರ ಕಾಳಗದಂತಿತ್ತು, ಜಾತ್ಯತೀತ+ಬಿಜೆಪಿಯ ಮತ್ತು ಕಾಂಗ್ರೆಸ್ಸಿನ ಅತಿರಥ ಮಹಾರಥರೆಲ್ಲ ಅಖಾಡಕ್ಕಿಳಿದಿದ್ದರು.

ಮುಖ್ಯವಾಗಿ ನಾಯಕ ನೆನೆಸಿಕೊಂಡ ರಾಜ್ಯದ ಮುಖ್ಯಮಂತ್ರಿ ಕುಮಾರಸ್ವಾಮಿ ಈ ಬಗ್ಗೆ ತೊಡೆ ತಟ್ಟಿ ನಿಲ್ಲಬೇಕಿತ್ತೇ? ಈತನಿಗೆ ಕಿಂಚಿತ್ತಾದರೂ ಸಂಯಮ ಪ್ರದರ್ಶಿಸಲು ಯಾರೂ ಹೇಳಲಿಲ್ಲವೇಕೆ? ತೋಳ್ಬಲ-ಹಣಬಲವೆರಡೂ ಚುನಾವಣೆಯ 'ಮ್ಯಾಜಿಕ್'ನಲ್ಲಿ ಕಸದಬುಟ್ಟಿಗೆ ಸೇರಿದ ಇತಿಹಾಸದ ಅರಿವಿಲ್ಲದೆಹೋಯ್ತೆ? ಅಧಿಕಾರದ ಅಮಲು ನೆತ್ತಿಗೇರಿ ಅಲ್ಲಿರಬೇಕಾದ ಬುದ್ಧಿ ಜಾಗ ಖಾಲಿ ಮಾಡಿತೇ?



ಮತ ಎಣಿಕೆಯ ನಂತರ ಜನಕ್ಕೆ ತೋರಲು ಲಜ್ಜೆರಹಿತ ಮುಖವಷ್ಟೇ ಉಳಿದಿದೆ ನಮ್ಮ ಮುಖ ಮಂತ್ರಿಗೆ!

-ಅನ್ಸು, ಕೊಳ್ಳೇಗಾಲ


ಲಂಕೇಶ್‌ನಲ್ಲಿ ಮೂಡಿಬಂದ ಧರ್ಮಯುದ್ಧವೆಂಬ ಕರ್ಮಕಾಂಡದಲ್ಲಿ ಕುಮಾರನ ಗೂಂಡಾಗಿರಿ, ಪಿತ್ಥ ದೇವೇಗೌಡನ ಕಣ್ಣೀರಿನ ಹೊಳೆ ಓದಿದ ಓದುಗರಿಗೆ ಡಾ. ರಾಜ್‌ರವರ "ಅಳುವುದೋ ನಗುವುದೋ ನೀವೇ ಹೇಳಿ" ಎಂಬ ಹಾಡು ನೆನಪಾಗುತ್ತೆ, 'ಏನೇ ಬರಲಿ ಒಗ್ಗಟ್ಟಿರಲಿ' ಎಂಬ ಕೂಗಿನಿಂದ ಪ್ರೇರಿತರಾಗಿ ಸ್ವಾತಂತ್ರ್ಯ ... ಧುಮುಕಿ ಸ್ವಾತಂತ್ರ್ಯ ರೂಪಿಸಿದ್ದು ... ಕತೆ. ಇಂದಿನ ನಮ್ಮ ಮಾಜಿ ಪ್ರಧಾನಿ ದೇವೇಗೌಡ ತನ್ನ ಸ್ವಪ್ರತಿಷ್ಠೆ, ಹಣ, ಅಸ್ತಿಗೋಸ್ಕರ ಗೋಸುಂಬೆ ಕಣ್ಣೀರು ಸುರಿಸುತ್ತಾ ಗಾಂಧಿ ಪ್ರತಿಮೆಯ ಮುಂದೆ ಕುಕ್ಕರಲು ಧರಣಿ ಕುಳಿತರು. ಯಾರಿಗೋಸ್ಕರ ಗೌಡ್ರೆ? ನಿಮ್ಮ ಮಗನ್ನ ಮುಖ್ಯಮಂತ್ರಿ ಮಾಡಿದ್ದು ಆಯ್ತು, ಒಬ್ಬರಲ್ಲ ಇಬ್ಬರು ಮಂತ್ರಿ ಆಗಿದ್ದಾರೆ. ನಿಮ್ಮ ಸೊಸೆಯಂದಿರು ಶಾಪಿಂಗ್ ಮಾಡಿದಂಗೆ ಕೋಟಿಗಟ್ಟಲೆ ಭೂಮಿ ಆಸ್ತಿ ಖರೀದಿಸಿದ್ದಾರೆ. ನಿಮ್ಮ ಮೊಮ್ಮಕ್ಕಳು ಕೋಟಿ ಕೋಟಿ ರೂಪಾಯಿ ಕಾರಲ್ಲಿ ಓಡಾಡ್ತಾರೆ. ಇನ್ನು ಯಾಕೆ ಆ ಗೋಸುಂಬೆ ಕಣ್ಣೀರು?

-ಮುತ್ತಣ್ಣ ಪೂಜಾರ್, ಕಡಲಬಾಳು

ಡಿಸೆಂಬರ್ 6ರ ಸಂಚಿಕೆಯಲ್ಲಿನ ಡಾ. ಜಿ.ಎಸ್.ಎಸ್. ಅವರ ಕವನ 'ಅಗ್ನಿಪರ್ವ' ಮನ ಮಿಡಿಯಿತು. ವಾಸ್ತವಿಕ ಪ್ರಜ್ಞೆ ತಂದುಕೊಳ್ಳಲು ಕರೆ ನೀಡಿರುವ ಅವರ ಕರುಳತನಕ್ಕೆ ನನ್ನ ಅಭಿನಂದನೆಗಳು. ಕೋಮುಸೌಹಾರ್ದತೆಗೆ ಅವರ ನುಡಿಗಳು ಹೃದಯಸ್ಪರ್ಶಿ ಯಾಗಿವೆ.

-ಅಕ್ಕರೆ ಸಿ. ಕಾಲಿಮಿರ್ಚಿ, ಕೊಪ್ಪಳ

ಡಿಸೆಂಬರ್ 6ರ ಸಂಚಿಕೆಯಲ್ಲಿ ಪ್ರಕಟಗೊಂಡ ನನ್ನ ಮೆಚ್ಚಿನ ಕವಿ ಜಿಎಸ್‌ಎಸ್‌ರ 'ಅಗ್ನಿಪರ್ವ' ಕವನವನ್ನು ಅದೆಷ್ಟು ಬಾರಿ ಓದಿದೆನೋ? ಎಲ್ಲ ಸಾಲುಗಳು, ವಿಷಾದ ಮೆತ್ತಿಕೊಂಡಂತಿದ್ದು ಅಲ್ಲಲ್ಲಿ ನಿಂತು 'ಅನುಭವಿಸಿ' ಓದಿದಂತಾಗುತ್ತದೆ. ಆದರಲ್ಲೂ, (ಉರಿವ ಬೆಂಕಿಗೆ)... ಎಣ್ಣೆ ಹೊಯ್ಯುತ್ತ, ಕೂತ ಮಹನೀಯರೆ, ಮಾತನಾಡಿಸಲೆಂದು ಬಂದರೆ, ನಿಮಗೆ ಮುಖವೇ ಇಲ್ಲ; ಬರೀ ಮುಖವಾಡ! ಸಾಧ್ಯವೇ ಸಂವಾದ ಮುಖವಾಡಗಳ ಜೊತೆಗೆ?.... "ಇನ್ನು ಏನಾಗಬೇಕಾಗಿದೆ ಈ ಮನುಕುಲಕ್ಕೆ? ... ವಿಷಾದ




ಮಡುಗಟ್ಟಿದಂತೆ ಎನಿಸುತ್ತದೆ... ವೇದ, ಖುರಾನು, ಬೈಬಲ್ಲು ನಿಂದಾಚೆ, ಬಯಲ ಬೆಳಕಿನ ಕೆಳಗೆ ಬದುಕುವುದನ್ನು ಇನ್ನಾದರೂ ಕಲಿಯುವುದು ಹೇಗೆ? ಹೌದು... ಹೇಗೆ? ಎಂಬ ಚಿಂತೆ, ವಿಷಾದ ಕೆಲಸಮಯ ನನ್ನನ್ನು ಮೌನವಾಗಿಸಿತು.

ಈ ಹಿಂಸಾತ್ಮಕ 'ಅಬ್ಬರ'ದಲ್ಲಿ ಕವಿಯ ಈ ಕೂಗು ಕೇಳೀತೆ....?

'ಕಂಡ ಹಾಗೆ' ಓದಿ ಒಂದಿಷ್ಟು ಸಮಾಧಾನವಾಯ್ತು. ಕನಿಷ್ಠ ಸಾರಸ್ವತಲೋಕದ ಕೆಲವಷ್ಟಾದರೂ ಶ್ರೇಷ್ಠರು ಯಥಾರ್ಥವಾಗಿ ಚಿಂತಿಸುತ್ತಾ ಸೌಹಾರ್ದತೆಗೆ ಸಹಕರಿಸುತ್ತಿದ್ದಾರಲ್ಲ... ಎಂಬುದು ಉರಿಬಿಸಿಲಿನ ಧಗೆಯಲ್ಲಿ ತಂಪನೆಯ ತಂಗಾಳಿಯ ಸಮಾಧಾನ ನೀಡಿತು.

-ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ನಿಮ್ಮ ಪತ್ರಿಕೆ ಓದುಗ ಹಾಗೂ ಅಭಿಮಾನಿಯಾದ ನಾನು ಈ ಮೂಲಕ ತಿಳಿಸುವುದೇನೆಂದರೆ ಕಳೆದ ಸಂಚಿಕೆಯಲ್ಲಿ ಆಲ್ಕೈಮಣಿಯಿಂದ ಮಾನಭಂಗಕ್ಕೀಡಾದ ಇಬ್ಬರು ಸಹೋದರಿಯರನ್ನು ಮನೆಯಲ್ಲಿ ಇಟ್ಟು ವಿದ್ಯೆ ಆಶ್ರಯ ಕೊಟ್ಟು ಅವರಿಗೆ ಮದುವೆ ಮಾಡಿಸಿದ ಮಾಜಿ ಪೊಲೀಸ್ ಅಧಿಕಾರಿಯವರ ಮಾನವೀಯತೆಯನ್ನು ಓದಿ ತುಂಬಾ ಸಂತೋಷವಾಯಿತು. ಮಾತೆತ್ತಿದರೆ ಎನ್‌ಕೌಂಟರ್ ಮಾಡಿ ಹೆಸರುವಾಸಿಯಾಗಿದ್ದ ಅಜೀಂ ಈ ಕಾರ್ಯ ಮಾಡಿದ್ದರಿಂದ ನಿಜವಾದ ಹೀರೋ ಆಗಿದ್ದಾರೆ. ಜನಸೇವೆ ಜನಾರ್ದನ ಸೇವೆ ಎಂದು ತೋರಿಸಿದ್ದಾರೆ.



-ವಿ. ಭಾಸ್ಕರ್, ಬೆಂಗಳೂರು

ನಿಮ್ಮೆಲ್ಲರೊಂದಿಗೆ ಚಿಕ್ಕಮಗಳೂರಿನಲ್ಲಿ ಸೌಹಾರ್ದ ಯಾತ್ರೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಿದ್ದರೂ, ನಿಮ್ಮ ಹಾಗೂ ಎಲ್ಲಾ ಕೋಮು ಸೌಹಾರ್ದಿಗಳ ಬಂಧನವನ್ನು ಖಂಡಿಸಿ ನಮ್ಮೂರಿನಲ್ಲೇ ಪತ್ರಿಕೆ ಹೇಳಿಕೆಯನ್ನು ನನ್ನ ಗೆಳೆಯರೊಡಗೂಡಿ ಸೇರಿದ್ದೆ. ಅವುಗಳ ಪ್ರತಿಯನ್ನು ನಿಮಗಾಗಿ ಕಳಿಸಿದ್ದೇನೆ. ನನ್ನಂತಹವರ ಬೆಂಬಲ ಎಂ... ಸೌಹಾರ್ದಿಗಳ, ಸಂವಿಧಾನದ ಪರವಾಗಿಯೇ ಇದ... ಎಂಬುದರ ದಾಖಲೆಯಾಗಿ ಇವುಗಳನ್ನು ಕಳಿಸಿದ್ದೆ...

ಚಾಮುಂಡೇಶ್ವರಿ ಕದನ ಮುಗಿದಿದೆ. ಸಜ್ಜನರ ಕ... ಮೀರಿದ ಅಪಾವಿತ್ರ್ಯ ಹಣ-ಹೆಂಡದ ಹೊಳೆ... ಎಲ್ಲರೂ ಪಕ್ಷಾತೀತವಾಗಿ ಹರಿಸಿದ್ದಾರೆ. ಅದರ ... ಮಾತನಾಡಲೂ ಹೇಸಿಗೆ ಆಗುತ್ತದೆ. ಅದರ... ಸಮಾಧಾನದ ವಿಷಯವೇನೆಂದರೆ, ಲಂಕೇಶರ ಆತ್ಮ... ರುವ ತಮ್ಮ ಇಳಿವಯಸ್ಸಿನಲ್ಲಿಯೂ ಚೇತನಶೀಲರಾ... ಕೆ. ರಾಮದಾಸ್‌ರ ಆದಿಯಾಗಿ ಪತ್ರಿಕೆಯ ಆಶಯ... ಇಂದಿಗೂ ಬದ್ಧರಾಗಿರುವ ಅನೇಕರು ಮತ್ತು 'ಅಹಿಂ... ಈ ಅನೇಕರಿಗೆ ಸಿದ್ಧರಾಮಯ್ಯರ ಗೆಲುವು ... ಮಟ್ಟಿಗಾದರೂ ಸಂತಸ ತಂದಿದೆ. ಅವರ ಗೆಲು... ಕರ್ನಾಟಕದ ಕರಾವಳಿ ಹಾಗೂ ಬಾಬುಬುಡನ್‌ಗಿರಿ... ಕೋಮುದಳ್ಳುರಿಗೆ ನೂಕುತ್ತಿರುವ ಕೋಮು... ಗಳಿಗೆ-ಜಾತಿವಾದಿಗಳಿಗೆ ಎಚ್ಚರಿ... ಗಂಟೆಯಾಗಲಿ ಎಂದು ಬಯಸು...

-ದಾದಾ ಖಲಂದ... ಹಿರಿಯ...

ನವೆಂಬರ್ 26 ರಂದು ಕರ್ನಾಟಕ ಕೋ... ಸೌಹಾರ್ದ ವೇದಿಕೆ ಬೆಂಗಳೂರಿನಲ್ಲಿ ಆಯೋಜ... ರ್‍ಯಾಲಿಯ ಬಗ್ಗೆ ವಿಜಯ ಕರ್ನಾಟಕ ಪತ್ರಿಕೆ ಯಾ... ವರದಿ ಮಾಡದೆ ತನ್ನ ಚೆಡ್ಡಿ ಬುದ್ಧಿ ತೋರಿಸಿದೆ. ... ಪತ್ರಿಕೆ ರಾಜ್ಯದ ಓದುಗ ಜನತೆಗೆ ಮಾಡಿದ ದ್ರೋ... ಇದು. ಕೇವಲ ಚೆಡ್ಡಿಗಳ ಮತ್ತು ಮನುವಾದದ ಲೇ... ಪ್ರಕಟಿಸಲು ಮುಂದಾಗುವ ಪತ್ರಿಕೆ ಈ ರಾಜ್ಯದ ಸೌಹಾ... ಬಯಸುವ ರ್‍ಯಾಲಿಯ ಬಗ್ಗೆ ವರದಿ ಮಾಡದೆ ... ತೋರಿಸಿದೆ.

ಕೋಮುಸೌಹಾರ್ದ ವೇದಿಕೆಯ ಎಲ್ಲಾ ಜ... ಮತ್ತು ಮಾನವಪರ ಕಾರ್ಯಕ್ರಮಗಳಿಗೆ ವೇದಿಕೆಯೊ... ಎಲ್ಲಾ ಜಾತ್ಯತೀತ ಮನಸ್ಸುಗಳು ಬೆಂಬಲವಿರುತ್ತದೆ. ... ಬೆಂಬಲವೂ ಸಹ.

-ಬಾಬು ಮತ್ತು ಸುಲೈಮಾ... ಚಿಕ್ಕಮಗಳ...

ನಾನಾ ಕಾರಣಗಳಿಂದ ಅನೇಕ ದಿನಗಳ...

ನನ್ನ ಸೋಲಿಸಲು ೧೦೦ ಕೋಟಿ ಖರ್ಚು ಮಾಡಿದ್ದಾರೆ, ಜಾತಿ ರಾಜಕೀಯದ ವಿಷ ಬಿತ್ತಲು ಯತ್ನಿಸಿದ್ದಾರೆ-ಸಿದ್ದು

ವ್ಯವಸ್ಥಿತವಾದ ಷಡ್ಯಂತ್ರಕ್ಕೆ ಅನುಗುಣವಾಗಿ, ಕ್ರೈಸ್ತರ ವಿರುದ್ಧ ಕಾರ್ಯಾಚರಿಸಲು ಮತಾಂತರ ಎಂಬ ವಿಷಯವನ್ನೂ, ಮುಸ್ಲಿಮರ ವಿರುದ್ಧ ಕಾರ್ಯಾಚರಿಸಲು ಗೋ ಸಾಗಾಟ ಎಂಬ ವಿಷಯವನ್ನೂ ಹುಟ್ಟುಹಾಕಿವೆ. ಈ ದುರುದ್ದೇಶಪೂರಿತ ಕಾರ್ಯತಂತ್ರಗಳಿಗೆ ಪೂರಕವಾಗಿ, ಇದಕ್ಕೆ ಪರೋಕ್ಷವಾಗಿ ಕುಮ್ಮಕ್ಕು ನೀಡುತ್ತಿರುವ ಕೆಲವು "ಹಿಂದೂ" ಮಠಾಧೀಶರು, ಸ್ವಾಮಿಗಳು, ಸಾಧುಸಂತರು ಮತ್ತು ಸಮೂಹ ಮಾಧ್ಯಮಗಳ ಒಂದು ವಿಭಾಗವನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಗುತ್ತಿದೆ.

ಗೋವಿನ ಇತಿಹಾಸವೇನು?

ಈ ದೇಶದ ಮೂಲಗ್ರಂಥಗಳಾದ ವೇದ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು, ಸ್ಮೃತಿಗಳು, ಗೃಹ್ಯಸೂತ್ರಗಳನ್ನು ಪೂರ್ವಾಗ್ರಹಪೀಡಿತರಾಗದೇ ವಸ್ತುನಿಷ್ಠವಾಗಿ ಅವಲೋಕಿಸಿದರೆ ಗೋವುಗಳ ಮತ್ತು ಇತರ ಪ್ರಾಣಿಗಳ ಬಗ್ಗೆ ಅವುಗಳಲ್ಲಿ ಉಲ್ಲೇಖವಾಗಿರುವ ಸತ್ಯವನ್ನು ಕಂಡುಕೊಳ್ಳಬಹುದು. ಋಗ್ವೇದವಂತೂ ದನಕರುಗಳ ಸಂಪತ್ತು (ಆ ಕಾಲದಲ್ಲಿ ಧನ ಇರಲಿಲ್ಲ; ದನ ಮುಂತಾದ ಜಾನುವಾರುಗಳೇ ಸಂಪತ್ತು ಆಗಿತ್ತು), ಜಾನುವಾರುಗಳಿಗಾಗಿ ನಡೆದ ದಾಳಿ, ಲೂಟಿಗಳ ವಿವರಗಳಿಂದ ತುಂಬಿ ಹೋಗಿದೆ. ಆ ಕಾಲದಲ್ಲಿ ಹಸುಗಳೇ ಜೀವನದ ಮುಖ್ಯ ಆಧಾರವಾಗಿದ್ದು ಗೋಸಂಪತ್ತಿಗಾಗಿ ಯುದ್ಧಗಳು ನಡೆಯುತ್ತಿದ್ದುವು. ಋಗ್ವೇದದಲ್ಲಿ ಯುದ್ಧವನ್ನು "ಗವಿಷ್ಠಿ" ಎಂದರೆ ಹಸುಗಳನ್ನು ಹುಡುಕುವುದು ಎಂದೇ ಕರೆಯಲಾಗಿದೆ.

ವೈದಿಕ ಮತದವರಿಗೆ ಗೋಮಾಂಸವು ಇಂದು ವರ್ಜ್ಯವಾಗಿದ್ದರೂ ಪ್ರಾಚೀನಕಾಲದಲ್ಲಿ ಹಾಗಿರಲಿಲ್ಲ. ಸುಮಾರು ಕ್ರಿ.ಶ. ಒಂದು, ಎರಡನೇ ಶತಮಾನಗಳವರೆಗೂ ಈ ವೈದಿಕರು ಮಾಂಸಾಹಾರಿಗಳಾಗಿದ್ದು, ಆಡು, ಕುದುರೆ, ಹಂದಿ, ಎಮ್ಮೆ, ಕೋಣ, ಗೋವು ಮುಂತಾದ ಪ್ರಾಣಿಗಳ ಮಾಂಸವನ್ನು ತಿನ್ನುತ್ತಿದ್ದರು. ಹಾಲು ಕರೆಯುವ ಹಸುಗಳು ಮಾತ್ರ ಅವಧ್ಯವಾಗಿದ್ದು ಇತರ ಎಲ್ಲಾ ಬಗೆಯ ಗೋಮಾಂಸವನ್ನು ಭಕ್ಷಿಸುತ್ತಿದ್ದರು ಎಂಬ ಸತ್ಯವು ಋಗ್ವೇದ ಇತ್ಯಾದಿ ಪುರಾತನ ಗ್ರಂಥಗಳಲ್ಲಿ ಉಲ್ಲೇಖವಾಗಿದೆ.

ವೇದಕಾಲದಲ್ಲಿದ್ದ ಅಡುಗೆ ಊಟಗಳ ಪದ್ಧತಿ ಹೇಗಿತ್ತೆಂದರೆ ಪ್ರಾಣಿಗಳನ್ನು ಕೊಂದು, ಬೆಂಕಿ(ಅಗ್ನಿ)ಯಲ್ಲಿ ಬೇಯಿಸಿ, ಒಂದು ಭಾಗವನ್ನು ದೇವತೆಗಳಿಗೆ ನೈವೇದ್ಯವಾಗಿ ಅರ್ಪಿಸಿ, ಉಳಿದದ್ದನ್ನು ಎಲ್ಲರೂ ಭಕ್ಷಿಸುತ್ತಿದ್ದರು; ಈ ಪದ್ಧತಿ ಅಥವಾ ಕ್ರಮವನ್ನು 'ಯಜ್ಞ' ಎಂದು ಕರೆಯಲಾಗುತ್ತಿತ್ತು. ಕ್ರಮೇಣ ರಾಜರು, ರಾಜವಂಶಗಳು ಉಂಟಾದಾಗ, ರಾಜರು ಈ ಯಜ್ಞಗಳನ್ನು ಬೃಹತ್ ಗಾತ್ರದಲ್ಲಿ ನಡೆಸತೊಡಗಿ ಅವುಗಳನ್ನು ಯಾಗಗಳೆಂದು ಕರೆದರು. ಇವುಗಳಲ್ಲಿ "ಅಶ್ವಮೇಧ", "ರಾಜಸೂಯ" ಮುಂತಾದ ಮಹಾಯಾಗಗಳು ಮುಖ್ಯವಾಗಿದ್ದವು. ಅಲ್ಲದೆ ಕಾಮ್ಯೇಷ್ಟಿಗಳೆಂಬ ಚಿಕ್ಕಪುಟ್ಟ ಯಜ್ಞಗಳನ್ನೂ ನಡೆಸಲಾಗುತ್ತಿತ್ತು. "ಗೋಸವ", ಅಂದರೆ ಗೋವುಗಳ ಬಲಿಯು, ಪ್ರತೀ ಯಾಗದ ಒಂದು ಅವಿಭಾಜ್ಯ ಅಂಗವಾಗಿತ್ತು. "ಪಂಚ ಶರದೀಯ ಸವ", "ಪಶುಬಂಧ", "ಶೂಲಗಾವ", "ಅತಿರಾತ್ರ" ಇತ್ಯಾದಿ ಯಜ್ಞಗಳು ಗೋವಧೆಗಾಗಿಯೇ ಮೀಸಲಾಗಿದ್ದವು. ಕುದುರೆ, ಆಡು, ಹಂದಿ, ಗೋವು ಮುಂತಾದ ಪ್ರಾಣಿಗಳನ್ನು ಬಲಿಕೊಡಲಾಗುತ್ತಿತ್ತು. ಐತ್ತರೇಯ, ತೈತ್ತಿರೀಯ, ಗೋಪಥ, ಶತಪಥ ಮುಂತಾದ ಬ್ರಾಹ್ಮಣಗಳಲ್ಲಿ ಹಾಗೂ ಧರ್ಮಸೂತ್ರಗಳಲ್ಲಿ ಈ ಯಜ್ಞಗಳ ವಿವರಗಳು ದೊರಕುತ್ತವೆ.

ಉದಾಹರಣೆಗೆ


ಶತಪಥ ಬ್ರಾಹ್ಮಣವು ದನ, ಕರು, ಕುದುರೆ, ಹಂದಿ ಇತ್ಯಾದಿಗಳ ಆಹುತಿಗೆ ಸಂಬಂಧಿಸಿದ ಕಟ್ಟುಪಾಡುಗಳ ವಿವರಗಳನ್ನು ಕೊಡುತ್ತದೆ ಹಾಗೂ ಆಹುತಿಗೆ ಅನರ್ಹವಾದ ಆನೆ, ಒಂಟೆ, ಗೌರ (ಒಂದು ಬಗೆಯ ಎಮ್ಮೆ) ಇತ್ಯಾದಿಗಳನ್ನು ಪಟ್ಟಿ ಮಾಡುತ್ತದೆ.

ಬೃಹದಾರಣ್ಯಕೋಪನಿಷತ್ ಮುಂತಾದ ಉಪನಿಷತ್ತುಗಳಲ್ಲಿಯೂ ಗೋಮಾಂಸ ಭಕ್ಷಣೆಯ ಬಗ್ಗೆ ಹೇಳಲಾಗಿದೆ.

ಋತ್ವಿಜರು, ಆಚಾರ್ಯರು, ರಾಜರು, ಮದುವೆಯ ಗಂಡು, ವೇದಾಧ್ಯಯನ ಮುಗಿಸಿ ಮನೆಗೆ ಮರಳಿದ ಮಕ್ಕಳು ಇತ್ಯಾದಿ ಅಪರೂಪದ ಅತಿಥಿಗಳಿಗೆ ನೀಡಬೇಕಾದ ಸತ್ಕಾರಕ್ಕೆ 'ಮಧುಪರ್ಕ'ವೆಂಬ ಹೆಸರಿದ್ದು, ಈ ಸಮಾರಂಭದ ಭೋಜನದಲ್ಲಿ ಗೋಮಾಂಸವು ಅತ್ಯಗತ್ಯವೆಂದು ಆಶ್ವಲಾಯನ ಮೊದಲಾದ ಗೃಹ್ಯಸೂತ್ರಗಳಲ್ಲಿ ವಿಧಿಸಲಾಗಿದೆ. ಯಜ್ಞ ಯಾಗಾದಿಗಳಲ್ಲಿ ದೇವತೆಗಳ ತೃಪ್ತಿಗಾಗಿ ಗೋಮಾಂಸದ ಭಕ್ಷ್ಯಗಳನ್ನು ತಯಾರಿಸಲಾಗುತ್ತಿದ್ದರೆ 'ಮಧುಪರ್ಕ'ದಲ್ಲಿ ಇದನ್ನು ಅತಿಥಿಗಳ ಪ್ರೀತ್ಯರ್ಥವಾಗಿ ಮಾಡಲಾಗುತ್ತಿತ್ತು. ಹೀಗಾಗಿಯೇ ಸಂಸ್ಕೃತದಲ್ಲಿ ಅತಿಥಿಗೆ 'ಗೋಘ್ನ' ಎಂಬ ಪರ್ಯಾಯ ಹೆಸರೂ ಇದೆ.

ಮನುಸ್ಮೃತಿ(ಸುಮಾರು ಕ್ರಿ.ಶ. 2ನೆ ಶತಮಾನ)ಯಲ್ಲಿ ಯಾವ ಪ್ರಾಣಿಗಳ ಮಾಂಸ ತಿನ್ನಬಹುದು, ಯಾವ ಪ್ರಾಣಿಗಳ ಮಾಂಸ ನಿಷಿದ್ಧ ಎಂಬುದನ್ನು ವಿವರಿಸಲಾಗಿದೆ; ನಿಷಿದ್ಧ ಮಾಂಸಗಳ ಪಟ್ಟಿಯಲ್ಲಿ ಗೋಮಾಂಸ ಇಲ್ಲ ಎಂಬುದು ಮುಖ್ಯವಾಗಿ ಗಮನಿಸಬೇಕಾದ ವಿಷಯ.

ಹೀಗೆ ಋಷಿಗಳ ಸಮೇತ ಪ್ರಾಚೀನಕಾಲದ ವೈದಿಕ ಮತದ ಜನರು ಇತರ ಮಾಂಸಗಳ ಜೊತೆಗೆ ಗೋಮಾಂಸವನ್ನೂ ತಿನ್ನುತ್ತಿದ್ದರೆಂಬ ಸತ್ಯವು ಮೇಲೆ ಹೇಳಿದ ನಮ್ಮ ಪುರಾತನ ಗ್ರಂಥಗಳ ವಸ್ತುನಿಷ್ಠ ಅಧ್ಯಯನದಿಂದ ತಿಳಿದುಬರುತ್ತದೆ. ಇದು ಗೋವಿನ ನಿಜವಾದ ಇತಿಹಾಸ.



ಮುಂದಿರುವ ಸಮಸ್ಯೆಗಳು

ಬೆಲೆ ಏರಿಕೆ, ನಿರುದ್ಯೋಗ, ದಾರಿದ್ರ್ಯ, ಶೈಕ್ಷಣಿಕ ಅವಕಾಶಗಳ ಅಭಾವ ಮತ್ತು ಇತ್ತೀಚೆಗೆ ಜಾಗತೀಕರಣ, ಖಾಸಗೀಕರಣ, ಉದಾರೀಕರಣದಿಂದಾಗಿ ಸಂಕಷ್ಟಗಳಿಗೆ ಸಿಕ್ಕಿ ನರಳುತ್ತಿರುವ, ಮಾನಸಿಕವಾಗಿ ತತ್ತರಿಸುತ್ತಿರುವ ಜನಸಾಮಾನ್ಯರು ಸ್ವಾಭಾವಿಕವಾಗಿಯೇ ಧರ್ಮದ ಅಮಲಿಗೆ ಒಳಗಾಗುತ್ತಾರೆ ಮತ್ತು ಎಲ್ಲರೂ ಗಮನಿಸಿರುವ ಹಾಗೆ ಈಗ ಕೆಲವು ವರ್ಷಗಳಿಂದ ನಮ್ಮ ದೇಶದಲ್ಲಿ ಈ ಧಾರ್ಮಿಕ ಅಮಲು ಹೆಚ್ಚುಹೆಚ್ಚಾಗಿ ಏರುತ್ತಲೇ ಇದೆ. ಎಲ್ಲೆಲ್ಲೂ ಹೊಸ ಹೊಸ ಮಠ, ದೇವಸ್ಥಾನ, ಚರ್ಚು, ಮಸೀದಿಗಳ ನಿರ್ಮಾಣ ಹೆಚ್ಚುತ್ತಲೇ ಇದ್ದು ಅವುಗಳ ಸಂಪತ್ತಿನಲ್ಲೂ ಅಪಾರ ಹೆಚ್ಚಳ ಆಗಿದೆ ಎಂಬುದು ನಿರ್ವಿವಾದ.

ಪ್ರತೀ ಕೋಮಿನಲ್ಲೂ ಸ್ವಾಮಿಗಳ, ಸಂತರ, ಬಾಬಾಗಳ, ಧರ್ಮಗುರುಗಳ, ಮುಲ್ಲಾಗಳ ಸಂಖ್ಯೆಯಲ್ಲೂ ಅಪಾರ ವೃದ್ಧಿ ಆಗಿದೆ, ಇನ್ನೂ ಆಗುತ್ತಲೇ ಇದೆ. ದೇಶದಲ್ಲಿ ಧಾರ್ಮಿಕ ಮೂಲನಿಷ್ಠವಾದದ ಗಾಳಿಯು ಪ್ರಬಲವಾಗಿ ಬೀಸುತ್ತಿದೆ. ಮತ ಮತಗಳ ನಡುವೆ ಅಸಹನೆ ಹೆಚ್ಚುತ್ತಲಿದೆ. ದೇಶದಲ್ಲಿ ಒಗ್ಗಟ್ಟು ಕಡಿಮೆಯಾಗುತ್ತಲಿದೆ. ಆಂತರಿಕವಾಗಿ ದೇಶವು ಬಲಹೀನವಾಗುತ್ತಿದೆ. ಹೀಗೆ ದುರ್ಬಲಗೊಂಡ ದೇಶವು ಎಷ್ಟು ಕಾಲ ಉಳಿದೀತು? ಎಲ್ಲಿಯವರೆಗೆ ನಮ್ಮ ಭ್ರಷ್ಟ ವ್ಯವಸ್ಥೆ ಇಂತಹ ಸಮಾಜವಿರೋಧಿ ಮತಾಂಧ ಫ್ಯಾಸಿಸ್ಟ್ ಶಕ್ತಿಗಳನ್ನು ಪೋಷಿಸುತ್ತಾ ಬರುತ್ತದೋ ಅಲ್ಲೀವರೆಗೆ ಈ ದೇಶಕ್ಕೆ ಒಳ್ಳೆಯ ಭವಿಷ್ಯವಿಲ್ಲವೆಂದೇ ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ಕೋಮು ದಳ್ಳುರಿಯಲ್ಲಿ ದೇಶದ ವಿನಾಶವಂತೂ ಖಂಡಿತ. ಈ ಲೋಕದಲ್ಲಿ ಎಲ್ಲಿ ನೋಡಿದರೂ ಧರ್ಮ ಮತ್ತು ದೇವರ ಹೆಸರಿನಲ್ಲಿ ನಡೆದಿರುವಷ್ಟು ಮೋಸ, ಅನ್ಯಾಯ, ರಕ್ತಪಾತ, ಹಿಂಸೆ, ಕ್ರೌರ್ಯ ಬೇರಾವ ಕಾರಣಕ್ಕೂ ನಡೆದಿಲ್ಲ ಎಂಬುದೇ ಇತಿಹಾಸದ ಸತ್ಯ.

ಇನ್ನಾದರೂ ಮತಾಂಧ ಫ್ಯಾಸಿಸ್ಟ್ ಶಕ್ತಿಗಳ ವ್ಯವಸ್ಥಿತ ಷಡ್ಯಂತ್ರವನ್ನು ಜನಸಾಮಾನ್ಯರು ಗಮನಿಸಬೇಕಾದ ಅಗತ್ಯವಿದೆ ಮತ್ತು ಈ ಷಡ್ಯಂತ್ರಕ್ಕೆ ಬಲಿಪಶುಗಳಾಗದೆ ಈ ದುಷ್ಟ ಶಕ್ತಿಗಳಿಂದ ದೂರ ಸರಿಯಬೇಕಾಗಿದೆ; ಈ ದುಷ್ಟ ಶಕ್ತಿಗಳ ಜನಾಂಗ ದ್ವೇಷದ ಹಾಗೂ ಕುಟಿಲ ರಾಜಕಾರಣದ ಕಾರಸ್ಥಾನವು ಯಶಸ್ವಿಯಾಗದಂತೆ ನೋಡಿಕೊಳ್ಳಬೇಕಾಗಿದೆ.

"ತಾನೂ ಬದುಕು, ಇತರರ ಬದುಕಿನ ಹಕ್ಕನ್ನೂ ಗೌರವಿಸು" ಎಂಬ ಮೂಲ ತತ್ವವನ್ನು ಎಲ್ಲರೂ ತಿಳಿದುಕೊಂಡು ಅದರ ಪ್ರಕಾರ ನಡೆದುಕೊಂಡರೆ ಹಾಗೂ ಸಂವಿಧಾನದ ಆಶಯಗಳಿಗೆ ಅನುಸಾರವಾಗಿ ನಡೆದರೆ ಮನುಷ್ಯರು ಖಂಡಿತಾ ಪ್ರೀತಿ ಸೌಹಾರ್ದಗಳಿಂದ ಸಹಬಾಳ್ವೆ ನಡೆಸುವಂತಾದೀತು. ಹಾಗಾದರೆ ಮಾತ್ರ ಕರಾವಳಿ ಜಿಲ್ಲೆಗಳಲ್ಲಿ, ರಾಜ್ಯದಲ್ಲಿ ಹಾಗೂ ದೇಶದಲ್ಲಿ ಶಾಂತಿ ನೆಲೆಸೀತು.

-ಸುರೇಶ ಬಾಕ್ರಬೈಲು



ಜಡಗೊಂಡಿದ್ದ ನನ್ನ ಮನಸ್ಸು 26 ನೇ ನವೆಂಬರ್ 2006 ರಂದು ನಡೆದ ಕೋಮುಸೌಹಾರ್ದ ವೇದಿಕೆಯ ರ್‍ಯಾಲಿಯಿಂದ ಚೈತನ್ಯ ಪಡೆದುಕೊಂಡಿತು. ಯಾವುದೇ ಅಮಿಷಕ್ಕೊಳಗಾಗದೆ, ಕಾರ್ಯಕ್ರಮದ ಪ್ರಸ್ತುತತೆ; ಗಂಭೀರತೆ ತಿಳಿಯದೆ ನಡೆಯುವ ರಾಜಕೀಯ ಕಾರ್ಯಕ್ರಮದಂತೆ ಕಾಣದೆ; ಸ್ವಯಂಪ್ರೇರಿತರಾಗಿ ನಲಿದಾಡುತ್ತಿದ್ದ ಜನ ಸಮೂಹ; ಬಿಸಿಲಿನ ತಾಪದಲ್ಲೂ ದಣಿವು, ನಿರಾಸಕ್ತಿ ಕಾಣದೆ ಹೊಸ ಚೈತನ್ಯ ತುಂಬಿಕೊಂಡವರಂತೆ ಕಾಣುತ್ತಿದ್ದ ಇಡೀ ಕಾರ್ಯಕ್ರಮದ ಪ್ರಕ್ರಿಯೆಯನ್ನು ನಿಜವಾದ ವಿಚಾರ ಸಂಕಿರಣದಂತೆ ಅನುಭವಿಸುತ್ತಿದ್ದ ಜನ ನೋಡಿ ನನಗೆ ಕರ್ನಾಟಕ ಪ್ರಗತಿರಂಗದ ರ್‍ಯಾಲಿ ನೆನಪಿಗೆ ಬಂತು. ಆದರೆ ಆಗ ನಮ್ಮ ಜನ ತಮಗೆ ಸಿಕ್ಕ ಒಳ್ಳೆಯ ಛಾನ್ಸ್ ಕಳೆದುಕೊಂಡರು.


ಆದರೆ ಈಗಿನ ನಮ್ಮ ರಾಜಕೀಯ ಪರಿಸ್ಥಿತಿ ಭಿನ್ನವಾಗಿದೆ. ಈಗಿನ 'ಕೋಮುವಾದ' ಎನ್ನುವ ದಳ್ಳುರಿಯ ಮುಂದೆ ಆಗಿನ ರಾಜಕೀಯ, ಸಾಮಾಜಿಕ ಪರಿಸ್ಥಿತಿ ಭಿನ್ನವಾಗಿತ್ತು, ನಮ್ಮ ಇಡೀ ವಾತಾವರಣ ಪ್ರಕ್ಷುಬ್ಧಗೊಂಡು ಕೊಳೆತುಹೋಗುತ್ತಿದೆ. ಅವತ್ತು ಹಣ, ಅಧಿಕಾರದಾಹಿಗಳ ವಿರುದ್ಧ ಹೋರಾಟ ಮಾಡುವ ಅನಿವಾರ್ಯತೆ ಇದ್ದರೆ ಈಗ ರಕ್ತದಾಹಿಗಳ ವಿರುದ್ಧ ಹೋರಾಟ ಮಾಡುವ ಭಯಾನಕ ವಾತಾವರಣ ಸೃಷ್ಟಿಯಾಗಿದೆ.

ಸಿಕ್ಕೆ ನಡೆದ ರ್‍ಯಾಲಿ ಕೋಮುವಾದಿಗಳಿಗೆ ಮತ್ತು ಅವರೊಂದಿಗೆ ಕೈಜೋಡಿಸಿ ಸರ್ಕಾರ ನಡೆಸುತ್ತಿರುವ ಜನತಾದಳಕ್ಕೆ ಎಚ್ಚರಿಕೆಯಂತೆ ಮಾತನಾಡದೆ ಜನಸಾಮಾನ್ಯರಿಗೆ ಅರಿವು ಮೂಡಿಸುವ ಕಾರ್ಯಕ್ರಮದಂತೆ ಕಾಣುತ್ತಿತ್ತು. ಅಲ್ಲಿ ಸೇರಿದ್ದ ಯುವಕ/ಯುವತಿಯರಲ್ಲಿ ಉನ್ಮಾದತೆ, ಪ್ರಚೋದನಕಾರಿ ಘೋಷಣೆಗಳು ಕಾಣದೆ ಅಸ್ಮಿತೆ, ಭಯದ ನೆರಳಲ್ಲಿ ಬದುಕುತ್ತಿರುವ, ಸಮಾನ ಸವಾಲುಗಳನ್ನು ಎದುರಿಸುತ್ತಿರುವ ಮನಸ್ಸುಗಳು ಸೇರಿ ಪರಸ್ಪರ ಪ್ರೀತಿ, ಧೈರ್ಯ, ಸಾಂತ್ವನಗಳನ್ನು ಹಂಚಿಕೊಳ್ಳುತ್ತಿರುವಂತೆ ಕಾಣುತ್ತಿತ್ತು.

ಗುಜರಾತಿನ ಬೆಸ್ಟ್ ಬೇಕರಿ ಪ್ರಕರಣದಲ್ಲಿ ಹೋರಾಟ ಮಾಡಿದ, ಧೈರ್ಯದ ಹೆಣ್ಣುಮಗಳಾದ ತೀಸ್ತಾ ಸೆತ್ಲ್‌ವಾಡ್‌ರವರು ಮೆರವಣಿಗೆಯುದ್ದಕ್ಕೂ ತಮ್ಮಟೆ ತಾಳಕ್ಕೆ ತಕ್ಕಂತೆ ಕಾಲು ಹಾಕುತ್ತ ನಡೆದದ್ದು ಅಲ್ಲಿ ಸೇರಿದ್ದ ಮನಸ್ಸುಗಳ ಲಯಬದ್ಧತೆಗೆ ಸ್ಪಂದಿಸುತ್ತಿರುವಂತೆ ಕಾಣುತ್ತಿತ್ತು.

ನಿಜಕ್ಕೂ ಈಗ ಕೋಮುವಾದಿಗಳಿಗೆ ಎಚ್ಚರಿಕೆ ಕೊಡುವುದರ ಜತೆಗೆ ಎಲ್ಲ ಜೀವಪರ ಮನಸ್ಸುಗಳು ಎಚ್ಚರಗೊಳ್ಳಬೇಕಿದೆ.

-ಕೆ.ಎನ್. ದೀಪಕ್,
ಕಲ್ಕೆರೆ



ಡಿಸೆಂಬರ್ 6 ಸಂಚಿಕೆಯಲ್ಲಿ 'ಕೆಂಪಾವುಟ ನಾಯಕರ ದೆಹಲಿ ಚಲೋ-ಪೈಸಾ ಲಾವೊ' ಲೇಖನದ ಬಗ್ಗೆ ನನ್ನ ಪ್ರತಿಕ್ರಿಯೆ: ಹಿಂದೆ ಸ್ವಾತಂತ್ರ್ಯ ಪೂರ್ವದಲ್ಲಿ ಕಮ್ಯುನಿಸ್ಟರ ತ್ಯಾಗ, ಬಲಿದಾನದ ಬಗ್ಗೆ ಓದಿ ತಿಳಿದಾಗ ನನಗೆ ರೋಮಾಂಚನವಾಗುತ್ತಿತ್ತು. ಅತಿ ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಎಲ್ಲವನ್ನು ಭೂರಹಿತ ಜನಕ್ಕೆ ಕೊಟ್ಟು ಆದರ್ಶ ವ್ಯಕ್ತಿಯಾಗಿದ್ದ ಕಮ್ಯುನಿಸ್ಟರು, ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ನಿವೃತ್ತಿ ಆದಾಗ ಒಂದು ಸೂಟ್‌ಕೇಸ್ ಹಿಡಿದು ಸರ್ಕಾರದ ಮನೆಯಿಂದ ಹೊರಬಂದ ಕಮ್ಯುನಿಸ್ಟರು ಇದ್ದರು.

ಅಂತಹ ಪಕ್ಷದಲ್ಲಿ ಕಮ್ಯುನಿಸ್ಟ್ ಎಂಬ ಮುಖವಾಡ ಧರಿಸಿದ ಜನ, ಬಡ ಹಾಗೂ ಶೋಷಿತ ಜನರಿಂದ ದೆಹಲಿ ಚಲೊ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿರುವುದು ದರೋಡೆಕೋರರಿಗಿಂತಲೂ ಕಡಿಮೆ ಇಲ್ಲ. ಹಿಂದೆ 'ಲಂಕೇಶ್'ನಲ್ಲಿ ಇದೇ ರಾಮಚಂದ್ರಪ್ಪ ದಾವಣಗೆರೆಯ 'ಧಣಿ' ಶಿವಶಂಕರಪ್ಪನವರಿಗೆ ಬೆಳ್ಳಿ ಕಿರೀಟ ತೊಡಿಸಿದ್ದ ಬಗ್ಗೆ ಲೇಖನ ಬಂದಿತ್ತು. ನೀವು, ನಿಮ್ಮ ಪತ್ರಿಕೆ ಕೋಮುವಾದಿಗಳ ಬಗ್ಗೆ ಲೇಖನ ಬರೆದು ಜನತೆಗೆ ತಿಳಿಸುತ್ತಿದ್ದೀರಾ ಎಂದು ತಿಳಿದಿದ್ದ ನನ್ನಂತಹ ಕಮ್ಯುನಿಸ್ಟ್‌ನಿಗೆ ಡೋಂಗಿ ಕಮ್ಯುನಿಸ್ಟರ ಬಗ್ಗೆ ಬರೆದಿರುವುದು ಬಹಳ ಒಳ್ಳೆಯ ಕೆಲಸ ಎನ್ನಿಸಿದೆ.

ಆದರೆ ಈಗಲೂ ಕಮ್ಯುನಿಸ್ಟ್ ಪಕ್ಷದಲ್ಲಿ ಪ್ರಾಮಾಣಿಕರು, ತ್ಯಾಗಮಯಿಗಳು, ಬಡಜನರ ಬಗ್ಗೆ ಕಾಳಜಿ ಇರುವವರು ಅತಿಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನೀವು ಅಂತಹವರ ಬಗ್ಗೆಯೂ ಲೇಖನ ಮಾಡಬೇಕೆಂದು ಆಶಿಸುವೆ.

-ಎಚ್.ಎಸ್. ಮಂಜುನಾಥ, ಬೆಂಗಳೂರು

ಡಿಸೆಂಬರ್ 13 ರ ಸಂಚಿಕೆಯಲ್ಲಿ 'ಸೂರ್ಯ ಮತ್ತೆ ಹುಟ್ಟಿ ಬರಬೇಕು' ಲೇಖನ ಬರೆದ ಹಿಮಕರರಿಗೂ, 'ಮತ್ತೆ ಅದೇ ಪ್ರಶ್ನೆ: ಯಾರು ಭಾರತೀಯರು' ಲೇಖನ ಬರೆದ ಜಿ. ರಾಜಶೇಖರರವರಿಗೂ ಅಭಿನಂದನೆಗಳು. ಈ ಎರಡೂ ಲೇಖನಗಳು ಶೂದ್ರ-ದಲಿತರು ಬಲಿಪಶುಗಳಾಗಿರುವುದನ್ನು, ಪ್ರಜಾಪ್ರಭುತ್ವದ ಕರಾಳ ಮುಖವನ್ನು ಸಮಗ್ರವಾಗಿ ಸೆರೆ ಹಿಡಿದಿವೆ. ವೈಚಾರಿಕತೆಯ ದಿವಾಳಿಕೋರತನದಿಂದ ಉಂಟಾಗುವ ವಕ್ರರೇಖೆಯು ಏನನ್ನು ಸಾಧಿಸಿದ್ದಿಲ್ಲ ಎಂಬುದು ಮನದಟ್ಟಾಗಿದೆ.

-ಪಿ. ಗೋಕುಲ್‌ದಾಸ್,
ಮಂಗಳೂರು

ಎಸ್.ಎಲ್.ಎನ್. ಚಾರಿಟೀಸ್ ಟ್ರಸ್ಟ್ ದೊಡ್ಡಣ್ಣ ಶೆಟ್ಟರ ವಿಲ್‌ನಂತೆ, ಸರ್ಕಾರದ ಧರ್ಮದತ್ತಿ ಇಲಾಖೆಯ ಉಸ್ತುವಾರಿಯಲ್ಲಿ ನಡೆಯುವ ಸಂಸ್ಥೆ. 40 ವರ್ಷಗಳ ನಂತರ, ಬಾಡಿಗೆ ಅಥವಾ ಗುತ್ತಿಗೆಯಿಂದ ಅಪ್ಸರಾ ಥಿಯೇಟರ್ ಈಗ ಮತ್ತೆ ಟ್ರಸ್ಟ್ ವಶಕ್ಕೆ ಬಂದಿದೆ. ಆಗ ಸಾಕಷ್ಟು ತಕರಾರು ಎದ್ದಿತ್ತು. ಆ ಗೋಜಲು ಬಿಡಿಸಿಕೊಂಡು ಆಸ್ತಿಯನ್ನು ಸಂಘಕ್ಕೆ ವಾಪಸ್ಸು ತೆಗೆದುಕೊಳ್ಳಲು ನಾನು ಕೂಡ ಬಹಳಷ್ಟು ಶ್ರಮಿಸಿದ್ದೇನೆ.



ಈಗ ಅದನ್ನು ಪಡೆಯಲು ಸ್ಪರ್ಧೆ ಸಹಜವಾಗಿ ತೀವ್ರ. ಟ್ರಸ್ಟ್ ಹಿತರಕ್ಷಣೆ, ಜನಾಂಗದ ಒಳಿತು, ಮಾರುಕಟ್ಟೆ ಮೌಲ್ಯ ಲೆಕ್ಕಾಚಾರದಲ್ಲಿ ವ್ಯವಹಾರ ನಡೆಯುತ್ತಿವೆ. ಸಮರ್ಥರು ಯಾರೇ ಆಗಿದ್ದರೂ ವ್ಯವಹಾರದಲ್ಲಿ ಪಾಲ್ಗೊಳ್ಳಲು ಹೊಸ ಟ್ರಸ್ಟ್ ರಚನೆ, ಕಾಯ್ದೆಬದ್ಧವಾಗಿ ಆಗಬೇಕು, ಆಗುತ್ತದೆ. ಈ ಟ್ರಸ್ಟ್ ಸ್ಥಾನಗಳಿಗೆ ಪೈಪೋಟಿಯೂ ಸಹಜ. ಜನಾಂಗದ ಒಳಿತು, ಆಸ್ತಿ-ಪಾಸ್ತಿ ಸಂರಕ್ಷಣೆ, ಬೆಳವಣಿಗೆ ಬಯಸುವ ಅರ್ಹರು ಈ ಟ್ರಸ್ಟ್‌ನಲ್ಲಿ ಸೇವಾ ಅವಕಾಶ ಪಡೆಯಬಹುದು. ಅಂಥ ಆಕಾಂಕ್ಷಿಗಳಲ್ಲಿ ನಾನೂ ಒಬ್ಬನಾದರೆ ಅಪರಾಧವೇ? ನನ್ನದು ಪಿತ್ರಾರ್ಜಿತವಾದ ವ್ಯಾಪಾರ-ವ್ಯವಹಾರ. ಗಾಣಿಗ ಜನಾಂಗದ ಸಾಮೂಹಿಕ ಪ್ರಗತಿ ಕಾರ್ಯಗಳಲ್ಲಿ ಸಾಧ್ಯವಾದಷ್ಟೂ ನನ್ನನ್ನು ತೊಡಗಿಸಿಕೊಂಡಿದ್ದೇನೆ. ಈ ಟ್ರಸ್ಟಿನ ಆಸ್ತಿ-ಪಾಸ್ತಿ ರಕ್ಷಣೆ-ಭದ್ರತೆ ಕೆಲಸಗಳಲ್ಲೂ ಭಾಗಿಯಾಗಿದ್ದೇನೆ. ಜನಾಂಗದ ಕೆಲವರಲ್ಲಿ ನನ್ನ ಬೆಳವಣಿಗೆ ಸಹಿಸದವರೂ ಉಂಟು. ಈ ಟ್ರಸ್ಟಿನ ಆಸ್ತಿ-ಪಾಸ್ತಿಯನ್ನು ಸ್ವಾರ್ಥಕ್ಕೆ ಬಳಸಿಕೊಳ್ಳಬಯಸುವವರೂ ಇದ್ದಾರೆ. ಅಂಥವರಿಗೆ ನನ್ನಂಥವರಿಂದ ಅವಕಾಶ ಸಿಗುತ್ತಿಲ್ಲವೆಂಬುದೇ ಇಲ್ಲಿನ ಮೂಲಸತ್ಯ.

ಹಿಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಿಗೆ ನಾನು ಬರೆದಿರುವುದಾಗಿ ನೀವು ಪ್ರಕಟಿಸಿರುವ ಪತ್ರ 'ಫೋರ್ಜರಿ'. ಈ ಬಗ್ಗೆ ನಾನು ಪೊಲೀಸರಿಗೆ ದೂರು ಕೊಟ್ಟಿದ್ದೇನೆ.

ಶ್ರೀ ವಿ.ಆರ್. ಸುದರ್ಶನ್ ನಮ್ಮ ಜನಾಂಗದ ನಾಯಕರು. ಗಾಣಿಗರು ರಾಜಕೀಯವಾಗಿ ತೀರಾ ದುರ್ಬಲ. ಈ ತನಕ ವಿಧಾನಸಭೆಯಲ್ಲಿ ಸದಸ್ಯತ್ವವೇ ಇಲ್ಲದ ದೀನ ಸ್ಥಿತಿ. ಬಹುತೇಕ ಎಲ್ಲ ರಂಗದಲ್ಲೂ ಈ ಜನಾಂಗ ತೀರಾ ಹಿಂದುಳಿದಿದೆ. ಪರಿಸ್ಥಿತಿ ಹೀಗಿರುವಾಗ ದಿಟ್ಟತನದಿಂದ ರಾಜಕೀಯ ಹೆಜ್ಜೆ ಹಾಕುತ್ತಿರುವ ಶ್ರೀ ಸುದರ್ಶನ್ ಅವರಿಗೆ ಬೆಂಬಲ ಕೊಡುವುದು ಗಾಣಿಗರ ರಾಜಕೀಯ ಜಾಣ್ಮೆ ಅಲ್ಲವೇ?

ಪಿ.ಜಿ. ಕಾಂಪ್ಲೆಕ್ಸ್ ಬಾಡಿಗೆ ಮನ್ನಾ ನಿರ್ಧಾರದ ವಿಷಯ. ಶ್ರೀರಾಮನಾಥಯ್ಯನವರ ಅಧಿಕಾರದ ಅವಧಿಯಲ್ಲಿ ಇಂಥ ಯಾವ ನಿರ್ಧಾರವೂ ಆಗಿಲ್ಲ. ಇದರಲ್ಲಿ ನನ್ನ ಯಾವ ಸಂಬಂಧದ ಮಾತೂ ಉದ್ಭವಿಸುವುದಿಲ್ಲ.

ತಾವು ನನ್ನ ಈ ಸ್ಪಷ್ಟೀಕರಣವನ್ನು ನಿಮ್ಮ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಪರಿಹಾರ ದೊರಕಿಸಬೇಕೆಂದು ಆಶಿಸುತ್ತೇನೆ.

-ಕೆಂಪಣ್ಣ ಚೆಟ್ಟಿ, ಬೆಂಗಳೂರು

ಚುನಾವಣೆಯ ಹಿನ್ನೆಲೆಯಲ್ಲಿ ರಾಜ್ಯದ ಆಡಳಿತ ಯಂತ್ರ ಸಂಪೂರ್ಣ ಸ್ಥಗಿತಗೊಂಡಿದೆ-ರಾಜ್ಯಪಾಲ

ಪೀಟರ್ ಪೀಟರ್ 'ಬಾಣಿಗಾಟ'ರ್

ಅಣಕ

ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆಯಲ್ಲಿ ಸಿದ್ಧರಾಮಯ್ಯ ಎಂಬ ರಾಕ್ಷಸನನ್ನು ವಧಿಸಲೇಬೇಕು ಎಂಬ ಕಠೋರ ಪ್ರತಿಜ್ಞೆ ಮಾಡಿದ್ದ ರಾಜ್ಯ ಮಂತ್ರಿಮಂಡಲದ ಸದಸ್ಯರು ತಮ್ಮ ಪವಿತ್ರವಾದ ಪಾದಗಳನ್ನು ಬೆಂಗಳೂರಿನಿಂದ ಮೈಸೂರಿಗೆ ಬೆಳೆಸಿದ್ದರಲ್ಲ, ಅಲ್ಲಿ ಏನು ನಡೆಯಿತಪ್ಪಾ ಎಂದರೆ ಚುನಾವಣಾ ಆಯೋಗದ ರೇಮಂಡ್ ಪೀಟರ್ ಎಂಬ ಮಹಾಶಯನು ಹೊರಗಡೆಯಿಂದ ಬಂದಿರುವ ಪಕ್ಷಗಳ ಕಾರ್ಯಕರ್ತರು ಮೈಸೂರನ್ನು ತೊರೆಯುವಂತೆ ಆಜ್ಞಾಪಿಸಲಾಗಿ.... ಕೆಲವು ಮಂತ್ರಿಗಳು ಸದ್ಯ ಈ ನರಕದಿಂದ ಬಿಡುಗಡೆ ಆಯಿತಲ್ಲಾ ಎಂಬ ಸಂತೋಷದಿಂದಲೂ; ಹಾವು ಹೊಡೆದು ಹದ್ದಿಗೆ ಹಾಕಿದಂತೆ ತಾವು ಅವ್ಯವಹಾರದಿಂದ ಕುದುರಿಸಿದ್ದನ್ನೆಲ್ಲ ಇಲ್ಲಿ ತಂದು ಯಾವೊನ್ನೋ ಗೆಲ್ಲಿಸೋಕೆ ಸುರಿಯಬೇಕಲ್ಲ ಎಂದು ಒಳಗೊಳಗೇ ಕುದಿಯುತ್ತಿದ್ದವರು ಅತಿ ಸಂತೋಷದಿಂದಲೂ ತಾವು ತಂದಿದ್ದ ಸೂಟಕೇಸಿನ ತೂಕ ಕೊಂಚವೂ ಕಡಿಮೆಯಾಗದಂತೆ ಕಾಳಜಿವಹಿಸಿ ತಮ್ಮ ವಾಸ್ತವ್ಯವನ್ನು ಬದಲಾಯಿಸಿದರು. ಇಂತಹ ಸಂಭ್ರಮದ ವಾತಾವರಣದಲ್ಲಿ ಮಂಡ್ಯದ ಪ್ರವಾಸಿಮಂದಿರಕ್ಕೆ ಬಂದು ತಂಗಿದ್ದ ಅರಣ್ಯ ಸಚಿವರಾದ ಚೆನ್ನಿಗಪ್ಪ ಬಲೇ ಜೋಶ್‌ನಲ್ಲಿರುವಾಗ... ಪತ್ರಕರ್ತರು ಸುತ್ತುವರಿಯಲಾಗಿ.... 'ಕೊಲುವೇವ್ ನಾವ್ ಆ ಸಿದ್ಧರಾಮನನು' ಎಂದು ಹಳ್ಳಿಯ ನಾಟಕದ ವರಸೆಯಲ್ಲಿ ಬಡಾಯಿಕೊಚ್ಚಿಕೊಳ್ಳುತ್ತಿರುವಾಗ....

'ಸಾರ್ ಕೆಲವು ಹುಂಡಿಗಳಲ್ಲಿ ನಿಮ್ಮನ್ನು ಊರೊಳಕ್ಕೆ ಸೇರಿಸಲಿಲ್ಲವಂತಲ್ಲಾ...'

'ಯಾರ್ರೀ ಹೇಳಿದ್ದು... ನಾನು ಎಲ್ಲ ಹುಂಡಿಗಳಿಗೋಗಿದ್ದೆ ಕಣ್ರೀ'

'ಮತ್ತೆ ಚಲುವರಾಯಸ್ವಾಮಿ ಹಂಗೇಳಿದ್ರಲ್ಲ ಸಾರ್?'

'ಅವರಿಗೆಲ್ಲೋ ಬುದ್ಧಿ ಭ್ರಮಣೆಯಾಗಿದೆ ಕಣ್ರಿ.'

ಎಂಬಿತ್ಯಾದಿ ಪ್ರಶ್ನೋತ್ತರಗಳು ನಡೆಯಲಾಗಿ, ಇವರೇನು ಹುಚ್ಚಾಸ್ಪತ್ರೆಯ ಡಾಕ್ಟರಾ ಎಂಬ ಸಂಶಯ ಬಂದು ಮಾರನೆಯ ದಿನ ಅವರನ್ನು ಸಂಪರ್ಕಿಸಿ...

'ನೀವು ಹೇಳಿದ್ದು ಸರಿ ಇಲ್ಲ ಸಾರ್.'

'ಏನ್ ಹೇಳಿದ್ದೀನ್ರಿ ನಾನು?'

'ಅದೇ ಚಲುವರಾಯಸ್ವಾಮಿಗೆ ಬುದ್ಧಿಭ್ರಮಣೆ ಆಗಿದೆ ಅಂದದ್ದು.'

'ಯಾರ್ರೀ ಹೇಳಿದ್ದು ನಿಮಗೆ?'

'ಪೇಪರ್‌ನಲ್ಲಿ ಬಂದಿದೆ ಸಾರ್.'

'ನಂಬ್ತೀರಾ... ನೀವು ನಂಬ್ತೀರಾ... ಅದೇನೋ ಹೇಳಿದ್ರಲ್ಲಾ... ಅದ ಹೇಳಕ್ಕೆ ನನ್ನ ನಾಲಿಗೆ ಹೊರಳ ಬೇಕಲ್ರೀ' ಅಂದರಂತಲ್ಲಾ ಚೆನ್ನಿಗಪ್ಪನೋರು!

* * * * * * * * *

'ಮಟಾಷ್ ಸಾ ಮಟಾಷ್' ಎನ್ನುತ್ತಾ ಖುಷಿಯಿಂದ ಬಂದ ಕ್ಯಾತ, ಚುನಾವಣೆಯ ಹಿಂದಿನ ದಿವಸ ಚುನಾವಣಾ ಆಯೋಗದಿಂದ ದಬ್ಬಿಸಿಕೊಂಡ ಬಡ್ಡಿಮಗ, ಬಲೇ ದಿಲ್ ಆಗಿದ್ದ.

'ಏನೋ ಕತೆ ಕ್ಯಾತ' ಅಂದೆ.

'ಸಿದ್ರಾಮಯ್ಯನ ಕತೆ ಮುಗೀತಲ್ಲ ಸಾ' ಅಂದ ಖುಷಿಯಿಂದ.

ಅವನ ಪುರಾಣದ ಪ್ರಕಾರ: ಒಕ್ಕಲಿಗರು, ಲಿಂಗಾಯತರು ಜಾತ್ಯತೀತ ಜನತಾದಳದ ಬುಟ್ಟಿಯಲ್ಲೇ ಮಲಿಗವ್ರಂತೆ. ದಲಿತರು, ಸಾಬರು, ಕಿರಿಸ್ತಾನರು ಇಂತಹ ಕಿರು ಜಾತಿಯವರನ್ನೆಲ್ಲ ಒಡೆದು ಹೋಳು ಮಾಡಿದ್ದಾರಂತೆ. ಮಠಾಧೀಶರುಗಳ ಶಾಪ ಸಿದ್ಧರಾಮಯ್ಯನ್ನ ಸುಡುತ್ತಂತೆ. ದೇವಾನುದೇವತೆಗಳೆಲ್ಲಾ ಅವರ ಮೇಲೆ ಕೋಪ ಕಾರುತ್ತಿದ್ದಾರಂತೆ. ಮೇಲಾಗಿ ಯಾವುದೋ ಮನೆಯಲ್ಲಿ ಕುಳಿತ ಶನಿ ಇವರ ಮನೆ ಮೇಲೆ ವಕ್ರದೃಷ್ಟಿ ಬೀರುತ್ತಿದ್ದಾನಂತೆ. ಹೀಗಾಗಿ ಜ್ಯೋತಿಷ್ಯ ಫಲವೂ ಇವರ ಪರವಾಗಿಲ್ಲ. ಇದಲ್ಲದೆ ಕೈ ನೀಡಿದವರಿಗೆಲ್ಲ ಕನಿಷ್ಠ ಅಂದರೆ ಐನೂರು, ಸ್ತ್ರೀಶಕ್ತಿ ಸಂಘಗಳಿಗೆ ಲಕ್ಷ ಬಿಸಾಕಿದ್ದಾರಂತೆ. ಯುವಕರಿಗೆ ಸ್ಫೂರ್ತಿ ಬರಲಿ ಅಂತ ಹಣದ ಜೊತೆಗೆ ಹೆಂಡದ ಹೊಳೇನೆ ಹರಿಸಿರುವರಂತೆ. ಇದೆಲ್ಲದರ ಸಾರಾಂಶ: ಚುನಾವಣೆಯಲ್ಲಿ ಜೆಡಿಎಸ್ ಆಗಲೇ ಗೆದ್ದು ಆಗಿದೆ!

ಫಲಿತಾಂಶ ಬಂತು. ಕ್ಯಾತೇಗೌಡರು ಭೂಗತರಾಗಿದ್ದರು! ಅಡಗಿದ್ದ ಜಾಗ ಹುಡುಕಿದೆ. ಟವೆಲ್ ತಲೆ ಮೇಲೆ ಹಾಕಿಕೊಂಡಿದ್ದ.

'ಬನ್ನಿಸಾ, ಇದೂ ಒಂದು ಗೆಲ್ಲಾಟವ' ಅಂದ.

'ಒಂದೋಟಲಿ ಗೆದ್ರೂ ಗೆಲುವೆ ಅಲ್ವ' ಅಂದೆ.

'ಗೆದ್ದೋನು ಸಿದ್ರಾಮಯ್ಯ ಅಲ್ಲ ಸಾ...' ಆ ಪೀಟರು, ಪೀಟರ್ ನನ್ಮಗ... ಬಗನಿಗೂಟ ಬಡುದ್ಬುಟ್ನಲ್ಲಾಸಾ... ಅವನಿಲ್ದೇ ಇರಬೇಕಾಗಿತ್ತು.... ಆ ಸಿದ್ರಾಮಯ್ಯ ಹೆಂಗೆ ಗೆಲ್ತಾನೋ ನಾನು ಒಂದು ಕೈ ನೋಡ್ತಿದ್ದೆ....

* * * * * * * * *

ಚುನಾವಣೆ ಫಲಿತಾಂಶ ಬಂದಮೇಲೆ ರಾಜಕೀಯ ತಜ್ಞರಿಂದ ಪೋಸ್ಟ್‌ಮಾರ್ಟಂ ಮಾಡಿಸುವುದು ಮಾಮೂಲಿ ಸಂಗತಿ. ಮಾಧ್ಯಮಗಳ ಕಣ್ಣಿಗೆ ಬೀಳದಂತಹ ತಜ್ಞರ ಅಭಿಪ್ರಾಯಗಳೂ ಇರುತ್ತವೆ. ಅದರ ಒಂದೆರಡು ಸ್ಯಾಂಪಲ್ಲು:

ಬೇಕರಿ ಒಳಗೆ ಯುವಕರ ಗುಂಪು. ಚುನಾವಣೆ ವಿಶ್ಲೇಷಣೆ ನಡೆಯುತ್ತಿತ್ತು.

'ಇವತ್ತು ಸ್ಪೆಸಲ್ ಪೂಜೆಕಲ' ಅಂದ ಒಬ್ಬ.

'ಏನು ಇಸೇಸ?' ಮತ್ತೊಬ್ಬನ ಪ್ರಶ್ನೆ.

'ಸಿದ್ರಾಮಯ್ಯ ಗೆದ್ನಲ್ಲ ಅದ್ಕ?' ಮಗದೊಬ್ಬನ ಪ್ರಶ್ನೆ

'ಕಾಗಿನೆಲೇಲಿ ಭರಾಟೆ ಅನ್ನು' ನಾಲ್ಕನೆಯವನ ಮಾತು.

'ಅಲ್ಲಲ್ಲಕನೊ, ಚುಂಚನಗಿರೀಲಿ'

'ಇಲ್ಯಾಕ್ಲಾ ಮಾಡಾರು?'

'ಸಿದ್ರಾಮಯ್ಯ ಗೆದ್ನಲ್ಲ ಅದ್ಕೆ' ಮತ್ತೊಬ್ಬನ ಉತ್ತರ

'ಸಿದ್ರಾಮಯ್ಯ ಗೆದ್ದಿದ್ದಲ್ಲ ಕನೋ ಮೂದೇವಿ, ದ್ಯಾವೇಗೌಡ ಸೋತಿದ್ಕೆ!'

* * * * * * * * *

'ಚಾಮುಂಡೇಸ್ವರೀಲಿ ಬಜೆಪಿಯವರಿಲ್ವಾ?'

'ಇರಾ ಹೊತ್ಗೆ ಮತ್ತೆ ಸಿದ್ರಾಮಯ್ಯ ಗೆದ್ದಿದ್ದು'

'ಹಂಗಂತೀಯಾ?'

'ಮತೆ, ಅವು ಬಂದು ಓಟಾಕಿದ್ರೆ ಇವನೆಲ್ಲಿಗೆಲ್ತಿದ್ದ'

'ಹಂಗಾರೆ ಬುಡು ಯಡಿಯೂರಿ ಕತೆ ಮುಗಿದಂಗೇಯ. ಅವ್ರನ್ನು ಚೀಫ್ ಮಿನಿಸ್ಟ್ರಾಗೋದು ಗಣಪತಿ ಮದುವೆ ಆದಂಗೇಯ.'

* * * * * * * * *

'ರಿಸಲ್ಟ್ ಬತ್ತಿತ್ತಲ್ಲ ಟೀವೀಲಿ ನೋಡ್ದ?'

'ಹೂಂ ಏನ್ ಇಸೇಸ?'

'ಏನಿಲ್ಲ ಕನೊ. ಸಿಎಮ್ಮು ಅದ ನೋಡ್ತ ಕುಂತಿದ್ರಂತೆ. ಅರ್ಧಕ್ಕೆ ಎದ್ದು ಹೊರಟರಂತೆ'


'ನೀರುಮನೆಗೆ ಇರಬೇಕು. ಎಲ್ಲೋ ಅವುಸರ ಆಗದೆ'

'ನಾನೂ ಹಂಗದ್ಕಂಡಿದ್ದೆ. ಅಲ್ಲಿಗಲ್ಲವಂತೆ ಅವರು ಹೋದದ್ದು.'

'ಇನ್ನೆಲ್ಲಿಗೆ ಹೋದ್ರಂತೆ?'

'ವೈಯ್ಯಾಲಿಕಾವಲಿ ಮಹಾಲಕ್ಷ್ಮಿ ಗುಡಿಗೋದ್ರಂತೆ!'

ಇವರ ಮಾತನ್ನು ಕೇಳುತ್ತಿದ್ದ ವಯಸ್ಕರೊಬ್ಬರು ನಡುವೆ ಬಾಯಿ ಹಾಕಿದರು-



'ಆಸೊಂದು ದ್ಯಾವ್ರು ದ್ಯಾವ್ರು ಅಂತ ಸಾಯೋ ದ್ಯಾವೇಗೌಡನೇ ಸೋತ್ನಲ್ಲಾ... ಕಲಿಗಾಲ ಕಲಿಗಾಲ.. ದ್ಯಾವ್ರಲೂ ಸತ್ವ ಇಲ್ಲ ಅಂದಂಗಾಯ್ತು...'

* * * * * * * * *

ಸಿದ್ಧರಾಮಯ್ಯನವರ ಗೆಲುವು... ಗೆಲುವೇನು ಬಂತು ದೇವೇಗೌಡ-ಕುಮಾರಸ್ವಾಮಿ ಸೋಲು ಯಾ... ಸಂತೋಷ ತಂದಿದೆ ಎಂಬ ಚರ್ಚೆ ನಡೀತು.

ಕಾಂಗ್ರೆಸ್ಸಿಗೆ? ಸರಿ.

ಜಾತ್ಯತೀತ ತತ್ವದಲ್ಲಿ ನಂಬಿಕೆ ಇರುವವರಿಗೆ? ಅ... ಸರಿ.

ಮತ್ತೆ ಯಾರಿಗೆ ಸಂತೋಷ ತಂದಿದೆ?

ಚೆಲುವರಾಯಸ್ವಾಮಿಗೆ!

ಸಿದ್ಧರಾಮಯ್ಯಗೆ ಸಹಾಯ ಮಾಡಿದರು ... ಅವರ ಮೇಲೆ ದೇವೇಗೌಡರಿಗೆ ಕೆಂಡವಂತೆ. ಅ... ಮಾಡಿದರೋ ಬಿಟ್ಟರೋ ಅದು ಬೇರೆ ವಿಷ... ಮಂತ್ರಿಮಂಡಲದಿಂದ ಅವರನ್ನು ಕಿತ್ತೊಗೆಯ... ಗೌಡರು ತೀರ್ಮಾನಿಸಿದ್ದರಂತೆ. ಗೌಡರೇ ಆ... ಹೇಳುವಂತೆ, ಎಲ್ಲಾ ಅದೃಷ್ಟದ ಆಟ!' ಈಗ ಅ... ಸ್ವಾಮಿಗೌಡ ಪರವಾಗಿರುವಂತಿದೆ! ಸದ್ಯದಲ್ಲಿ ಅವ... ಅಲುಗಾಡಿಸಲು ಗೌಡರು ಕೈ ಹಾಕಲಾರರು!

ಇನ್ನು ಯಾರಿಗೆ ತಂದಿದೆ ಸಂತೋಷ?

ತಂದೆ ಮಕ್ಕಳ ಸರ್ವಾಧಿಕಾರಿ ಧೋರಣೆಯಿ... ಬೇಸತ್ತಿರುವ ಜಾತ್ಯತೀತ ಜನತಾದಳದ ಶಾಸಕ... ಯಾಕೆಂದರೆ ಆ ಮೂಕರಿಗೆ ಬಾಯಿ ಕೊಟ್ಟದೆ... ಚುನಾವಣೆ!

ಮತ್ತೆ ಯಾರಾದರೂ ಇದ್ದಾರ?

ಇದ್ದಾರೆ, ಅನಂತಕುಮಾರ್ ಅಂಡ್ ಕಂಪನಿ...

ಯಡಿಯೂರಪ್ಪನನ್ನು ಬಗ್ಗು ಬಡಿಯಲು ...ಕ್ಕಿಂತಲೂ ಅವಕಾಶ ಸಿಕ್ಕೀತಾ!

* * * * * * * * *

ಈ ಚುನಾವಣೆಯಲ್ಲಿ ಸ್ತ್ರೀಯರದ್ದು ಮಹ... ಪಾತ್ರ.

ಸ್ತ್ರೀಶಕ್ತಿ ಸಂಘಟನೆಗಳು ಚುನಾವ... ಮುಂಚೆಯೇ ತಮ್ಮ ಶಕ್ತಿ ಪ್ರದ... ದ್ದವು.

ಪ್ರದರ್ಶಿಸಿದ್ದು ಹೇಗೆ?

'ಅವರು ಅಷ್ಟು ಕೊಟ... ನೀವೆಷ್ಟು ಕೊಡುತ್ತೀರಿ ಹೇಳಿ...

ಆಹಾ! ಎಷ್ಟೊಂದು ಒಗ್ಗಟ್ಟಿನ ಸಂಘಟನೆಗಳು!

ಇವೇನು ಸ್ತ್ರೀ ಸಂಘಟನೆಗಳಾ? ರಾಜಕೀ... ಸಂಘಟನೆಗಳಾ?

ಅಥವಾ ಹಣ ಸು... ಯುವ ಸಂಘಟನೆಗಳ...

ಅದಿರಲಿ. ಚುನಾ... ಫಲಿತಾಂಶ ತಿಳಿದ ಮೇಲೆ ಅವರ ಮನಸ್ಥಿತಿ ಹೇ... ಬಹುದು?

'ಯಾವೋನಾರ ಗೆಲ್ಲಲಿ, ಯಾವೋನಾರ ಸೋ... ನಮಗೆ ಬರೋ ಕಾಸು ಬಂತಲ್ಲ' ಅಂತ ಇರಬಹುದ...

-ಎಚ್.ಎಲ್. ಕೇಶವಮೂ...


ಹೋದವರು

ಹೋದವರು ಮರಳಿ ಬರುವುದಿಲ್ಲ
ಹಾಗೆ ನೋಡಿದರೆ ಅವರು
ಹೋಗಿಯೇ ಇರುವುದಿಲ್ಲ.

ಇದ್ದಾಗಿಗಿಂತಲೂ ಇದ್ದವರಿಗಿಂತಲೂ
ಹೆಚ್ಚುಬಾರಿ ಹೆಚ್ಚು ಜೀವಂತವಾಗಿ
ಎದುರುಬದುರಾಗುತ್ತಾರೆ
ಎದೆ ತೆರೆದು ಮಾತನಾಡುತ್ತಾರೆ
ಪ್ರೀತಿ ಮಾಡುತ್ತಾರೆ ಜಗಳ ಕಾಯುತ್ತಾರೆ
ಯಾಕೆಂದರೆ ಈಗ
ಅವರ ಬಳಿ ಸಮಯವಿದೆ

ಮನಸಿನ ಮೂಲೆಯಲ್ಲಿ ಕಾವಲು ಕೂತು
ನಮ್ಮನುಡಿಗಳಿಗೆ ಅಂತಃಸಾಕ್ಷಿಯಾಗುತ್ತಾರೆ
ಕನಸಿನ ದಾರಿಗುಂಟ ಕಣ್ಣದೀಪವ ನೆಟ್ಟು
ನಮ್ಮ ನಡೆಗಳನ್ನು ಪರೀಕ್ಷಿಸುತ್ತಾರೆ
ತಾವು ಅರ್ಧಕ್ಕೆ ನಿಲ್ಲಿಸಿದ ಕೆಲಸದ ಭಾರವನ್ನು
ನಿರುಮ್ಮಳವಾಗಿ ನಮ್ಮ ಹೆಗಲಿಗೇರಿಸಿ
ಬೇತಾಳದಂತೆ ಬೆನ್ನು ಹತ್ತುತ್ತಾರೆ

ಗೆಲುವಿನಲ್ಲಿ ಆನಂಧಭಾಷ್ಪವಾಗುತ್ತಾರೆ
ಸೋಲಿನಲ್ಲಿ ಕಣ್ಣೀರಧಾರೆಯಾಗುತ್ತಾರೆ



ನೋವಿನ ಗಳಿಗೆಯಲ್ಲಿ ಸಾಂತ್ವನ ಹೇಳಲು
ಅವರ ಹೊರತಾಗಿ ಬೇರೆ ಯಾರಿದ್ದಾರೆ?
ನಮ್ಮ ಶಬ್ದಕೋಶದಿಂದ 'ಒಂಟಿತನ'ವೆಂಬ
ಪದವನ್ನೇ ಕಿತ್ತು ಹಾಕುತ್ತಾರೆ

ನಾವು ತಿನ್ನುವ ರೊಟ್ಟಿಯಲ್ಲಿ
ಅವರ ಪಾಲಿನ ತುತ್ತು ರೋದಿಸುತ್ತದೆ
ನಾವು ಉಣ್ಣುವ ಗಂಗಾಳದಲ್ಲಿ
ಅವರ ಮುಖ ಪ್ರತಿಫಲಿಸುತ್ತದೆ
ನಾವು ಮಲಗಿರುವಾಗ ಕೂಡ
ತಾವು ಎಚ್ಚರಿದ್ದು
ನಮ್ಮ ಹಿತವನ್ನು ಧ್ಯಾನಿಸುತ್ತಾರೆ
ಎದ್ದ ಮೇಲಿನ ನಮ್ಮ
ಮೈ ಮರೆವುಗಳನ್ನು ನೆನಪಿಸುತ್ತಾರೆ

ಅವರು ಬಿಟ್ಟೂಬಿಡದೇ
ತಮ್ಮ ಸಾವನ್ನು ನಮ್ಮ ಎದುರಿಗೆ ಒಡ್ಡುತ್ತಾ...
ಬದುಕಿನ ಪಾಠ ಹೇಳುತ್ತಾರೆ

ಹೋದವರು ಮರಳಿ ಬರುವುದಿಲ್ಲ
ಹಾಗೆ ನೋಡಿದರೆ ಅವರು
ಹೋಗಿಯೇ ಇರುವುದಿಲ್ಲ

-ಎಂ.ಡಿ. ಒಕ್ಕುಂದ...



ಕಾವೇರಿ ತೀರದಲ್ಲಿ ಅಪ್ಪಾಜಿಯೊಂದಿಗೆ

'ಶಿವಮೆಚ್ಚಿದ ಕಣ್ಣಪ್ಪ' ಚಿತ್ರವನ್ನು ನಾನು ಮಾಡಲೇ, ಬೇಡವೇ? ಎಂದು ಹಿಂಜರಿಯಲು ಎರಡು ಕಾರಣ ಗಳಿದ್ದವು. ಮೊದಲನೆಯದು- ಅದು ಅಪ್ಪಾಜಿ ಮಾಡಿದ ಮೊದಲ ಚಿತ್ರ. ನನ್ನ ಪಾತ್ರವನ್ನು ಅಪ್ಪಾಜಿ ಪಾತ್ರಕ್ಕೆ ಜನ ಹೋಲಿಸುತ್ತಾರೆ ಎಂಬುದು ನನಗೆ ಗೊತ್ತಿತ್ತು. ಯಾವ ಕಾರಣಕ್ಕೂ ಅಪ್ಪಾಜಿ ಮಾಡಿದಷ್ಟು ಚೆನ್ನಾಗಿ ಮತ್ತು ಸಲೀಸಾಗಿ ಆ ಪಾತ್ರ ನನ್ನಿಂದ ಮಾತ್ರವಲ್ಲ, ಯಾರಿಂದಲೂ ಸಾಧ್ಯವಿಲ್ಲ ಎಂಬುದೂ ನನಗೆ ಗೊತ್ತಿತ್ತು.

ಎರಡನೆಯದು- ಈ ಪೌರಾಣಿಕ ಪಾತ್ರ ನನ್ನ ಮುಖಕ್ಕೆ ಹೊಂದುತ್ತದೆಯೇ? ಆ ವೇಷ-ಭೂಷಣಗಳು ನನ್ನ ಮೇಲೆ ಸರಿಕಾಣುತ್ತವೆಯೇ? ಭಕ್ತಿ ಭಾವನೆಯನ್ನು ನನ್ನ ಕಣ್ಣಿನ ಮೂಲಕವೇ ತೋರಿಸಲು ಸಾಧ್ಯವೇ? ಇಂತಹ ಛಾಲೆಂಜಿಂಗ್ ಪಾತ್ರವನ್ನು ನಾನು ಇಷ್ಟು ಬೇಗ ಮಾಡುವ ಅಗತ್ಯವಿದೆಯೇ? ಎಂದೆಲ್ಲಾ ನಾನು ಗಂಭೀರವಾಗಿ ಆಲೋಚಿಸಿದೆ. ಕೊನೆಗೆ "ಅಮ್ಮ, ಈ ಚಿತ್ರದ ಬದಲು ಬೇರೆ ಚಿತ್ರವೊಂದನ್ನು ಆಲೋಚನೆ ಮಾಡಿ" ಎಂದಿದ್ದೆ. ಆದರೆ ಅಮ್ಮನಿಗೆ ನಾನು ಈ ಪಾತ್ರ ಮಾಡಬೇಕೆಂಬ ಆಸೆಯಿತ್ತು. ಅಪ್ಪಾಜಿ ಬಳಿ ಕೇಳಿದೆ. "ಕಂದಾ... ನೀನು ಮಾಡು. ನಿನ್ನಿಂದ ಸಾಧ್ಯವಿದೆ. ಇದರ ಫಲಿತಾಂಶವನ್ನು ಪ್ರೇಕ್ಷಕರಿಗೆ ಬಿಟ್ಟುಬಿಡು. ನಿಷ್ಠೆಯಿಂದ ಪಾತ್ರ ಮಾಡು" ಎಂದು ಧೈರ್ಯ ತುಂಬಿದರು.

ಆದಾದನಂತರ ನಾನು ಹಿಂತಿರುಗಿ ನೋಡಲಿಲ್ಲ, ಆದರೆ ಯಾವಾಗ ಅಪ್ಪಾಜಿ ಕೂಡ ಈ ಚಿತ್ರದಲ್ಲಿ ನಟಿಸುತ್ತಾರೆ ಎಂದರೋ ಆಗ ಮತ್ತೊಮ್ಮೆ ಹಿಂಜರಿದೆ. ಈ ಚಿತ್ರದ ಇನ್ನೊಂದು ವಿಶೇಷತೆ ಯಾವುದೆಂದರೆ ನನ್ನ ಸಹೋದರ ಅಪ್ಪು (ಪುನೀತ್) ಅದರಲ್ಲಿ ನನ್ನ ಬಾಲ್ಯದ ಪಾತ್ರವನ್ನು ನಿರ್ವಹಿಸಿದ್ದು. ಅಷ್ಟೊತ್ತಿಗೆಲ್ಲಾ ಬಾಲನಟನಾಗಿ ದೊಡ್ಡ ಸ್ಟಾರ್ ಆಗಿದ್ದ ಆತ ಕೂಡ ನಟಿಸುತ್ತಿದ್ದಾನೆ ಎಂದು ಗೊತ್ತಾದಾಗ ಸಂತೋಷವಾಯಿತು.

ನನ್ನ ಮೊದಲ ಮೂರು ಚಿತ್ರಗಳು ಹಿಟ್ ಆಗಿದ್ದರೂ ಅಪ್ಪಾಜಿ ಜೊತೆ ನಟಿಸಬೇಕಿದ್ದ 'ಶಿವಮೆಚ್ಚಿದ ಕಣ್ಣಪ್ಪ' ಆರಂಭವಾಗುವ ಮುನ್ನವೇ ನಾನು ಸಿಕ್ಕಾಪಟ್ಟೆ ಟೆನ್ಷನ್‌ಗೆ ಒಳಗಾದೆ. ಈ ನಾಲ್ಕನೇ ಚಿತ್ರ ನನ್ನ ಪಾಲಿಗೆ ಅಗ್ನಿ ಪರೀಕ್ಷೆಯಾಯಿತು. ಇಷ್ಟು ಚಿಕ್ಕ ವಯಸ್ಸಿನಲ್ಲಿ ನಾನು ಇಂತಹ ಒಂದು ಪರೀಕ್ಷೆಯನ್ನು ಎದುರಿಸಬೇಕಾಗಿದ್ದುದು ನನ್ನ ಅದೃಷ್ಟವೂ ಹೌದು, ದುರಾದೃಷ್ಟವೂ ಹೌದು....

ಕನ್ನಡ ಚಿತ್ರರಂಗದ ಬಹುತೇಕ ಎಲ್ಲ ನಾಯಕ ನಾಯಕಿಯರು ಡಾ. ರಾಜ್‌ಕುಮಾರ್ ಜೊತೆ ನಟಿಸಬೇಕೆಂದು ಕನಸು ಕಾಣುತ್ತಾರೆ. ಆದರೆ ಅಂತಹ ಕನಸು ಕಂಡಿರದಿದ್ದ ನನಗೆ ಆ ಅವಕಾಶ ಸಿಕ್ಕಿತ್ತು. ಅವರ ಮಗನಾದ ಕಾರಣ ಈ ಅವಕಾಶ ನನಗೆ ಸುಲಭವಾಗಿ ಸಿಕ್ಕಿದ್ದರೂ, ಅದರೊಂದಿಗೆ ಭಯ, ಗೊಂದಲ ಮತ್ತು ಆತಂಕವೂ ನನ್ನ ಪಾಲಾಗಿತ್ತು.


ಇಡೀ ಕನ್ನಡ ಚಿತ್ರರಂಗವೇ ಮೆಚ್ಚಿದ್ದ ಆ ಮಹಾನ್ ನಟನ ಎದುರು ನಾನು ಹುಲು ಮಾನವ. ನನ್ನ ಮೂರು ಚಿತ್ರಗಳು ಸಿಲ್ವರ್ ಜ್ಯೂಬಿಲಿ ಆಚರಿಸಿದ್ದರೂ ಸಹ ನನಗೆ ನನ್ನ ದೌರ್ಬಲ್ಯಗಳು ಗೊತ್ತಿದ್ದವು. ಹೀಗಾಗಿ ಆ ಅಂಜಿಕೆ....

ಈ ಹಿಂದೆ, ಅಪ್ಪಾಜಿ ನಟಿಸುತ್ತಿದ್ದಾಗ ಚಿತ್ರೀಕರಣ ನೋಡಲು ನಾನು ಹೋಗುತ್ತಿದ್ದೆ. ಹಾಗೆಯೇ ನನ್ನ ಮೊದಲ ಮೂರು ಚಿತ್ರಗಳು ನಡೆಯುತ್ತಿದ್ದಾಗ ನನ್ನನ್ನು ನೋಡಲು ಅಪ್ಪಾಜಿ ಬರುತ್ತಿದ್ದರು. ಆದರೆ ಈ ಬಾರಿ ನಾವಿಬ್ಬರೂ ಅಪ್ಪ-ಮಗ ಎಂಬುದನ್ನು ಮರೆತು ಪರಸ್ಪರ ಪೈಪೋಟಿಯ ನಟನೆ ನೀಡಬೇಕಾಗಿತ್ತು.

ಅಂತೂ, ಇಂತೂ ಶೂಟಿಂಗ್ ಆರಂಭವಾಯಿತು. ನಾನು ಅಪ್ಪಾಜಿ ಜೊತೆ- ಕ್ಷಮಿಸಿ ಡಾ. ರಾಜ್‌ಕುಮಾರ್ ಜೊತೆ- ಫೈಟಿಂಗ್ ಮಾಡುವ ದೃಶ್ಯವನ್ನು ನಿರ್ದೇಶಕರು ಸಂಯೋಜಿಸಿದ್ದರು. ಆ ಸಂದರ್ಭದಲ್ಲಿ ಫೈಟ್ ಮಾಸ್ಟರ್ ಶಿವಯ್ಯ ನನ್ನ ಬಳಿ ಬಂದು "ಇನ್ನಷ್ಟು ಸಿಟ್ಟಿನಿಂದ ನೀನು ಎದುರಾಳಿ ಜೊತೆ ಫೈಟ್ ಮಾಡಬೇಕು" ಎಂದು ಹುರಿದುಂಬಿಸಿದರು. ಆಗ ನಾನು ಕಣ್ಣೆತ್ತಿ ಅಪ್ಪಾಜಿ ಕಡೆ ನೋಡಿದರೆ, ಅವರು- ಅಂದರೆ ಡಾ. ರಾಜ್‌ಕುಮಾರ್ ಅವರು - ಸಿಟ್ಟಿನಿಂದ ಕುದಿಯುತ್ತಾ ಶಾಟ್‌ಗಾಗಿ ಕಾಯುತ್ತಿದ್ದರು. ಅದನ್ನು ನೋಡಿದಾಕ್ಷಣ ನಾನು ಚಿತ್ರೀಕರಣ ಮರೆತು ಜೋರಾಗಿ ನಗಲು ಆರಂಭಿಸಿದೆ. ಆಗ ಎಲ್ಲರೂ ನಗಲಾರಂಭಿಸಿದರು. ಯಾರು ಎಷ್ಟೇ ಹುರಿದುಂಬಿಸಿದರೂ ನನಗೆ ಸಿಟ್ಟು ಬರುತ್ತಿರಲಿಲ್ಲ, ಇದು ಸ್ವಲ್ಪ ಹೊತ್ತು ಹೀಗೆ ಮುಂದುವರಿದಾಗ, ಅಪ್ಪಾಜಿ ನನ್ನ ಹತ್ತಿರ ಬಂದು "ಯಾಕೆ ನಗುತ್ತಿದ್ದಿಯಾ ಕಂದಾ...." ಎಂದು ಪ್ರೀತಿಯಿಂದಲೇ ಕೇಳಿದರು. "ಅಪ್ಪಾಜಿ ನಿಮ್ಮ ಜೊತೆ ಫೈಟಿಂಗ್ ಮಾಡುವುದನ್ನು ನಾನು ಕನಸಿನಲ್ಲೂ ಕಂಡಿಲ್ಲಾ...ಅಂತಹದರಲ್ಲಿ ಇಷ್ಟು ಜನರ ಮುಂದೆ ನಿಮ್ಮೊಂದಿಗೆ ಹೇಗೆ ಫೈಟಿಂಗ್ ಮಾಡಲಿ" ಎಂದು ನನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದೆ. ಆಗ ಡಾ. ರಾಜ್ ಹೇಳಿದ್ದು ಇಷ್ಟೇ:

ನಿರೂಪಣೆ: ಸದಾಶಿವ ಶೆಣೈ

32



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

"ನಾನು ಮನೆಯಲ್ಲಿ ಮಾತ್ರ ನಿನ್ನ ಅಪ್ಪಾಜಿ. ಇಲ್ಲಿ ನಾನು ನಿನ್ನ ಎದುರಾಳಿ. ನಿನ್ನಿಂದ ಎಷ್ಟು ಸಾಧ್ಯವೋ ಅಷ್ಟು ನೀನು ನನ್ನೊಂದಿಗೆ ಹೋರಾಡಬೇಕು. ಆಗಲೇ ನೀನು ಹೀರೋ ಆಗಿ ಎಸ್ಟಾಬ್ಲಿಷ್ ಆಗಲು ಸಾಧ್ಯ..."

ಅಲ್ಲಿಯತನಕ ಹದಿನೈದು ಬಾರಿ ಆ ಟೇಕ್ ಅನ್ನು ತೆಗೆದಿದ್ದರೂ ಅದು ಸರಿಯಾಗಿ ಮೂಡಿಬಂದಿರಲಿಲ್ಲ. ಆದರೆ ಯಾವಾಗ ನನ್ನ ಸಹೋದ್ಯೋಗಿ ಡಾ. ರಾಜ್ ನನ್ನ ಮನಸ್ಸಿನಲ್ಲಿ ಧೈರ್ಯ ತುಂಬಿದರೋ, ನನ್ನ ಎದುರು ನಿಂತಿರುವವರು ನನ್ನ ಅಪ್ಪಾಜಿ ಎಂಬುದನ್ನು ಮರೆತು ನಾನು ಪಾತ್ರದಲ್ಲಿ ಮಗ್ನನಾದೆ. ಆ ಅಗ್ನಿಪರೀಕ್ಷೆಯಲ್ಲಿ ಪಾಸ್ ಆಗಲು ಡಾ. ರಾಜ್ ನನಗೆ ಸಹಾಯ ಮಾಡಿದ್ದರು!

ಆಗಲೇ, ಡಾ. ರಾಜ್‌ಕುಮಾರ್ ಅವರನ್ನು ಚಿತ್ರರಂಗದಲ್ಲಿ ಯಾಕೆ ಎಲ್ಲರೂ ಇಷ್ಟಪಡುತ್ತಾರೆ ಎಂಬ ಪ್ರಾಕ್ಟಿಕಲ್ ಅನುಭವ ನನಗಾಗಿದ್ದು. ತನ್ನ ಸಹೋದ್ಯೋಗಿಗಳು ಸಮಸ್ಯೆ ಎದುರಿಸುತ್ತಿದ್ದಾಗ ಅವರಿಗೆ ನೋವಾಗದಂತೆ, ಅವಮಾನವಾಗದಂತೆ ಅವರಿಗೆ ನೆರವಾಗುತ್ತಿದ್ದರು. ಹೀಗೆ ಅವರಿಂದ ನಟನೆಂಬ ಪಾಠ ಕಲಿತ ಹಲವಾರು ನಟ-ನಟಿಯರಲ್ಲಿ ನಾನೂ ಒಬ್ಬನಾದೆ ಎಂಬ ಸಂತೋಷ ನನಗಿದೆ.

ಮುತ್ತತ್ತಿಯಲ್ಲಿ ಆ ಚಿತ್ರದ ಶೂಟಿಂಗ್ ನಡೆಯುತ್ತಿದ್ದಾಗ ಪ್ರತಿದಿನ ಪ್ಯಾಕ್ ಅಪ್ ನಂತರ ಅಲ್ಲೇ ಇದ್ದ ಕಾವೇರಿ ನದಿಗೆ ನಮ್ಮನ್ನೆಲ್ಲ ಅಪ್ಪಾಜಿ ಕರೆದುಕೊಂಡು ಹೋಗುತ್ತಿದ್ದರು... ಅಪ್ಪಾಜಿ ತಮ್ಮ ಪಂಚೆ ಮತ್ತು ಶರ್ಟನ್ನು ತೆಗೆದು, ತೊಡೆಯನ್ನು ತಟ್ಟಿ, ನೇರವಾಗಿ ನೀರಿಗೆ ಧುಮುಕುತ್ತಿದ್ದರು. ಹಾಗೆ ಧುಮುಕಿದ ನಂತರ ನನಗೂ ಹಾರುವಂತೆ ಸವಾಲು ಹಾಕುತ್ತಿದ್ದರು. ನಾನು ಕೂಡ ಅವರಂತೆಯೇ ಪ್ಯಾಂಟು-ಶರ್ಟು ತೆಗೆದು ಡೈವ್ ಹೊಡೆಯುತ್ತಿದ್ದೆ. ನಾವಿಬ್ಬರೂ ನೀರಿಗೆ ಬಿದ್ದಾಕ್ಷಣ ಉಳಿದವರೆಲ್ಲಾ ನೀರಿಗೆ ಧುಮುಕುತ್ತಿದ್ದರು. ಕ್ಷಣ ಮಾತ್ರದಲ್ಲಿ 'ಶಿವಮೆಚ್ಚಿದ ಕಣ್ಣಪ್ಪ' ಚಿತ್ರದ ತಂಡ ಕಾವೇರಿ ನದಿಯಲ್ಲಿ ಈಜಾಡುತ್ತಿತ್ತು.

ಇನ್ನೊಂದು ವಿಷಯ ಗೊತ್ತಾ: ನಾವ್ಯಾರೂ ಸ್ವಿಮಿಂಗ್‌ನಲ್ಲಿ ಅವರನ್ನು ಓವರ್‌ಟೇಕ್ ಮಾಡಲಾಗುತ್ತಿರಲಿಲ್ಲ, ನೀರಿನಲ್ಲೇ ಪಲ್ಟಿ ಹೊಡೆಯೋದರಲ್ಲಾಗಲೀ, ಫ್ರೀ ಸ್ಟೈಲ್ ಮತ್ತು ಬ್ಯಾಕ್ ಸ್ಟ್ರೋಕ್ ಸ್ವಿಮ್ ಮಾಡುವುದರಲ್ಲಾಗಲೀ ಅಪ್ಪಾಜಿ ನಮಗಿಂತಾ ಮುಂದಿದ್ದರು. ಅಪ್ಪಾಜಿ ಅಷ್ಟು ಚೆನ್ನಾಗಿ ಸ್ವಿಮ್ಮಿಂಗ್ ಮಾಡುತ್ತಾರೆ ಅಂತ ನನಗೆ ಗೊತ್ತಾಗಿದ್ದೇ ಆಗ. ಹೀಗಾಗಿ ಆ ದಿನಗಳಲ್ಲಿ ಯಾವಾಗ ಶೂಟಿಂಗ್ ಮುಗಿದು ಕಾವೇರಿ ನದಿಯಲ್ಲಿ ಸ್ನಾನ ಮಾಡುತ್ತೇವೋ ಎಂದು ಎಲ್ಲರೂ ಕಾಯುತ್ತಿದ್ದೆವು.

ಮನೆಯಲ್ಲಿ ನಾನು ಅವರ ಪ್ರೀತಿಯ ಮಗ. ಸೆಟ್ಟಿಗೆ ಬಂದಾಕ್ಷಣ ನಮ್ಮಿಬ್ಬರ ನಡುವೆ ನಟನೆಯ ಪೈಪೋಟಿ. ಸಾಯಂಕಾಲ ಫ್ರೆಂಡ್ಸ್ ಥರ ನದಿಯಲ್ಲಿ ಈಜು. ರಾತ್ರಿ ಪುನಃ ಎಲ್ಲರೊಂದಿಗೆ ಒಂದೇ ಟೇಬಲ್ಲಿನಲ್ಲಿ ಊಟ. ಅಪ್ಪಾಜಿ ಜೊತೆಗಿನ ಆ ಒಡನಾಟ, ಕಾವೇರಿ ನದಿ ತೀರದಲ್ಲಿ ನಾವು ಎಂಜಾಯ್ ಮಾಡಿದ್ದನ್ನು ಎಂದಿಗೂ ಮರೆಯಲು ಸಾಧ್ಯವೇ ಇಲ್ಲ.

ನಾನು ಆ ಕ್ಷಣ, ಆ ದಿನಗಳನ್ನು ನೆನೆಸಿಕೊಂಡರೆ ಅಪ್ಪಾಜಿಯನ್ನು ಮಿಸ್ ಮಾಡುತ್ತೇನೆ (ಹೀಗೆ ಹೇಳುತ್ತಿದ್ದಂತೆ ಶಿವರಾಜ್‌ಕುಮಾರ್ ತಮಗರಿವಿಲ್ಲದಂತೆ ಕಣ್ಣೀರು ಹಾಕಲು ಶುರು ಮಾಡಿದರು. ಆನಂತರ ಒಂದು ಟೀ ಕುಡಿದು ಸುಧಾರಿಸಿಕೊಂಡರು).

ಆ ಚಿತ್ರದಲ್ಲಿ ನಡೆದ ಒಂದು ಘಟನೆ ನನಗೆ ಪುನರ್‌ಜನ್ಮ ನೀಡಿತು. ನಾನು ಪದ್ಮಾ ಕುಮಟಾ ಅವರನ್ನು ಬೆಂಕಿಯಿಂದ ಪಾರು ಮಾಡುವ ದೃಶ್ಯವೊಂದರಲ್ಲಿ ಭಾಗವಹಿಸಿದಾಗ ನಡೆದ ಅನಾಹುತವನ್ನು ಇಲ್ಲಿ ಹೇಳಲೇಬೇಕು. ನಾನು ಇಂತಹ ದೃಶ್ಯಗಳಲ್ಲಿ ಡ್ಯೂಪನ್ನು ಬಳಸುತ್ತಿರಲಿಲ್ಲ. ಸ್ವತಃ ನಾನೇ ನಟಿಸುತ್ತಿರುವುದನ್ನು ನೋಡಿ ಸೆಟ್ ಹುಡುಗರು ಉತ್ಸಾಹಗೊಂಡಿದ್ದರು. ಹೀಗಾಗಿ ಆ ದೃಶ್ಯ ಸಹಜವಾಗಿ ಮೂಡಿ ಬರಲಿ ಎಂದು ಬೆಂಕಿಗೆ ಸ್ವಲ್ಪ ಹೆಚ್ಚು ಕಟ್ಟಿಗೆ ಮತ್ತು ಸೀಮೆಎಣ್ಣೆಯನ್ನು ಸುರಿದಿದ್ದರು. ನಿರ್ದೇಶಕರು ಸ್ಟಾರ್ಟ್ ಎಂದಾಕ್ಷಣ ಆ ಕಟ್ಟಿಗೆಗೆ ಬೆಂಕಿ ನೀಡಿದರು. ನೋಡಿದರೆ ಒಮ್ಮೆಲೇ ನಾಲ್ಕೂ ಕಡೆಯಿಂದ ಬೆಂಕಿಯ ಜ್ವಾಲೆ ಹತ್ತಿಕೊಂಡಿತು. ನನಗೆ ಹೊರಗೆ ಬರಲು ಸ್ಥಳವೇ ಕಾಣಿಸಲಿಲ್ಲ. ಪದ್ಮಾ ಕುಮಟಾ ಅವರನ್ನು ನನ್ನ ಹೆಗಲಿಗೇರಿಸಿ ಬೆಂಕಿಯ ಜ್ವಾಲೆಯಿಂದ ತಪ್ಪಿಸಿಕೊಂಡು ಹೊರಬರಬೇಕಿತ್ತು. ಹೊರಗಡೆ ಎಲ್ಲರೂ "ಶಿವಣ್ಣ ... ಬೇಗ ಬಾ, ಬೇಗ ಬಾ..." ಎಂದು ಬೊಬ್ಬೆ ಹಾಕುತ್ತಿದ್ದರು. ಪದ್ಮಾ ಕುಮಟ ಕೂಡ "ನನ್ನ ಮೈ ಬಿಸಿಯಾಗುತ್ತಿದೆ ಶಿವಣ್ಣ ದಯವಿಟ್ಟು ಬೇಗ ಓಡಿಹೋಗು" ಎಂದು ಅಳುತ್ತಿದ್ದರು. ನನಗೆ ಏನು ಮಾಡಬೇಕೆಂದೇ ಗೊತ್ತಾಗಲಿಲ್ಲ. ಆಗ ಏನಾಯಿತು ಗೊತ್ತೇ?....

(ಮುಂದುವರೆಯುವುದು)


ಇದು ತಮಿಳರ ಕನ್ನಡ ಸಿನಿಮಾನಾ

'ಸೋಜನಿ' ಎಂಬ ಚಿತ್ರವನ್ನು ನಂಜುಂಡೇಗೌಡ ನಿರ್ದೇಶಿಸಿದ್ದಾರಂತೆ. ಅದಕ್ಕೆ ಖ್ಯಾತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಸಂಗೀತ ನೀಡಿಲ್ಲವಂತೆ. ಹಾಗಾದರೆ ಈಗ ಸಂಪೂರ್ಣಗೊಂಡಿರುವ ಈ ಚಿತ್ರದ ಸೃಷ್ಟಿಕರ್ತ ಯಾರು? ಈ ಪ್ರಶ್ನೆಗೆ ಮೊನ್ನೆ ಅದರ ನಿರ್ಮಾಪಕರಾದ ಮಾಂಡ್ರೆ ಉತ್ತರ ನೀಡಿದ್ದು ಹೀಗೆ: "ನಂಜುಂಡೇಗೌಡರು ಈ ಚಿತ್ರದ ಕೋ-ಆರ್ಡಿನೇಟರ್ ಅಷ್ಟೇ. ಇಂಗ್ಲೆಂಡಿನಲ್ಲಿ ಚಿತ್ರೀಕರಣಗೊಂಡ ಇದನ್ನು ನಿರ್ದೇಶಿಸಿದ್ದು ತಮಿಳಿನ ಗುಣಶೇಖರನ್." ಈ ಗುಣಶೇಖರನ್ ಎಂಬಾತ ತಮಿಳುನಾಡಿನಲ್ಲೂ ಅನಾಮಿಕ.

ಅದಿರಲಿ, ಈ ಚಿತ್ರಕ್ಕೆ ರೆಹಮಾನ್ ಸಂಗೀತ ನೀಡಿದ್ದಾರೆಯೇ ಎಂದು ನೋಡಿದರೆ, ಅದಕ್ಕೆ ಉತ್ತರ: ನೀಡಿಲ್ಲ, ಆದರೆ ನೀಡಿದ್ದಾರೆ. ಈ ದ್ವಂದ್ವದ ಹಿಂದಿನ ಸತ್ಯ ಏನೆಂದರೆ, ರೆಹಮಾನ್ ಈ ಚಿತ್ರಕ್ಕೆಂದೇ ಸಂಗೀತ ಸಂಯೋಜಿಸಿಲ್ಲ, ಬದಲಾಗಿ ಅವರು 'ಜೋಡಿ' ಎಂಬ ತಮಿಳು ಚಿತ್ರಕ್ಕಾಗಿ ಸಂಯೋಜಿಸಿದ್ದ ಹಾಡಿನ ಟ್ಯೂನುಗಳನ್ನೇ ಈ ಚಿತ್ರಕ್ಕೆ ನೀಡಿದ್ದಾರೆ.

ಕನ್ನಡ ಚಿತ್ರರಂಗ ಯಾವ ಮಟ್ಟಕ್ಕೆ ಬಂತು ನೋಡಿ. ಏನೂ ಗೊತ್ತಿಲ್ಲದವರು ಸಿನಿಮಾ ನಿರ್ದೇಶಿಸುತ್ತಾರೆ, ನಟಿಸುತ್ತಾರೆ, ಸಂಗೀತ ನೀಡುತ್ತಾರೆ. ಅದನ್ನು ಕನ್ನಡ ಸಿನಿಮಾ ಅಂತ ನಮ್ಮ ಜನ ನೋಡುತ್ತಾರೆ. ಇನ್ನು ಉದ್ಧಾರ ಆಗಬೇಕು ಎಂದರೆ ಹೇಗೆ?

ಕಲ್ಲೋ, ಹೂವೋ?




ಮುಂದಿನವಾರ ನಾಗಾಭರಣ ನಿರ್ದೇಶನದ 'ಕಲ್ಲರಳಿ ಹೂವಾಗಿ' ಬಿಡುಗಡೆಯಾಗಲಿದೆ.

ಈ ಚಿತ್ರದ ಮುಖಾಂತರ ಗಾಂಧಿನಗರದಲ್ಲಿ ಅನೇಕರಿಗೆ ಪುನರ್ಜನ್ಮ ಸಿಗಲಿದೆಯೇ ಎಂಬ ಕುತೂಹಲ ಇದೆ. ಸುಮಾರು ಮೂರು ವರ್ಷದ ನಂತರ ನಾಗಾಭರಣ ಅವರ ಚಿತ್ರವೊಂದು ತೆರೆಕಾಣುತ್ತಿದೆ. ಈ ಚಿತ್ರದ ಮುಖಾಂತರ ಚೊಚ್ಚಲ ನಿರ್ಮಾಪಕನಾಗಿ ಕಾಲಿಟ್ಟಿರುವ ಮಧು ಬಂಗಾರಪ್ಪ ಅವರ ಅದೃಷ್ಟವೂ ಗೊತ್ತಾಗಬೇಕಾಗಿದೆ.

ಇದಕ್ಕಿಂತ ಮುಖ್ಯವಾಗಿ 'ಗಂಡುಗಲಿ ಕುಮಾರರಾಮ' ಚಿತ್ರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ ಪ್ರೇಕ್ಷಕ ಮಹಾಪ್ರಭು ಈ ಚಿತ್ರವನ್ನು ಹೇಗೆ ಸ್ವೀಕರಿಸುತ್ತಾನೆ ಎಂಬ ಭಯ ಎಲ್ಲರಲ್ಲಿದೆ. 'ಕಲ್ಲರಳಿ ಹೂವಾಗಿ' ಚಿತ್ರದಿಂದ ಗಾಂಧಿನಗರಕ್ಕೆ ಕಲ್ಲು ಸಿಗುತ್ತದೋ? ಹೂವು ಸಿಗುತ್ತದೋ? ನೋಡಬೇಕು.

ಅಂದಹಾಗೆ ಈ ಚಿತ್ರದ ಮುಖಾಂತರ ಗುರುಕಿರಣ್ ಮತ್ತು ಹಂಸಲೇಖ ನಡುವಿನ ಯುದ್ಧದ ಫಲಿತಾಂಶವೂ ಹೊರಬರಲಿದೆ. 'ಗಂಡುಗಲಿ' ಸೋಲಲು ಗುರುಕಿರಣ್ ಅವರ ಸಂಗೀತವೂ ಒಂದು ಕಾರಣ ಎಂದು ತರ್ಕಿಸಲಾಗಿತ್ತು, ಈಗ 'ಕಲ್ಲರಳಿ' ಹೂವಾಗದಿದ್ದರೆ ಹಂಸಲೇಖರೂ ಕಾರಣರಾಗುತ್ತಾರಾ?

ರಕ್ಷಿತಾಳ ಪ್ರೇಮವೂ, ವೆಂಕಟೇಶನ ಪ್ರಲಾಪವೂ



'ಕನ್ನಡಕ್ಕೊಬ್ಬನೇ ನಿರ್ದೇಶಕ, ಅದು ಪ್ರೇಮ್' ಎಂದು ಹೇಳಿರುವ ರಕ್ಷಿತಾ ಅನಗತ್ಯವಾಗಿ ವಿವಾದದಲ್ಲಿ ಸಿಕ್ಕಿಕೊಂಡಿದ್ದಾಳೆಯೇ?

ಅಥವಾ ಟೇಶಿ ವೆಂಕಟೇಶ್ ಎಂಬ ಒಂದೂವರೆ ಚಿತ್ರದ ನಿರ್ದೇಶಕ ರಕ್ಷಿತಾಳ ಹೆಸರಿನಲ್ಲಿ ಪುಕ್ಕಟೆ ಪ್ರಚಾರ ಗಿಟ್ಟಿಸಲು ಯತ್ನಿಸುತ್ತಿದ್ದಾನೆಯೇ?

ಯಾಕೆಂದರೆ ರಕ್ಷಿತಾಳ ಹೇಳಿಕೆಯನ್ನು ವಿರೋಧಿಸಿ ಇಲ್ಲಿಯವರೆಗೂ ಯಾವ ನಿರ್ದೇಶಕ/ಕಿ ಪ್ರತಿಭಟಿಸದಿದ್ದರೂ, ಪತ್ರಿಕಾಗೋಷ್ಠಿ ಕರೆದ ಈ ವೆಂಕಟೇಶ್ ಎಂಬ ಅನಾಮಿಕ ಆಸಾಮಿ ಇದೊಂದು "ರಾಷ್ಟ್ರ ದುರಂತ" ಎಂಬಂತೆ ಕೂಗಾಡಿದ್ದಾನೆ.

ಅದೆಲ್ಲ ಇರಲಿ, ರಕ್ಷಿತಾ ಕೂಡ ತನ್ನ 'ಪ್ರೇಮ'ವನ್ನು ಮರೆಯುವುದಕ್ಕೂ ಒಂದು ಮಿತಿ ಅನುಸರಿಸಿದರೆ, ಆಕೆಗೂ, ಅವಳ ಪ್ರೇಮ್-ಗೂ ಕ್ಷೇಮ!

ಅಮೆರಿಕನ್ನಡಿಗರ ಸ್ವರ್ಗದ ಟಿಕೆಟ್

ಭಾರತೀಯರಿಗೆ ಅಮೆರಿಕದಲ್ಲಿ ವಾಸಿಸಲು ಬೇಕಿರುವ 'ಗ್ರೀನ್ ಕಾರ್ಡ್' ಸಿಕ್ಕರೆ ಅದು ಸ್ವರ್ಗಕ್ಕೇ ಟಿಕೆಟ್ ಪಡೆದಂತೆ. ಆ ಕಾರ್ಡ್ ಪಡೆಯಲು ಅವರು ಅನುಭವಿಸುವ ಪಾಡು, ಎದುರಿಸುವ ಸಂಕಷ್ಟ ಅಷ್ಟಿಷ್ಟಲ್ಲ! ಈಗ ಇದನ್ನು ಕುರಿತಂತೆ ಅಮೆರಿಕದ ನಿವಾಸಿ ಆಗಿರುವ ರಾಘವ ರೆಡ್ಡಿ ಎಂಬುವವರು ತಮ್ಮ ಹೈ ಡೆಫಿನಿಷನ್ ಕ್ಯಾಮರಾದಲ್ಲಿ 'ವೀಸಾ ಮದುವೆ' ಎಂಬ ಸಿನಿಮಾವನ್ನು ತಯಾರಿಸಿದ್ದಾರೆ. ವಿಜ್ಞಾನಿಯಾಗಿರುವ ರೆಡ್ಡಿಯವರು ಇದರಲ್ಲಿ ಸೆರೆಹಿಡಿದಿರುವ ಅಮೆರಿಕದ ನೈಸರ್ಗಿಕ ದೃಶ್ಯಗಳು ಸುಂದರವಾಗಿವೆ.

ಇದೊಂದು ಪ್ರಯೋಗಾತ್ಮಕ ಚಿತ್ರವಾಗಿದ್ದು ಇದನ್ನು ಥಿಯೇಟರ್‌ಗಳ ಬದಲಿಗೆ ಹೋಂ ಥಿಯೇಟರ್‌ನಲ್ಲಿ ಬಿಡುಗಡೆ ಮಾಡುವ ಸಾಹಸಕ್ಕೆ ಕೈಹಾಕಿದ್ದಾರೆ ರಾಘವ ರೆಡ್ಡಿ. ಅಮೆರಿಕದ ಕನ್ನಡಿಗರ ಈ ಕಿರು ಸಾಹಸ ಮೆಚ್ಚೋಣ.

ಮರುಚುನಾವಣೆಯಲ್ಲಿ ಬಿಜೆಪಿ ಗೆಲ್ಲುವ ಸಾಧ್ಯತೆ ಕಡಿಮೆ. ಅದಕ್ಕಾಗಿ ಅಭ್ಯರ್ಥಿ ನಿಲ್ಲಿಸಲಿಲ್ಲ-ಸದಾನಂದಗೌಡ

ಶ್ರಮ ನಿಷ್ಠಾಯಕ ಮುದುಕನೊಬ್ಬನ ಹೋರಾಟದ ಕತೆ.

ಮನುಷ್ಯನು ಕಾಲಕ್ಕೆ ತಕ್ಕಂತೆ ಬದಲಾಗದೇ ಹೋದರೆ ಹೇಗೆ ನಾಶವಾಗುತ್ತಾನೆಂಬುದಕ್ಕೆ ಚೀನಾದ ಬೀಜಿಂಗ್‌ನ ಶಿಟಾಯ್ ಏರಿಯಾದ 93 ರ ಇಳಿವಯಸ್ಸಿನ ವೃದ್ಧ ಝುನ್ ಮಾತ್ರ ಅಪವಾದದಂತಿದ್ದಾನೆ. ಆತನದು ಕ್ಷೌರಿಕ ವೃತ್ತಿ. ಪುರಾತನ ಕಾಲದ ಕ್ಷೌರದ ಕತ್ತಿ ಮತ್ತು ಅದನ್ನು ಮಸೆಯುವ ಚರ್ಮದ ಪಟ್ಟಿ ಹಿಡಿದು ಸೈಕಲ್ ತಳ್ಳುತ್ತಾ ಬೀದಿಬೀದಿ ಅಲೆಯುವ ಆವನ ಕರ್ಮಕ್ಕೆ ಆತನ ಮಗನೇ ಗೇಲಿ ಮಾಡಿ ನಗುತ್ತಾನೆ. ಆತ ಬೀದಿಯಲ್ಲಿ ನಡೆದುಬರುತ್ತಿದ್ದರೆ ಪಡ್ಡೆ ಹುಡುಗರು 'ಅಲ್ಲಪ್ಪಾ, ಇದನ್ನೆಲ್ಲ ಬಿಸಾಕಿ ಯಾವುದಾದರೂ ವೃದ್ಧಾಶ್ರಮಕ್ಕೆ ಸೇರಿಕೊಬಾರದಾ?' ಎಂದು ಕಿಚಾಯಿಸುತ್ತಾರೆ.

ಚೈನಾ ಬದಲಾಗಿದೆ. ಬೀಜಿಂಗ್‌ನ ಐಷಾರಾಮಿ ಕಾಂಪ್ಲೆಕ್ಸ್‌ಗಳ ಏರ್ ಕಂಡಿಷನ್ಡ್ ಸೆಲೂನ್‌ಗಳೂ, ಮೆನ್ಸ್ ಪಾರ್ಲರ್‌ಗಳೂ ಇದೀ ಯುವ ಪೀಳಿಗೆಗೆ ಹೇರ್‌ಸ್ಟೈಲ್ ಮತ್ತು ಫ್ಯಾಷನ್ ಹುಚ್ಚೆಬ್ಬಿಸಿರುವಾಗ ಈತನ ಪ್ರವಾಹದ ವಿರುದ್ಧದ ಈಜಾಟದ ಕಾರಣಕ್ಕೇ ಝುನ್ ಗೇಲಿಯ ವಸ್ತುವಾಗಿಬಿಟ್ಟಿದ್ದಾನೆ. ಆದರೆ ಝುನ್ ಮಾತ್ರ ಯಾವುದೋ ಪರಮಸತ್ಯವೊಂದನ್ನು ಅರಿತ ಬುದ್ಧನಂತೆ ತನ್ನ ವಿಧಿಯನ್ನೇ ಅಣಕಿಸುತ್ತಿದ್ದಾನೆ. ಈ ಕಂಪ್ಯೂಟರೀಕೃತ ಕ್ಷೌರವನ್ನೇ ಗೇಲಿ ಮಾಡುತ್ತಿರುತ್ತಾನೆ. 'ಅಲ್ಲೋ ಹುಚ್ಚಾ; ಯಂತ್ರಗಳು ಮನುಷ್ಯನಿಗಿಂತಾ ನಯವಾಗಿ ಗಡ್ಡ ಕೆರೆಯುತ್ತವಾ?' ಎಂದು ತನ್ನ ಮಗನನ್ನೇ ಗೇಲಿ ಮಾಡುತ್ತಾನೆ. ಈ ಕಾಲದ ಹುಡುಗರು ಸಿಗದಿದ್ದರೇನಂತೆ, ತನ್ನ ಕಾಲದ ಮುದುಕರನ್ನೇ ಹುಡುಕಿ ಹುಡುಕಿ ಬೀದಿ ಸುತ್ತುತ್ತಾನೆ.

ಆಯಸ್ಸಿದೆ. ನೋಡು ರಿಪೇರಿ ಮಾಡು. ಇದು ಇನ್ನೂ ಏಳು ವರ್ಷ ನಡೆಯಲೇಬೇಕು. ಖಂಡಿತಾ ನಡೆದೇ ನಡೆಯುತ್ತದೆ ಅನ್ನೋ ನಂಬಿಕೆ ನನಗಿದೆ. ನಿಮ್ಮ ಈ ಕಾಲದ ಯಾವುದೇ ಗಡಿಯಾರ ಹೀಗೆ ನೂರು ವರ್ಷ ನಡೆಯುವುದುಂಟಾ?' ಎಂದು ರಿಪೇರಿಯುವವನನ್ನೇ ಕೆಣಕುತ್ತಾನೆ. ವೃದ್ಧನ ಮಾತು ಕೇಳಿದ್ದೇ ರಿಪೇರಿಯುವವನಲ್ಲೂ ಛಲ ಮೂಡುತ್ತೆ, ಮತ್ತೆ ಗಡಿಯಾರದ ಚಲನೆ ಶುರುವಾಗುತ್ತೆ, ಆದರೆ ಅದೇ ವೇಳೆಗೆ ಝುನ್‌ನ ಹಳೇ ಕಾಲದ ಮನೆಯನ್ನು ಕೆಡವಬೇಕೆಂದು ನಗರಸಭೆಯ ಅಧಿಕಾರಿ ಗಂಟು ಬೀಳುತ್ತಾನೆ. ಆತನನ್ನೂ ಝುನ್ ಗೇಲಿ ಮಾಡಿ ಕಳಿಸುತ್ತಾನೆ. ಅಧಿಕಾರಿಯ ಕಣ್ಣಲ್ಲಿ ಝುನ್ ಭೂತಕಾಲದ ಪಳೆಯುಳಿಕೆಯಂತೆ ಕಾಣುತ್ತಾನೆ. ಹಳೇ ಕಾಲದ ಗಡಿಯಾರದ ನಿತ್ರಾಣ ಮುಳ್ಳುಗಳ ಚಲನೆಯಂತೆ ಮುದುಕನ ಬದುಕೂ ಸಾಗುತ್ತದೆ.



ಉನ್ನಾ-ನೂಕ್ ನಿರ್ದೇಶಕಿ ಸಾರಾಸೆಂಟೆಲ್ ಮತ್ತು ಬಾಲನಟಿ ರೋಸಾ ಜೊತೆ ರಾ. ಸೋಮನಾಥ್

ಅದೊಂದು ದಿನ ಇದ್ದಕ್ಕಿದ್ದಂತೆ ಹಳೇ ಗಡಿಯಾರ ನಿಂತು ಬಿಡುತ್ತದೆ. ಅಲ್ಲಿಗೆ ಮುದುಕನೂ ಸತ್ತಿರಬೇಕೆಂದೇ ಪ್ರತಿಯೊಬ್ಬರೂ ಭಾವಿಸುತ್ತಾರೆ. ಆದರೆ ಝುನ್ ಮತ್ತು ಎದ್ದು ಕೂರುತ್ತಾನೆ. ಕೆಟ್ಟ ಗಡಿಯಾರವನ್ನು ಮತ್ತೆ ರಿಪೇರಿಗೆ ಒಯ್ಯುತ್ತಾನೆ. ಏಕೋ ಏನೋ ಮನೆ ಕೆಡವಲು ಬಂದ ಅಧಿಕಾರಿ ಕೂಡ ಕೆಡವಲು ಮನಸ್ಸಾಗದೇ ವಾಪಸ್ಸಾಗುತ್ತಾನೆ.


ಇದು ಗೋವಾದ 37 ನೇ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಸ್ವರ್ಣ ಮಯೂರ ಪ್ರಶಸ್ತಿ ಗಿಟ್ಟಿಸಿದ 'ದಿ ಓಲ್ಡ್ ಬಾರ್ಬರ್' ಚಿತ್ರದ ಸಾರಾಂಶ. ಮುದುಕ ಝುನ್‌ನ ಪಾತ್ರಧಾರಿ ಜಂಗ್ ಕುಯಿಯ ಹೊರತಾಗಿ

ಮಂದಿಯರ ಒಂದು ತಂಡ. ಬೀದಿಯ ಕಸ ಗುಡಿಸುವುದು, ಮನೆಮನೆಯಿಂದ ಕಸದಚೀಲಗಳನ್ನು ಸಂಗ್ರಹಿಸುವುದು ಅವರ [...] ಮೋಜಿಗೆ ಬಿದ್ದು ತಮ್ಮತಮ್ಮಲ್ಲೇ ವಿಚಿತ್ರ ಪಂಥ ಕಟ್ಟಿಕೊಳ[...] ಯಾರಿಗೆ ಯಾವ ಕಸ ಸಿಗುತ್ತದೋ ಅಂಥವರು ಅದೇ [...] ಪೂರೈಸಬೇಕು. ಉದಾಹರಣೆಗೆ ಒಬ್ಬನಿಗೆ ಮದ್ಯದ ಬಾಟಲಿಗಳ[...] ಆತ ಅವತ್ತು ಕುಡಿಯಬೇಕು.

ಈ ಪೈಕಿ ಚಿತ್ರದ ನಾಯಕನಿಗೆ ಅಸ[...] ಯುವತಿಯೊಬ್ಬಳು ತನ್ನ ಸಂಬಂಧಿಗೆ ನೆರವು [...] ಬರೆದ ಪತ್ರವೊಂದು ಸಿಗುತ್ತದೆ. ಆ ಪತ್ರದ [...] ಹಿಡಿದು ಆಕೆಯನ್ನು ಈತ ಸಂಪರ್ಕಿಸುತ್ತಾನೆ. [...] ಸರ್ಕಾರದಿಂದ ಯಾವುದೋ ಕೆಲಸವಾಗ[...] ಈತ ಆಕೆಗೆ ಆ ಕೆಲಸ ಮಾಡಿಕೊಡುತ್ತಾನೆ. ಕವಿಯೊಬ್ಬನ ಮನೆಯಿಂದ ತಂದ ಕಸದ[...] ಬರೆದು ಎಸೆದ ಕವಿತೆಗಳಿರುತ್ತವೆ. ಅದನ್ನೇ [...] ತನ್ನ ಹಸ್ತಾಕ್ಷರದಲ್ಲಿ ಬರೆದು ಆ ಯುವತಿಗೆ [...] ಆಕೆಯ ಮನಸ್ಸು ಗೆಲ್ಲುತ್ತಾನೆ. ಬದುಕಿನಲ್ಲಿ ಬ[...] ಸಿಗದೇ ಹೋದರೂ ಬಯಸಿದ ಪ್ರ[...] ಸಿಗುತ್ತಾಳಲ್ಲ; ಅದಕ್ಕಿಂತ ಇನ್ನೇನು ಬೇಕು?

ಉನ್ನಾ ಅಂಡ್ ನೂಕ್ ಮತ್ತು ಟಣಣಂ... ಟಣಣಂ!

ರಾ. ಸೋಮನಾಥ್



ಉನ್ನಾ ಅಂಡ್ ನೂಕ್

ಮೊಹಮ್ಮದ್ ಅಹಮದಿ ನಿರ್ದೇಶನದ 'ಶಾಯಿರೇ ಜೋಬಾಲೇಹಾ' ಅರ್ಥಾತ್ ತಿಪ್ಪೆಗುಂಡಿಯ ಕವಿ ಚಿತ್ರ ವಸ[...] ವಿಭಿನ್ನವಾದರೂ ಮಹಾನ್ ಸಂದೇಶವಿಲ್ಲವಾದ್ದರಿಂದ ಪ್ರಶ[...] ವಂಚಿತಗೊಂಡಿರಬೇಕು. ಇದ[...] ಜೊತೆ ಇರಾನಿನ ಮತ್ತೊಂ[...] ಚಿತ್ರವಿತ್ತು. ಅದು ಅಸ್ಗರ್ ಫರ್ಹಾದಿಯ 'ಛಾಹರ್ಶಾ[...] ಬೇ ಸೂರಿ'! ಅಂದರೆ works Wedne[...] ಮಡದಿ ಮಗುವಿದ್ದಾಗ್ಯೂ ಸಂಗಕ್ಕಾಗಿ ಹಾತೊರೆಯುವ ಗಂಡನೊಬ್ಬ ಅದ[...] ಪಡುವ ಪೇಚಾ[...] ಮತ್ತು ಪಶ್ಚಾತ್ತಾಪ[...] ಇದರ ತಿರು[...]

ಆ ಊರಿನ ಬಹುತೇಕ ಮುದುಕರಿಗೆ ಝುನ್ ಕೈಯಿಂದಲೇ ಕ್ಷೌರ ಮಾಡಿಸಿಕೊಂಡರೇನೇ ಏನೋ ಸಮಾಧಾನ. ಈ ವೃದ್ಧ ಕ್ಷೌರಿಕ ತಾನು ಗಡ್ಡಕೆರೆಯುವ ಪ್ರತಿ ಮುದುಕನಲ್ಲೂ ಬದುಕಿನ ಭರವಸೆ ತುಂಬುತ್ತಾನೆ. ಈ ಇಳಿವಯಸ್ಸಿನಲ್ಲೂ ಯಾರನ್ನೂ ಅವಲಂಬಿಸದೇ ಹೇಗೆ ಬದುಕಬೇಕೆಂಬುದನ್ನು ಹೇಳಿಕೊಡುತ್ತಾನೆ. ಕೆಲ ಮುದುಕರು ವೃದ್ಧಾಶ್ರಮದ ದಾರಿ ತೊರೆದು ಸಣ್ಣಪುಟ್ಟ ಕೆಲಸಕ್ಕಿಳಿದು ಸಂಪಾದಿಸಲಾರಂಭಿಸುತ್ತಾರೆ.

ದಿ ಓಲ್ಡ್ ಬಾರ್ಬರ್

ಹಳೇ ಹೇರ್‌ಸ್ಟೈಲು, ಹಳೇ ಸೈಕಲ್ಲು, ತನ್ನ ಹಳೇಕಾಲದ ಮನೆ ಮತ್ತು ಝುನ್ ಬಳಿಯಿರುವ ಆ ಪುರಾತನ ಗಡಿಯಾರ; ಎಲ್ಲವೂ ಆತನ ವ್ಯಕ್ತಿತ್ವದ ಸಂಕೇತಗಳೇ. ಇದ್ದಕ್ಕಿದ್ದಂತೆ ಕೆಟ್ಟುನಿಂತ ಆ ಹಳೇ ಗಡಿಯಾರವನ್ನು ರಿಪೇರಿಯುವವನ ಬಳಿ ಕೊಂಡೊಯ್ದರೆ ಆತ ಕೂಡ 'ನಿನಗೇನು ಹುಚ್ಚಾ' ಎನ್ನುತ್ತಾನೆ. ಝುನ್ ಹೇಳುತ್ತಾನೆ; 'ನೋಡು ಇದನ್ನು ನನ್ನ ಅಪ್ಪ ಕೊಂಡಾಗ ನೂರು ವರ್ಷ ಅಂತ ಗ್ಯಾರಂಟಿ ಕೊಟ್ಟಿದ್ದರಂತೆ. ಆ ಲೆಕ್ಕದ ಪ್ರಕಾರವೇ ಇದಕ್ಕೆ ಇನ್ನೂ ಏಳು ವರ್ಷದ

ಮಿಕ್ಕೆಲ್ಲಾ ಪಾತ್ರಕ್ಕೂ ಹೊಸಬರನ್ನೇ ಹಾಕಿಕೊಂಡು ಅಚ್ಚುಕಟ್ಟಾದ ಚಿತ್ರ ಮಾಡಿದ್ದಾರೆ ನಿರ್ದೇಶಕ ಹಸಿಚಾವ್ನ. ಈ ಹಿಂದೆ Stirring trip to Mutuo ಮತ್ತು The story of Zhula ಹೆಸರಿನ ಎರಡೂ ಚಿತ್ರಗಳು ನಿರ್ದೇಶಕ ಹಸಿ ಚಾವ್ನನನ್ನು ಅಂತರರಾಷ್ಟ್ರೀಯ ಮಟ್ಟಕ್ಕೇರಿಸಿದ್ದವು. ಇದೇ ಓಲ್ಡ್ ಬಾರ್ಬರ್ ಚಿತ್ರ ಟೋಕಿಯೋ ಮತ್ತು ಪುಕುವೋಕಾ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲೂ ಪ್ರಶಸ್ತಿ ಗಳಿಸಿತ್ತು. ಈಗ ಗೋವಾ ಪ್ರಶಸ್ತಿಯನ್ನೂ ಓಲ್ಡ್ ಬಾರ್ಬರ್ ಬಾಚಿಕೊಂಡಿದೆ.

ತಿಪ್ಪೆಗುಂಡಿಯ ಕವಿಪುಂಗವ!

ಕಳೆದ ಬಾರಿ ಇರಾನಿನ 'ಐರನ್ ಐಲ್ಯಾಂಡ್' ಚಿತ್ರಕ್ಕೆ ಸ್ವರ್ಣ ಮಯೂರ ಪ್ರಶಸ್ತಿ ಬಂದಿತ್ತು. ಈ ಬಾರಿಯೂ ಇರಾನಿನ ಚಿತ್ರಕ್ಕೇ ಅದರಲ್ಲೂ ಪೊಯೆಟ್ ಆಫ್‌ದಿ ವೇಸ್ಟ್ (Poet of the wastes)ಗೇ ಪ್ರಶಸ್ತಿ ಗ್ಯಾರಂಟಿ ಎಂಬ ನಿರೀಕ್ಷೆಯಿತ್ತು. 'ಪೊಯೆಟ್ ಆಫ್ ದಿ ವೇಸ್ಟ್' ಅಂದರೆ ಕಸದರಾಶಿಯ ಕವಿ ಎಂದರ್ಥ. ಡಾಕ್ಟರ್, ಇಂಜಿನಿಯರ್‌ಗಳಾಗಬೇಕೆಂದು ಕನಸು ಕಂಡಿದ್ದ ಒಂದಷ್ಟು ಮಂದಿ ನಿರುದ್ಯೋಗಿಗಳಿಗೆ ಅಂತಿಮವಾಗಿ ಟೆಹರಾನ್ ನಗರ ಕಾರ್ಪೊರೇಷನ್ನಿನಲ್ಲಿ ಪೌರ ಕಾರ್ಮಿಕರ ಕೆಲಸ ಸಿಗುತ್ತದೆ. ಈ ಪೈಕಿ ಐದು

ಇವುಗಳ ಮಧ್ಯೆಯೇ ಕುತೂಹಲ ಕೆರಳಿಸಿದ್ದು ಫಿನ್[...] ಮಕ್ಕಳ ಚಿತ್ರ ಉನ್ನಾ ಅಂಡ್ ನೂಕ್. ಇದರ ನಿರ್ದೇಶಕಿ[...] ಸೆಂಟಲ್ ಮತ್ತು ನಾಯಕಿ ಹನ್ನೆರಡರ ಬಾಲಕಿ ರೋಸಾ ಸಲ[...] ಖುದ್ದಾಗಿ ಪಣಜಿಗೆ ಬಂದಿದ್ದರು. ತನ್ನ ತಾತನ ಹೃದಯ [...] ಔಷಧಿ ಹುಡುಕುತ್ತಾ ಕಾಡಿಗೆ ಬರುವ ಬಾಲಕಿಯೊಬ್ಬಳಿಗೆ ಅದ[...] ಬಾಲಕನೊಬ್ಬ ನೆರವಾಗುತ್ತಾನೆ. ಪರಸ್ಪರ ಹಗೆಸಾಧಿಸುವ ಎರಡು [...] ಬುಡಕಟ್ಟುಗಳ ನಡುವಿನ ನೀರಿನ ವ್ಯಾಜ್ಯವೊಂದನ್ನು ಬಾಲಕಿ [...] ನಿಂತು ಪರಿಹರಿಸುತ್ತಾಳೆ.

ಮಕ್ಕಳ ಮುಗ್ಧತೆಯ ಮುಂದೆ ಎಂಥಾ ಕಲ್ಲು ಮನಸ್ಸು[...] ಕರಗಿಬಿಡುತ್ತವೆ!

ವಿಚಿತ್ರವೆಂದರೆ ಉನ್ನಾನೂಕ್‌ನ ನಿರ್ದೇಶಕಿ ಸಾರಾ ಸೆಂಟಲ್[...] ಬಾಲನಟಿ ರೋಸಾ ಸಲೋಮಾ ಇಬ್ಬರಿಗೂ ನಮ್ಮ ಕನ್ನಡದ ನ[...] ಕವಿತಾ ಲಂಕೇಶ್ ಹೆಸರು ಚಿರಪರಿಚಿತವಾಗಿತ್ತು, ಲಂಕೇಶ[...] ಕೇಳಿದ್ದೇ Finnish ಮಿಶ್ರಿತ ಇಂಗ್ಲಿಷಿನಲ್ಲಿ 'ಟಣಣಂ ಟಣ[...] ಎಂದು ಅಪಭ್ರಂಶ ನುಡಿಸಿಬಿಟ್ಟರು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676[...]
Fax : 26604536, E-mail :lankesh70@rediffmail.com, Printed at Rajhans Enterprises[...]